Sri H. K. VEERANNA GOWDH.—All that is in the Report itself. It is mentioned in the document which is a published document.

Mr. SPEAKER.—Question time is over.

QUESTIONS FOR ANSWERS ON THE DAY

(but not taken up)

Temporary Work Establishment in Public Works Department

Q.—3481. Sri T. PARTHASARATHY (Malleswaram).—

Will the Government be pleased to state:—

(*a*) whether it is a fact that the temporary establishment of the Public Works Department have not been given the benefits given to the Non-Gazetted Officials, as per G.O. No. Fl. 2010-70-S and A 25-47-6, dated 21st September 1957;

(*b*) whether it is a fact that the new scales and D.A. as per G.O. No. (B) 14034-14173/Bud. 119-56-3, dated 25th January 1957, have not been sanctioned to the temporary establishment of the Public Works Department;

(*c*) whether it is a fact that the interim relief to all Government Employees as per G.O. No. Fl. (B) 10291-10390/Bud. 95-56-1, dated 16th October 1956, have not been given to the Temporary Establishment of the Public Works Department?

A.—Sri H. K. VEERANNA GOWDH (Minister for Public Works).—

(*a*) No. (It is presumed that the question relates to work-charged establishment in the Public Works Department in former Mysore).

(*b*) Yes.

(*c*) Yes.

Removal of tombs of Muslims by the Gram Panchayat of Motebennur.

Q.—3490. Sri F. H. MOHSIN (Hubli City).—

Will the Government be pleased to state:—

(*a*) whether it is a fact that the Grampanchayat of Motebennur in Byadgi Mahal has been trying to remove the tombs of Muslims from the graveyards;

(*b*) whether it is a fact that the said Grampanchayat is intending to take forceful and illegal possession of the Idgah of Muslims;

(*c*) whether representations have been made by the local Muslims to the Chief Minister, and the Collector, Dharwar district, in this respect;

(*d*) whether they are aware that owing to this act of the Grampanchayat, there is great unrest amongst the Muslims of the locality;

(*e*) the action taken by them so far in preventing the Grampanchayat from removing tombs;

(*f*) the action they intend to take in future?

A.—Sri R. CHENNIGARAMAIAH (Minister for Local Self-Government).—

(*a*) No.

(*b*) No.

(*c*) Yes.

(*d*) No.

(*e*) Does not arise in view of reply to clause (*b*).

(*f*) Does not arise.

BUDGET FOR 1958-59—DEMANDS FOR GRANTS.

Demand No. 5—Forest.

10. Forest.

Mr. SPEAKER.—Motion moved:

"That a sum not exceeding Rs. 1,83,97,000 be granted to the Government to defray the charges which will come in course of payment during the year ending 31st day of March 1959, in respect of 'Forest'."

Demand No. 41—Working Expenses (Forest.)

X. Forest c. (I) Wood Preservation Plant-Working Expenses and Seigniorage.

Mr. SPEAKER.—Motion moved:

"That a sum not exceeding Rs. 6,00,000 be granted to the

(MR. SPEAKER)

Government to defray the charges which will come in course of payment during the year ending 31st day of March 1959, in respect of 'X. Forest-c. (1) Wood Preservation Plant—Working Expenses and Seigniorage'."

Demand No. 7. A—Sales Tax Administration.

12-A. Sales Tax

Mr. SPEAKER.—Motion moved:

"That a sum not exceeding Rs. 29,35,000 be granted to the Government to defray the charges which will come in course of payment during the year ending 31st day of March 1959, in respect of 'Sales-Tax'."

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನ ಹಳ್ಳಿ).—ಮಾನ್ಯ ಸಭಾಪತಿಗಳೇ ಈ ದಿನ ನಮ್ಮ ಮುಂದಿರುವ ಫಾರೆಸ್ಟ್ ಡಿಮ್ಯಾಂಡ್ ಎಂಬುದು ಬಹಳ ಮುಖ್ಯವಾದಂಥ ಅಂಶ. ನಾಡಿನ ಐಶ್ವರ್ಯಗಳಲ್ಲೆಲ್ಲಾ ಈ ಅರಣ್ಯ ಸಂಪತ್ತು ತುಂಬಾ ಅತ್ಯಗತ್ಯವಾದದ್ದು. ಆದುದರಿಂದ ಈ ಕಾಡುಗಳನ್ನು ಬೆಳೆಸತಕ್ಕದ್ದು ಅತ್ಯಗತ್ಯ. ಆದರೆ ನಾವೀದಿವಸ ಈ ಅರಣ್ಯಗಳಿಂದ ಎಷ್ಟು ಪ್ರಯೋಜನವನ್ನು ಹೊಂದ ಬಹುದಾಗಿತ್ತೊ ಅಷ್ಟನ್ನೂ ನಾಶಮಾಡಿದ್ದೇವೆ. ಈ ಅರಣ್ಯಗಳೇನೂ ಅಷ್ಟರಮಟ್ಟಿಗೆ ಅಭಿವೃದ್ಧಿಯಾಗುತ್ತಿಲ್ಲ ಎನ್ನತಕ್ಕದ್ದು ಸರ್ಕಾರದವರಿಗೂ ಚೆನ್ನಾಗಿ ಮನವರಿಕೆಯಾಗಿರತಕ್ಕಂಥ ವಿಚಾರ. ಈ ದಿವಸ ನಾವು ಸಹ ಸ್ಕಾರು ಎಕರೆಗಳಲ್ಲಿದ್ದಂಥ ಅರಣ್ಯ ಸಂಪತ್ತನ್ನು ಕೆಡಿಸಿ ಅಲ್ಲೆಲ್ಲ ಅನೇಕ ಕೆರೆಕಟ್ಟೆಗಳನ್ನು ಕಟ್ಟುತ್ತಿದ್ದೇವೆ. ಜನತೆಯ ದಿನಬಳಕೆಗೋಸ್ಕರವಾಗಿಯೂ ಲೆಕ್ಕವಿಲ್ಲದಷ್ಟು ಅರಣ್ಯ ಹಾಳಾಗುತ್ತಿದೆ. ಆದರೆ ಹೀಗೆ ನಶಿಸಿ ಹೋಗುತ್ತಿರುವ ಅರಣ್ಯವನ್ನು ಬೆಳೆಸಲು ಈಗ ಕೈಗೊಂಡಿರತಕ್ಕ ಯೋಜನೆಗಳೂ ಮತ್ತು ಈ ಬಾಬಿಗೆ ಒದಗಿಸಿರತಕ್ಕ ಹಣ ಎರಡೂ ಬಹಳ ಕಡಮೆ. ಹೀಗೆ ಇದು ಮುಂದುವರಿದಲ್ಲಿ ಒಂದಾನೊಂದು ದಿವಸ ಈ ಅರಣ್ಯಗಳಿಂದ ನಮಗೆ ಯಾವ ಒಂದು ಉತ್ಪತ್ತಿಯೂ ಬರುತ್ತಿಲ್ಲ ಎಂಬ ಪರಿಸ್ಥಿತಿ ಬರುವುದೊಂದೇ ಅಲ್ಲ, ಇದರಿಂದ ದೇಶಕ್ಕೆ ಮುಂದೆ ದೊಡ್ಡ ತೊಂದರೆಗಳೂ ಉಂಟಾಗಬಹುದಾದಂಥ ಪರಿಸ್ಥಿತಿ ಬಾರದೆ ಇರುವುದಿಲ್ಲ. ಈ ದಿವಸ ಶರಾವತಿ, ಲಕ್ಕವಳ್ಳಿ ಮತ್ತು ಘಟಪ್ರಭಾ ಇತ್ಯಾದಿ ಹತ್ತಾರು ಪ್ರಾಜೆಕ್ಟುಗಳಿಗಾಗಿ ಲಕ್ಷಾಂತರ ಎಕರೆ ಕಾಡು ನೀರುಮುಳಗಡೆಯಾಗಿರುತ್ತದೆ.

ಹೀಗೆ ಮುಳುಗಡೆಯಾಗುತ್ತಿರುವಾಗ, ನಾವು ಪಂಚವಾರ್ಷಿಕ ಯೋಜನೆಯು ಪುರುವಾದಾಗಿನಿಂದ 8,000 ಎಕರೆಗಳನ್ನು plantation ಮಾಡಿದ್ದೇವೆಂದು ಹೇಳಿದರೂ, ನಮಗೆ ಹೋಗುತ್ತಿರುವ ಸಂಖ್ಯೆಗೂ, ಬೆಳೆಸುತ್ತಿರುವ ಸಂಖ್ಯೆಗೂ ಹತ್ತಕ್ಕೆ ಒಂದರಷ್ಟಾಗುತ್ತದೆ. ಎಷ್ಟು ಮುಳುಗಡೆಯಾಗಿಹೋಗುತ್ತದೋ ಅಷ್ಟು ಬೆಳಸದೆ ಹೋದರೆ ನಮಗೆ ಬಹಳ ಕಷ್ಟವಾಗುತ್ತದೆ. ಏಕೆಂದರೆ ಕೈಗಾರಿಕೆಗಳು ಬಹಳ ಜಾಸ್ತಿಯಾಗುತ್ತಿವೆ. ಒಂದೊಂದು ತಾಲ್ಲೂಕಿನಲ್ಲೂ ಹೆಂಚಿನ ಕಾರ್ಖಾನೆಯಿದೆ, ಇದಕ್ಕಾಗಿ ಎಷ್ಟೋ ಮರ ಸೌದೆಗಾಗಿ ಉಪಯೋಗವಾಗುತ್ತಿದೆ. ಚಿಕ್ಕನಾಯ್ಕನಹಳ್ಳಿ ಒಂದು ತಾಲ್ಲೂಕನ್ನು ತೆಗೆದುಕೊಂಡರೇ, ಅಲ್ಲಿ ಈ ಹೊತ್ತು ಸುತ್ತಮುತ್ತಲ ೫ಮೈಲಿ ಫಾಸಲೆಯಲ್ಲಿ ಒಂದು ಮರ ಕೂಡ ಇಲ್ಲ. ಕಾಡಿಗಾಗಿ ಬಹಳ ದೂರ ಹೋಗಬೇಕು. ಆದ್ದರಿಂದ ಇಂದು ನಾವು ಅರಣ್ಯವನ್ನು ಬೆಳೆಸುವುದು ಅರಣ್ಯ ಸಂಪತ್ತನ್ನು ಹೆಚ್ಚು ಮಾಡಿಕೊಳ್ಳುವುದು ಅತ್ಯಗತ್ಯವಾಗಿದೆ. R.S.D., R.S.S. ಮುಂತಾದುವುಗಳಿಗೆ ಈಗ ಎಷ್ಟೋ ಹಣವನ್ನು ಕೊಡುತ್ತಿದ್ದೇವೆ. ಆದ್ದರಿಂದ ಈ ಬಗ್ಗೆ ಅವರುಗಳ ಸಹಾಯವನ್ನು ತೆಗೆದುಕೊಂಡು ನಿಯೋಜಿತವಾದರೀತಿಯಲ್ಲಿ ಒಂದು ಪ್ಲಾಂಚೇಷ್ ಮಾಡುವುದು ಅತ್ಯವಶ್ಯಕ. ಈ ಯಾವುದಾದರೂ ರೀತಿಯಲ್ಲಿ ಕಾರ್ಯಕ್ರಮ ತೆಗೆದುಕೊಂಡು ನಾವು ಜಾಸ್ತಿಮಾಡಿಕೊಳ್ಳದೆ ಇದ್ದರೆ, ಜನಸಾಮಾನ್ಯರಿಗೆ ಸೌದೆ ಕೂಡ ಕಡಿಮೆಯಾಗಿ ದೇಶಕ್ಕೆ ತುಂಬಾ ಹಾನಿಯಾಗುತ್ತದೆಂದು ಹೇಳುತ್ತೇನೆ. New York Times ಎಂಬ ಒಂದು ಪತ್ರಿಕೆ ಪ್ರತಿದಿನ ಹತ್ತು ಎಕರೆ ಅರಣ್ಯಸಂಪತ್ತನ್ನು ಉಪಯೋಗಿಸುತ್ತಿದೆಯೆಂಬ ವಿಷಯವನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಹೀಗೆ ಕೈಗಾರಿಕೆಗಳ ದೆಶೆಯಿಂದ ಅರಣ್ಯ ಸಂಪತ್ತು ಉಪಯೋಗಿಸಲ್ಪಡುತ್ತಿದ್ದರೆ ನಾವು ಈ ಬಗ್ಗೆ ಎಷ್ಟು ಗಮನ ಕೊಡಬೇಕಾಗುತ್ತದೆಂಬದನ್ನು ಅರ್ಥಮಾಡಿಕೊಳ್ಳಬಹುದು. ಪರಿಸ್ಥಿತಿ ಹೀಗಿರುವಲ್ಲಿ ನಾವು ಇಷ್ಟು snail speed ನಲ್ಲಿ, ಮಂದಗತಿಯಲ್ಲಿ ಹೋಗುತ್ತಿದ್ದೇವಲ್ಲಾ ಎಂದು ಆಶ್ಚರ್ಯವಾಗುತ್ತದೆ. ಆಧುನಿಕ ಪ್ರಪಂಚದ ಮುನ್ನಡೆಯನ್ನೇ ನಾವು ಗಮನಿಸುತ್ತಿಲ್ಲವೆಂದು ಕಾಣುತ್ತದೆ. ಶಿವಮೊಗ್ಗದ Saw millsನ್ನೇ ನೋಡಿ. ಅಲ್ಲಿ ಯಾವುದೋ ಒಂದು ಕಾಲದಲ್ಲಿ ನೇರವಾದ ಗರಗಸಗಳನ್ನು ಜೋಡಿಸಿರುವಂಥದ್ದು ಇಂದಿಗೂ ಅದೇ ಇದೆ. ಈ ಗರಗಸದಿಂದ wastage ಬಹಳವಾಗುತ್ತದೆ. ಅನಾವಶ್ಯಕವಾಗಿ ಮರ ಲುಕ್ಸಾನಾಗುತ್ತದೆ. ಇದಕ್ಕೆ ಬದಲು Belt Saws ಉಪಯೋಗಿಸಿದರೆ ಶೇಕಡ 15ರಷ್ಟು ಉಳಿತಾಯವಾಗುತ್ತದೆ. ವಿಜ್ಞಾನ ಮುಂದುವರಿದಿರುವ ಈ ಕಾಲದಲ್ಲಿ ಹಳೆಯ ರೀತಿಯಲ್ಲೇ ಕೆಲಸವನ್ನು ಮಾಡುತ್ತಿರುವುದು ತುಂಬ ಅನ್ಯಾಯ. ಈಗಿನ ತೇಗದಮರದ ಬೆಲೆ, ಇಲ್ಲಿ ಆಗುತ್ತಿರುವ wastage, ಲೆಕ್ಕ ಹಾಕಿದರೆ ಪ್ರತಿ ವರ್ಷವೂ ಇಂಥ ಒಂದು ಹೊಸ ಗರಗಸದ ಕಾರ್ಖಾನೆಯನ್ನೇ ಮಾಡಬಹುದು. ಸರ್ಕಾರದವರು ಇಲ್ಲಿನವರೆಗೂ ಇದನ್ನು ನೋಡದಿರುವುದು ತುಂಬ ಅನ್ಯಾಯ.

ಹೀಗೆಯೇ ತುಮಕೂರಿನಲ್ಲಿ ನೀವು ನಡೆಸುತ್ತಿರುವ Wood Industrial Institute ನೋಡಿ. ಇತರ ಖಾಸಗಿ ಸಂಸ್ಥೆಗಳು ಮಾಡುವುದಕ್ಕಿಂತ ಚೆನ್ನಾಗಿ ಸಾಮಾನುಗಳನ್ನು ಅವರು ಮಾಡುತ್ತಾರೆ. ಬೆಲೆಯೂ ಸಾಧುವಾಗಿವೆ. ವರ್ಷೆ ವರ್ಷೆ 2-3 ಲಕ್ಷ ರೂಪಾಯಿಗಳ ಬೆಂಚು, ಸ್ಟೂಲ್‌ಗಳನ್ನು ಮಾಡುತ್ತಿದ್ದಾರೆ. ಆದರೆ, ಫ್ಯಾಕ್ಟರಿ ಸಾಮಾನುಗಳನ್ನು ಯಾರೂ ಕೊಂಡುಕೊಳ್ಳುವವರೇ ಇಲ್ಲದೆ ಆ ಕಾರ್ಖಾನೆಯನ್ನೀಗ ಮುಚ್ಚಬೇಕಾಗಿ ಬಂದಿದೆ. ಸರ್ಕಾರದವರೇ ಏಕೆ ಇವುಗಳನ್ನು ತಮ್ಮ ಆಫೀಸುಗಳಿಗೆ ಕೊಂಡು ಕೊಂಡು ಉಪಯೋಗಿಸಿಕೊಳ್ಳಬಾರದು ? ಆ ಕೈಗಾರಿಕೆಯನ್ನು ಹೀಗಾದರೂ ಮಾಡಿ ಮುಂದುವರಿಸುವುದಕ್ಕಾಗುವುದಿಲ್ಲವೆ ? ಇದೇ ವಿಚಾರವನ್ನು ಒಮ್ಮೆ

D.P.I. ಗೂ ಬರೆದಿದ್ದೆವು. ಉತ್ತಮವಾದ ಮಾಲು ಸಿಕ್ಕುತ್ತದೆ; ಇದು ಸರ್ಕಾರದ ಕಾರ್ಖಾನೆ; ಸುಲಭವಾಗಿಯೂ ಸಿಕ್ಕುತ್ತದೆ ಎಂದೆಲ್ಲಾ ಬರೆದಿದ್ದರೂ ಅವರು ಯಾವ ಕಂಟ್ರಾಕ್ಟರ ದಾಕ್ಷಿಣ್ಯಕ್ಕೋ ಒಳಗಾಗಿ ಮಾಲುಗಳನ್ನು ಕೊಳ್ಳುತ್ತಿರುವುದನ್ನು ನೋಡಿದರೆ, ಸರ್ಕಾರದ ವರು ಕಣ್ಣು ಬಿಟ್ಟು ನೋಡುತ್ತಿಲ್ಲವೆಂದು ಹೇಳ ಬೇಕಾಗಿದೆ. ಸರ್ಕಾರದ ಕೈಗಾರಿಕೆಯಲ್ಲೂ ಸರ್ಕಾರದವರಿಗೆ ಆಸಕ್ತಿಯಿಲ್ಲದೆ ಹೋದರೆ ಇನ್ಯಾರಿಗೆ ಆಸಕ್ತಿಯಿರುತ್ತದೆ? ಇದನ್ನು ಸರ್ಕಾರದ ವರು ನೋಡಬೇಕು. ಯಾವ್ಯಾವ ಸರ್ಕಾರಿ ಇಲಾಖೆಯಿಂದ ಇನ್ನೊಂದು ಇಲಾಖೆಗೆ ಏನು ಅವಶ್ಯಕತೆಯಿದೆಯೆಂದು ನೋಡಿ ಮಾಡುವುದಾದರೆ, ನಿಮ್ಮ ಕೈಗಾರಿಕೆಗಳು ಅಭಿವೃದ್ಧಿಯಾಗುವಂತೆ. ಸರ್ಕಾರದ ಆರ್ಥಿಕ ಸ್ಥಿತಿಯೂ ಕೂಡ ಉತ್ತಮಗೊಳ್ಳುತ್ತದೆ.

ಇತ್ತ, ಅರಣ್ಯದಲ್ಲಿ ಕಳ್ಳತನಗಳು ಬೇರೆ ಜಾಸ್ತಿಯಾಗುತ್ತಿವೆ. ನಮ್ಮ Sandal wood factory ಯಿಂದ ಕಳ್ಳತನದಲ್ಲಿ ಎಷ್ಟೋ Sandal wood ಸಾಗಾಣಿಕೆಯಾಗಿ ಹೋಗುತ್ತಿದೆಯೆಂದು ಮಂತ್ರಿಗಳು ಹೇಳಿದರು. 3-4 ಲಾರಿ loadಗಳಷ್ಟು ಹೋಗುತ್ತಿದೆಯೆಂದು ಹೇಳಿದರು. ಹೀಗೆ ಸರ್ಕಾರದ ಸ್ವಾಧೀನದಿಂದ ಲಾರಿಗಟ್ಟಲೆ ಹೋಗುತ್ತಿದ್ದರೆ, ಇನ್ನು ಕಣ್ಣಿಗೆ ಕಾಣದೆ, ಕಾಯುವುದಕ್ಕೆ ಅವಕಾಶವಿಲ್ಲದ ಕಾಡುಗಳಲ್ಲಿ ಎಷ್ಟು ಕಳ್ಳತನವಾಗಬಹುದು ನೋಡಿರಿ! ನಾವು ನೋಡಿದ ಹಾಗೆ 5 ವರ್ಷದ ಹಿಂದೆ ಇದ್ದ ಗಂಧದ ಮರಗಳು ಇಂದು ಏನಾದವೋ ಗೊತ್ತಿಲ್ಲ. ಬುಡವನ್ನು ರಾತ್ರೋ ರಾತ್ರಿ ಕತ್ತರಿಸಿ ತೆಗೆದುಕೊಂಡು ಹೋಗುತ್ತಿರುತ್ತಾರೆ. ಆದ್ದರಿಂದ ಸರ್ಕಾರದವರು ಗಂಧದ ಮರದ ವಿಚಾರದಲ್ಲಿ ಹೆಚ್ಚಿನ ಎಚ್ಚರಿಕೆಯನ್ನು ತೆಗೆದುಕೊಳ್ಳದೆ ಹೋದರೆ, ಮುಂದೆ ಒಂದಾನೊಂದು ಕಾಲಕ್ಕೆ ನಮ್ಮ ಕಾರ್ಖಾನೆಗೆ ಗಂಧದ ಮರವೇ ಸಿಕ್ಕುವುದಿಲ್ಲ, ಲಕ್ಷಾಂತರ ರೂಪಾಯಿಗಳು ಲುಕ್ಸಾನಾಗುತ್ತವೆಂದು ಹೇಳಬಯಸುತ್ತೇನೆ.

ಇನ್ನೊಂದು ವಿಷಯವೇನೆಂದರೆ, ಬೆಂಗಳೂರು ಸಿಟಿಯ ಸೌದೆ ನರಬರಾಯಿ ವಿಷಯ. ಇಡೀ ನಂಸ್ಥಾನದ ಕಾಡಿನಲ್ಲಿ ಬಹುಶಃ ಹೆಚ್ಚು ಭಾಗ ಬೆಂಗಳೂರಿಗೆ ಸೌದೆಗಾಗಿ ಉಪಯೋಗವಾಗುತ್ತಿದೆ. ಮೊದಲು 10-20 ಮೈಲಿಗಳ ದೂರದ ಕಾಡುಗಳಿಂದ ಸೌದೆ ಬರುತ್ತಿತ್ತು. ಈಗ ಅವೆಲ್ಲಾ ಆಯಿತು. ಮಲೆನಾಡಿನಿಂದ ಈಗ ಬರುತ್ತಿದೆ. ದಿನವೂ ವ್ಯಾಗನ್ ಗಟ್ಟಲೆ ಬರುವುದನ್ನು ನೋಡಬಹುದು. ಇದರಲ್ಲಿ ಕೆಲವು ಭಾಗ ಜನತೆಯ ಸೌದೆ ಬಳಕೆಗೂ, ಕೆಲವು ಭಾಗ ಕೈಗಾರಿಕೆಗಳಿಗೂ ಉಪಯೋಗವಾಗುತ್ತಿದೆ. ಆದ್ದರಿಂದ ಬೆಂಗಳೂರಿನಲ್ಲಿ ಸೌದೆ ಉಪಯೋಗಿಸುವುದನ್ನು ನಿಲ್ಲಿಸಿದರೆ ಪರಿಸ್ಥಿತಿಯನ್ನು ಎಷ್ಟೋ ಸುಧಾರಿಸಿದಂತಾಗುತ್ತದೆ. ಬೊಂಬಾಯಿನಲ್ಲಿ ಹೇಗೆ ಸೌದೆಗೆ ಬದಲಾಗಿ Coal gas ಬಳಕೆಗೆ ತಂದಿದ್ದಾರೋ ಹಾಗೆ ಇಲ್ಲಿಯೂ ಮಾಡದೆ ಇದ್ದರೆ, ಇನ್ನು ಕೆಲವಾರು ವರ್ಷಗಳಲ್ಲೇ 100-200 ಮೈಲಿಗಳ ದೂರವಲ್ಲ, 300 ಮೈಲಿಗಳ ದೂರ ಕಾಡುಗಳು ಹೋಗುವುದರಲ್ಲಿ ಆಶ್ಚರ್ಯವಿಲ್ಲ. ಈಚೆಗೆ ಸರ್ಕಾರದವರು ಕೆಲವು ಜಿಲ್ಲೆಗಳಲ್ಲಿ ಅದರಲ್ಲಿಯೂ ನಮ್ಮ ಜಿಲ್ಲೆಯಲ್ಲಂತೂ ಬಹಳ ಉತ್ತಮವಾದ ಕೆಲಸ ಮಾಡಿದ್ದಾರೆ. ನಮ್ಮ ಮಾನ್ಯ ಮಂತ್ರಿಗಳೂ ಜವಾಬು ಕೊಡುವಾಗಲೂ ಇದ್ದುದನ್ನು ಇದ್ದಹಾಗೆ ಹೇಳುವುದರಿಂದ ನಾನು ಹೆಚ್ಚಿಗೆ ಉತ್ಪ್ರೇಕ್ಷಿಸಿ comment ಮಾಡುವುದಕ್ಕಿಚ್ಚಿಸುವುದಿಲ್ಲ. ಮುಖ್ಯವಾಗಿ ಈ ವಿಷಯದಲ್ಲಿ ಇನ್ನೂ ಚುರುಕಿನ ಕೆಲಸ ನಡೆಯಬೇಕು. ಕಾಡುಗಳನ್ನು ಅಭಿವೃದ್ಧಿಮಾಡುವುದರಲ್ಲಿ ನಮ್ಮ ದೇಶವನ್ನೂ ಇತರ ದೇಶಗಳನ್ನೂ ಹೋಲಿಸಿ ನೋಡುವುದಾದರೆ, ಅಲ್ಲಿ ಕಾಡಿನ ಮೃಗಗಳನ್ನೂ ಕೂಡ man has encroached ಎಂದ ಮೇಲೆ ಕಾಡಿನ ವಿಷಯ ಹೇಳ ಬೇಕಾಗಿಲ್ಲ. ಹೀಗಿರುವಾಗ ಕಾಡಿನ ಬೆಳವಣಿಗೆಗೆ ಎಷ್ಟು ಅವಶ್ಯಕವಾಗಿ ಸರ್ಕಾರದಿಂದ ಮೊಬಲಗು ದೊರೆಯಬೇಕೆಂದಿದೆಯೇ ಅಷ್ಟು ದೊರಕುತ್ತಿಲ್ಲ. ನೋಡಿದರೇನೋ ಯಾವ ಇಲಾಖೆ ತೆಗೆದುಕೊಂಡರೂ ಅದು ಮುಖ್ಯವಾಗಿಯೇ ಕಾಣುತ್ತದೆ. ಆದರೂ

2-30 P.M.

ಕಾಡು ಇಪ್ಪೊತ್ತು ಯಾವ ಪ್ರಮಾಣದಲ್ಲಿ ಇಳಿಯುತ್ತಿದೆ ಯಾವ ಪ್ರಮಾಣದಲ್ಲಿ ಬೆಳೆಯುತ್ತಿದೆ ಎಂದು ಲೆಕ್ಕಹಾಕಿದರೆ ಈಗ ಕಾಡನ್ನು ಬೆಳಸಲು ಕೊಡುತ್ತಿರುವ ದುಡ್ಡನ್ನು ಕೊನೆಯಪಕ್ಷ ನಾಲ್ಕರಷ್ಟು ಆದರೂ ಹೆಚ್ಚಿಸಬೇಕು. ಇದು ದೇಶದ ಅಭಿವೃದ್ಧಿಗೆ ಸಂಬಂಧಪಟ್ಟದ್ದು. ಯಾವ ಪಕ್ಷದವರೇ ಆಡಳಿತದಲ್ಲಿರಲಿ ದೇಶದಲ್ಲಿ ಸಂಪತ್ತು ಎಂದು ಯಾವುದಿದೆಯೋ, ದೇಶದ ಜನತೆಗೆ ಯಾವುದು ಉಪಯುಕ್ತವಾಗಿದೆಯೋ, ಅದರ ವಿಚಾರದಲ್ಲಿ ಸರ್ಕಾರ ನಾಕಷ್ಟು ಆಸಕ್ತಿಯನ್ನು ಏಕೆ ವಹಿಸುತ್ತಿಲ್ಲವೆನ್ನುವುದು ತುಂಬ ಆಶ್ಚರ್ಯವಾಗಿದೆ. ನಾವು ಎಷ್ಟೋ ಇಲಾಖೆಗಳಿಗೆ ಹಣವನ್ನು ಒದಗಿಸುತ್ತೇವೆ. ಆದರೆ ಅದರ ಪೈಕಿ ಜನತೆಗೆ ಪ್ರಯೋಜನ ಯಾವ ಇಲಾಖೆಯಿಂದ ಆಗುತ್ತದೆಯೋ ಅದಕ್ಕೆ ಮಾನ್ಯತೆಯನ್ನು ಕೊಡಬೇಕು. Social welfare ಗೆ ಲಕ್ಷಾಂತರ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಈ ದುಡ್ಡು ಯಾವರೀತಿ ವ್ಯಯವಾಗುತ್ತಿದೆ ಎಂದು ನೋಡಿದ ಪಕ್ಷದಲ್ಲಿ, ಅದಕ್ಕೆ ಖರ್ಚು ಮಾಡುವುದಕ್ಕೆ ಬದಲಾಗಿ ಕಾಡನ್ನು ಬೆಳೆಸುವುದಕ್ಕೆ ಖರ್ಚುಮಾಡಿದರೆ ಉಪಕಾರವಾದೀತು ಎನ್ನಿಸುತ್ತದೆ. ಈಗ ಅಲ್ಲದೆ ಇದ್ದರೂ ಮುಂದಿನ ಪೀಳಿಗೆಗಾದರೂ ಅನುಕೂಲವಾಗುತ್ತದೆ ಎಂದು ಹೇಳಬೇಕಾಗಿದೆ. ಸರ್ಕಾರದವರು ತೀವ್ರ ದೃಷ್ಟಿಯಿಂದ ಗಮನಿಸಿ ಇದಕ್ಕೆ ಜಾಸ್ತಿಹಣವನ್ನು ಕೊಡಬೇಕು. ಕೇಂದ್ರಸರ್ಕಾರದಿಂದ ಸಹಾಯ ಬರುವುದಕ್ಕೆ ಅವಕಾಶವಿದ್ದರೆ ಅಲ್ಲಿಂದಲೂ ಸಹಾಯವನ್ನು ತೆಗೆದುಕೊಳ್ಳಬೇಕೆಂದು ಒತ್ತಿ ಹೇಳುತ್ತೇನೆ.

ಕಾಡುಗಳಿಗೆ ಸಂಬಂಧಪಟ್ಟ ಕೈಗಾರಿಕೆಗಳ ವಿಚಾರದಲ್ಲಿ ಬಹಳ ಆಸಕ್ತಿ ವಹಿಸಬೇಕು. Ply wood ಫ್ಯಾಕ್ಟರಿಗೆ ಮರವನ್ನು ಒದಗಿಸುವಾಗ ಘನ ಅಡಿಗೆ ನಾಲ್ಕಾಣೆ, ಅಥವ ಆರಾಣೆ ಸೀನಿಯೊರೇಜ್ ಹಾಕಿಕೊಡುತ್ತಿದ್ದೀರಿ. ಇದು 20-25 ವರ್ಷಗಳ ಹಿಂದೆ ಗೊತ್ತುಮಾಡಿದ ದರ. ಆಗಿನ ಕಾಲದಲ್ಲಿ ಕ್ವಾಡುಮರಕ್ಕೆ ಒಂದು ಘನಅಡಿಗೆ ಒಂದು, ಒಂದೂವರೆ ರೂಪಾಯಿ ಮತ್ತು ತೇಗದಮರಕ್ಕೆ ಮೂರು, ಮೂರುವರೆ ರೂಪಾಯಿ ದರವಿತ್ತು. ಈಗ ಇರುವ ದರವನ್ನು ಲೆಕ್ಕ ಹಾಕಿದರೆ ಹಿಂದಿನ ದರದ ಮೂರರಷ್ಟು ನಾಲ್ಕರಷ್ಟು ಆಗಿದೆ. ಸರ್ಕಾರದವರು ಜನತೆಯ ಕಣ್ಣು ಒರೆಸುವುದಕ್ಕೆ ನಾಲ್ಕಾಣೆ ಇದ್ದುದನ್ನು ಆರಾಣೆ ಮಾಡಿದ್ದೇವೆ ಎಂದು ಹೇಳಬಹುದು. ಆದರೆ ಮರದ ಬೆಲೆ ಒಂದಕ್ಕೆ ನಾಲ್ಕರಷ್ಟು ಆಗಿರುವಾಗ ಅದೇಪ್ರಕಾರ ಸೀನಿಯೊರೇಜ್ ಸಹ ಹೆಚ್ಚಿಸದೆ ಇದ್ದರೆ ಸರ್ಕಾರಕ್ಕೆ ಬರತಕ್ಕ ಹಣ ಹೋಗುತ್ತದೆ. ಅರಣ್ಯ ಇಲಾಖೆಯಲ್ಲಿ ರಿಜ್ಞೆರ್ ಆದ ಕಂಸರ್ವೇಟರುಗಳು ಮತ್ತು ಅಸಿಸ್ಟೆಂಟ್ ಕಂಸರ್ವೇಟರುಗಳು ಈ ಹೈಬ್ರಿಡ್ ಫ್ಯಾಕ್ಟರಿಯಲ್ಲಿ ಭಾಗನ್ತರಾಗಿದ್ದಾರೆ.

ಶ್ರೀ ಎಚ್. ಎಸ್. ರುದ್ರಪ್ಪ (ವ್ಯವಸಾಯ ಶಾಖೆಯ ಮಂತ್ರಿಗಳು).—ಈಗ ಒಂದು ರೂಪಾಯಿ ಮಾಡಿದ್ದೇವೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಪ್ಲೈವುಡ್ ರೇಟ್ ಹಿಂದೆ ಏನಿತ್ತು, ಈಗ ಏನಿದೆ ಎಂದು ನೋಡಬೇಕು. It has gone up by 8 times.

ಶ್ರೀ ಎಚ್. ಎಸ್. ರುದ್ರಪ್ಪ.—ಒಂದಕ್ಕೆ ಹದಿನಾರ ರಷ್ಟು ಮಾಡಿದ್ದೇವೆ. ಒಂದು ಆಣೆ ಇದ್ದುದನ್ನು ಒಂದು ರೂಪಾಯಿ ಮಾಡಿದ್ದೇವೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಇನ್ನು ಕೈಗಾರಿಕೆಗಳಲ್ಲಿ ಕಲ್ಲಿದ್ದಲು ಜಾಸ್ತಿ ಉಪಯೋಗಮಾಡುವುದಕ್ಕೆ ಸರ್ಕಾರದವರು ಒತ್ತಾಯ ಮಾಡಬೇಕು. ಅದಕ್ಕನುಗುಣವಾಗಿ ಶಾಸನವನ್ನೂ ಮಾಡಬೇಕಾಗಿದೆ. ಇಲ್ಲದೆ ಇದ್ದರೆ ತೊಂದರೆಯಾಗುತ್ತದೆ. ಉದಾಹರಣೆಗೆ ಹೆಂಚಿನ ಕಾರ್ಖಾನೆ, ಅಥವ simthy ಅಥವ workshop ಯಾವುದನ್ನೇ ತೆಗೆದುಕೊಳ್ಳಿ, ಪ್ರತಿಯೊಂದಕ್ಕೂ ಕೂಡ ಸೌದೆ ಅಥವ ಇದ್ದಿಲು ಉಪಯೋಗಿಸುತ್ತಿದ್ದಾರೆ. ಇದರಿಂದಾಗಿ ನಾವು ಎಷ್ಟು ಬೇಗ ಕಾಡನ್ನು ಕಳೆಯುತ್ತಿದ್ದೇವೆಯೋ ಅಷ್ಟು ವೇಗದಲ್ಲಿ ಅದನ್ನು ಬೆಳೆಸುವುದಕ್ಕೆ ಸಾಧ್ಯವಿಲ್ಲ. ಅರಣ್ಯವನ್ನು ಬೆಳೆಸುವಾಗ ಇವೊತ್ತು ಗಿಡವನ್ನು ಹಾಕಿದರೆ ನಾಳೆಗೆ ಬೆಳೆಯುವುದಿಲ್ಲ. ಒಂದು ಗಿಡ ಬೆಳೆಯಬೇಕಾದರೆ ಹತ್ತಾರು ವರ್ಷ ಬೇಕು. ಅದಕ್ಕೆ ಗೊಬ್ಬರ ಮಗ್ಯೆರೆ ಹಾಕಿದರೆ ನಾಲ್ಕು ವರ್ಷಗಳಲ್ಲಿ ಬೆಳೆಯುವ ಗಿಡ ಮೂರು ವರ್ಷದಲ್ಲಿ ಬೆಳೆಯಬಹುದು. ಅರಣ್ಯ ಯಾವ ಒಂದು ವೇಗದಲ್ಲಿ ಹೋಗುತ್ತಿದೆಯೋ ಅದಕ್ಕನುಗುಣವಾಗಿ ಒಂದು plan ಅಥವ scheme ಹಾಕಿ ಅರಣ್ಯವನ್ನು ಬೆಳೆಸಬೇಕು. ಸರ್ಕಾರದವರು ಇದಕ್ಕೆ ಒಂದು ಯೋಜನೆಯನ್ನು ತಯಾರು ಮಾಡುತ್ತಾರೆಂದು ನಂಬಿದ್ದೇನೆ.

ಡಿಸ್ಟ್ರಿಕ್ಟ್ ಫಾರೆಸ್ಟ್‌ಗಳು ಅಮಲ್ದಾರರ ಸ್ವಂತ ಕಾಡುಗಳಾಗಿವೆ. ನಮ್ಮ ಜಿಲ್ಲಾ ಫಾರೆಸ್ಟ್‌ನಲ್ಲಿ ಚಿಕ್ಕನಾಯಕನಹಳ್ಳಿ, ತಾಲ್ಲೂಕಿನಲ್ಲಿ ಗುಡ್ಡ ಗಾಡಿನ ಕಾಡು ಇದೆ. ಅಲ್ಲಿ ಸೌದೆ ಕಡಿಯಲು ಮುಫತ್ತಾಗಿ ಲೈಸೆನ್ಸ್ ದೊರೆಯುತ್ತದೆ. ಸ್ವಂತ ಜಮೀನಿನಲ್ಲಿ ಸೌದೆಯನ್ನು ಕಡಿಯಲು ಮಾಫಿ ಲೈಸೆನ್ಸ್‌ಗೆ ಅರ್ಜಿ ಹಾಕಿ, ಯಾವುದೋ ಒಂದು ದಾಕ್ಷಿಣ್ಯದ ಮೇರೆ ಅಥವ ಪ್ರಭಾವದ ಮೇಲೆ ಲೈಸೆನ್ಸ್ ತೆಗೆದುಕೊಂಡು, ಡಿಸ್ಟ್ರಿಕ್ಟ್ ಫಾರೆಸ್ಟ್‌ನಲ್ಲಿ ನೂರಾರು ಎಕರೆ ಕಾಡನ್ನು ಕಡಿಯುತ್ತಾರೆ. ಮಾಫಿ ಲೈಸೆನ್ಸ್ ಕೊಡುವಾಗ ಇಷ್ಟು ಪ್ರಮಾಣದಲ್ಲಿ ಕೊಟ್ಟಿದ್ದೇವೆ ಎಂದು ಆ ಭಾಗದ ಕಾಡನ್ನು ವಿಂಗಡಿಸಿ ತೋರಿಸಬೇಕು, ನಮ್ಮ ತಾಲ್ಲೂಕಿನಲ್ಲಿ ಜೋಡಿ ಅಜ್ಜಿಗುಡ್ಡೆ ಗ್ರಾಮದಲ್ಲಿ ಕಾಡು ಇಲ್ಲವೇ ಇಲ್ಲ. ಆ ಗ್ರಾಮದ ಸುಗ್ಗುಲಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಇದೆ. ಈ ಜೋಡಿ ಗ್ರಾಮದಲ್ಲಿರುವ ಕಾಡನ್ನು ಕಡಿಯುವ ಸಲುವಾಗಿ ಪರ್ಮಿಟ್ ಪಡೆದು ಮಗ್ಗುಲಲ್ಲಿರುವ ಕಾಡನ್ನು ಕಡಿಯುತ್ತಾರೆ. ಕಾಡು ಇಲ್ಲದೇ ಇರುವಾಗ ಅಲ್ಲಿ ಕಾಡನ್ನು ಕಡಿಯಲು ಪರ್ಮಿಟ್ ಕೊಟ್ಟರೆ, ಮಗ್ಗುಲಲ್ಲಿರುವ ಕಾಡು ಹೇಗೆ ಇರುತ್ತದೆ, ಅದನ್ನು ಹೇಗೆ ರಕ್ಷಣೆ ಮಾಡಬೇಕು ಎಂದು ನಾನು ಕೇಳಬೇಕಾಗಿದೆ. ಒಂದು ಕಡೆ ರೆವೆನ್ಯೂ ಇಲಾಖೆ ಸರಿಯಾಗಿ ಕಂಟ್ರೋಲ್ ಮಾಡುತ್ತಿಲ್ಲ, ಮತ್ತೊಂದು ಕಡೆ ಡಿಸ್ಟ್ರಿಕ್ಟ್ ಫಾರೆಸ್ಟ್ ಇಲಾಖೆ ಸರಿಯಾಗಿ ಕಂಟ್ರೋಲ್ ಮಾಡುತ್ತಿಲ್ಲ. ಈ ಫಾರೆಸ್ಟ್‌ಗೆ ಯಾವತರಹ ಕಾವಲೂ ಇಲ್ಲ. ಈಗಿರುವಂತೆಯೇ ಮುಂದುವರಿದರೆ ಇನ್ನು ಎರಡು ಮೂರು ವರ್ಷದೊಳಗೆ ಒಂದು ಗಿಡ ಅಥವ ಮರ ಇಲ್ಲದ ಹಾಗಾಗುತ್ತದೆಂದು ಹೇಳಬಹುದಾಗಿದೆ, ಶ್ಯಾನುಭೋಗರು ಪಟೇಲರು ಇದನ್ನು ನೋಡಿಕೊಳ್ಳಬೇಕು ಎಂದರೆ ಅವರು ಗ್ರಾಮದಲ್ಲಿರುವವರು, ಯಾವ ಮನುಷ್ಯನ ಮೇಲೆ ಕ್ರಮತೆಗೆದುಕೊಳ್ಳಬೇಕೋ ಆ ಮನುಷ್ಯನು ನಮ್ಮವನು, ನಮ್ಮ ಊರಿನವನು ಎಂಬ ಅಭಿಮಾನದ ಮೇಲೆ ಬಿಟ್ಟು ಬಿಡುತ್ತಾರೆ. ಯಾವ ಭಾಗದಲ್ಲಿ ಹೊಸದಾಗಿ ಒಂದು ಯೋಜನೆಯ ರೂಪದಲ್ಲಿ ಪ್ಲಾಂಟೇಷನ್ ಮಾಡಬೇಕು ಎಂದು ಇದೆಯೋ ಅಂಥ ತಾಲ್ಲೂಕುಗಳಲ್ಲಿ ನಿಯೋಜಿತವಾದ ಪ್ಲಾಟ್ ಪ್ರಕಾರ ಲಾಯಖ್ಖಾದ ಜಾಗಗಳಲ್ಲಿ ಪ್ಲಾಂಟೇಷನ್ ಕೆಲಸ ನಡೆಸಬೇಕಾಗಿದೆ. ಡಿಸ್ಟ್ರಿಕ್ಟ್ ಫಾರೆಸ್ಟ್‌ಗಳಲ್ಲಿ ಬಹಳಕಡೆ shrub jungle ನೂರಾರು ಎಕರೆಗಳಿವೆ. ಇದರಲ್ಲಿ ಬರೀ ಕುರುಚಲು ಗಿಡಗಳಿವೆ. ಈ ಕೂಪ್‌ಗಳನ್ನು ಹರಾಜು ಹಾಕಿದರೆ ಎಕರೆಗೆ 10-15 ರೂಪಾಯಿ ಬರಬಹುದು. ಈ ಪ್ರದೇಶದಲ್ಲಿ ಕಾಡನ್ನು ಬೆಳೆಸಿ 10-12 ವರ್ಷದುಡಿದ ಪಕ್ಷದಲ್ಲಿ ಅಂಥ ಒಂದು ಎಕರೆ ಪ್ರದೇಶಕ್ಕೆ 100-200 ರೂಪಾಯಿ ಆದಾಯ ಬರುವ ಸಂಭವವಿದೆ. ಡಿಸ್ಟ್ರಿಕ್ಟ್ ಫಾರೆಸ್ಟ್ ಸ್ಟೇಟ್ ಫಾರೆಸ್ಟಿಗೆ ಸೇರಿಲ್ಲ ಎಂದು ಅದನ್ನು ಬಿಡಬೇಕಾದುದಿಲ್ಲ. ಎಲ್ಲಿ ಅರಣ್ಯ ಸಂಪತ್ತು ಅಭಿವೃದ್ಧಿಯಾಗಿ ಸರ್ಕಾರಕ್ಕೆ ಆದಾಯ ಬರುತ್ತದೆ, ದೇಶದ ಸಂಪತ್ತು ಹೆಚ್ಚುತ್ತದೆ, ಎಲ್ಲೆಲ್ಲಿ ಪ್ಲಾಂಟೇಷನ್ ಮಾಡಲು ಜಾಗ ಸರಿಹೊಂದುತ್ತದೆ ಅಂಥ ಜಾಗಗಳಲ್ಲಿ, ಡಿಸ್ಟ್ರಿಕ್ಟ್ ಫಾರೆಸ್ಟಿಗೆ ಸೇರಿದ್ದ ಪಕ್ಷದಲ್ಲಿ ಅದು ಪ್ಲಾಂಟೇಷನ್‌ಗೆ ಲಾಯಖ್ ಆಗಿದ್ದಪಕ್ಷದಲ್ಲಿ ಅಂಥ ಜಾಗಗಳನ್ನು ಸ್ಟೇಟ್ ಫಾರೆಸ್ಟಿಗೆ ತೆಗೆದುಕೊಂಡು ಅಲ್ಲಿ ಕೂಡ ಪ್ಲಾಂಟೇಷನ್ ಮಾಡಬೇಕೆಂದು ಹೇಳುತ್ತೇನೆ.

ಈ ಎಲ್ಲ ಅಂಶಗಳನ್ನೂ ಕೂಡ ನಮ್ಮ ಅರಣ್ಯ ಇಲಾಖೆಯ ಮಂತ್ರಿಗಳು ತಮ್ಮ ಪ್ಲಾನಿಂಗ್ ಸ್ಕೀಂನಲ್ಲಿ ಸೇರಿಸಿಕೊಂಡು ಕೆಲಸ ಮಾಡುತ್ತಾರೆಂದು ನಾನು ನಂಬಿ ಅರಣ್ಯ ಇಲಾಖೆಯ ವಿಚಾರದಲ್ಲಿ ನನ್ನ ಎರಡು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಸೇಲ್ಸ್‌ಟ್ಯಾಕ್ಸ್ ಎಲ್ಲಕ್ಕಿಂತ ಜಾಸ್ತಿ ಆದಾಯ ತರತಕ್ಕ ಬಾಬು, ಕೇವಲ ಒಂದು ಟ್ಯಾಕ್ಸ್ ಉತ್ಪತ್ತಿ ಮಾತ್ರವಲ್ಲ, ಅದರಲ್ಲಿ ಎಷ್ಟರಮಟ್ಟಿಗೆ ಸೋರಿಹೋಗುತ್ತದೆ ಮತ್ತು ಇದನ್ನು ಜಾರಿಯಲ್ಲಿ ತರುವಾಗ ಎಷ್ಟರಮಟ್ಟಿಗೆ ಜನಗಳಿಗೆ ಕಷ್ಟನುಖವಿದೆ ಎನ್ನುವುದನ್ನು ಈ ಇಲಾಖೆ ಬಹುಮಟ್ಟಿಗೆ ಪರಿಶೀಲನೆಮಾಡಬೇಕಾಗಿದೆ. ಟ್ಯಾಕ್ಸ್ ಹಾಕುವಾಗ ಸರ್ಕಾರ ಎಷ್ಟೇ ಕಾನೂನುಗಳನ್ನು ಮಾಡಿದಾಗ್ಯೂ ಕೂಡ ಅದನ್ನು ತಪ್ಪಿಸಿಕೊಳ್ಳುವವರು ಅನೇಕ ಜನರಿದ್ದಾರೆ. ಇದರಲ್ಲಿ ಕೆಲವು ವರ್ತಕರಿಗೆ ತುಂಬ ತೊಂದರೆಯಾಗುತ್ತದೆ. ಲಾರಿ ಇರುವ ಮನುಷ್ಯ ತನ್ನ ಹತ್ತಿರ ಐದು ಸಾವಿರ ರೂಪಾಯಿ ನಗದು ಇದ್ದರೆ ಮಂಗಳೂರಿನಿಂದ ಹೆಂಚನ್ನು ತಂದು ಚಿಕ್ಕನಾಯಕನಹಳ್ಳಿಯಲ್ಲಿ ಮಾರಿ ಚಿಕ್ಕನಾಯಕನಹಳ್ಳಿಯಿಂದ ಮ್ಯಾಂಗನೀಸ್ ಅದಿರನ್ನು ತುಂಬಿಕೊಂಡು ಮಂಗಳೂರಿಗೆ ಹೋಗುತ್ತಾನೆ. ಒಂದು ಸಾವಿರ ಹೆಂಚಿಗೆ ಆರು ರೂಪಾಯಿ ಟ್ಯಾಕ್ಸ್ ಕೊಡಬೇಕು. ಅದರಲ್ಲಿ ವ್ಯಾಪಾರ ಮಾಡುವವನು ಇದನ್ನೆಲ್ಲ ಕೊಟ್ಟು ಹೆಂಚನ್ನು ಮಾರಬೇಕೆಂದರೆ ಸಾಧ್ಯವಿಲ್ಲ, ಏಕೆಂದರೆ ಲಾರಿಯಲ್ಲಿ ಹೆಂಚನ್ನು ತಂದವನು ಟ್ಯಾಕ್ಸ್ ಕೊಡದೆ ಕಡಮೆ ಬೆಲೆಗೆ ಜನಗಳಿಗೆ ಮಾರುತ್ತಾನೆ. ಇದೇ ರೀತಿ ತಿಪಟೂರಿನಿಂದ ಲಾರಿಯಲ್ಲಿ ಎಣ್ಣೆಯನ್ನು ತುಂಬಿಕೊಂಡುಬಂದು ಸಂತೆಯ ದಿವಸ 5-10 ಸಾವಿರ ರೂಪಾಯಿ ಎಣ್ಣೆಯನ್ನು ಮಾರುತ್ತಾನೆ. ಅಂಗಡಿ

ಯಲ್ಲಿ ಕುಳಿತುಕೊಂಡಿರುವವನು ಡಬ್ಬಿ ಒಂದಕ್ಕೆ ನಾಲ್ಕಾಣೆ ಲಾಭ ಬರಬೇಕೆಂದು ಬೆಲೆಯನ್ನು ಹೇಳಿದರೆ ಯಾರೂ ತೆಗೆದುಕೊಳ್ಳುವುದಿಲ್ಲ. ಸೇಲ್ಸ್ ಟ್ಯಾಕ್ಸ್ ಅಧಿಕಾರಿಗಳು ನಂತೆ ದಿವಸ, ಮತ್ತು ಇತರ ದಿವಸಗಳಲ್ಲಿ ಆಗಾಗ್ಗೆ ಹೋಗಿ ತನಿಖೆ ಮಾಡ ಬೇಕಾಗುತ್ತದೆ.

*Sri R. M. DESAI (Bilgi).—Mr. Speaker Sir, while supporting the demand for Forest for Rs. 1,83,97,000, I would like to refer to some of the main points relating to forest and the activities under the Wild Game Preservation Act also.

Mr. SPEAKER.—You will have ten minutes' time.

Sri R. M. DESAI.—Yes, Sir. Mysore State has got to its credit a total forest area of 13,105 sq. miles and it is one of the fortunate States of India to have this extent of forest area. We derive many important products from the forest like valuable timber, bamboo, herbal medicines, costly ores, certain things from which colours are produced and such other products. From the evergreen forests, we have the most parched forests which is the result of indiscriminate cutting for fuel. These forest areas, apart from endowing us with facilities for illuminating our State, is giving us the benefit of more electricity and to enable us to lend electricity to our neighbouring States and earn some profit in future.

I am not going into details under this head. I would only like to refer to some of the important points relating to our forest areas particularly in my district. Coming as I do from Bijapur District, I should say that our district has 2,618 acres of reserve forest areas comprising 4·9 per cent of the total area of the district. The main products of our forest area are bark from the trees for tanning purposes, glue (ಅಂಟು) and fuel which is cut from coups. The State derives good income from these items. There are stone quarries also in addition, in these forests. I would like to point out here that there is one very good ore which is found in my constituency of Biligi—Eligutti, namely asbestos ore. This was being taken out by some Bombay contractors and due to some reasons, it has been stopped now. I request the Government to investigate into the matter and see that these asbestos ore are taken out for industrial purposes.

Our forest areas no doubt were helping rainfall. But due to illicit cutting which is still rampant, rainfall is becoming scarce and I therefore request Government to take immediate steps to see that such illicit cutting is stopped.

ಇವತ್ತು ಮಂಡ್ಯ ನಕ್ಕರೆ ಫ್ಯಾಕ್ಟರಿಯಿಂದ ಕ್ಯಾಷ್ ಇಟ್ಟುಕೊಂಡು ಕೊಳ್ಳುವವನನ್ನು ನೋಡಿ. ರೈಲ್ವೆ ಸ್ಟೇಷನ್‌ನಲ್ಲಿ ರಂಗಯ್ಯ ಎನ್ನುವ ಹೆನರಿನಲ್ಲಿ ಆರ್. ಆರ್. ತೆಗೆದುಕೊಳ್ಳುತ್ತಾನೆ; ಸೈನ್ ಮಾಡುತ್ತಾನೆ, ತೆಗೆದುಕೊಳ್ಳುತ್ತಾನೆ. ಮೂರು ನಾಲ್ಕು ಲಕ್ಷ ರೂಪಾಯಿ ಬಂಡವಾಳಹಾಕಿ ವ್ಯಾಪಾರ ಮಾಡುವ ಮನುಷ್ಯ ಇವನ ಜೊತೆ ಪೈಪೋಟಿ ಮಾಡುವುದು ಹೇಗೆ ಸಾಧ್ಯ? ಸೇಲ್ಸ್ ಟ್ಯಾಕ್ಸ್ ವಿಚಾರ ಏನು ವಿಚಿತ್ರ ಎನ್ನುತ್ತೀರ! ನತ್ಯವಾಗಿ ಯಾವನು ವ್ಯಾಪಾರ ಮಾಡುತ್ತಾನೋ, ಅವನು ಉದ್ಧಾರವಾಗುವುದು ಸಾಧ್ಯವಿಲ್ಲ. ಏಕೆಂದರೆ ಒಬ್ಬ ಕಳ್ಳ, ಇನ್ನೊಬ್ಬ ಸಾಚಾ ಮಾರ್ಗದಲ್ಲಿದ್ದು ಟ್ಯಾಕ್ಸ್ ಕೊಡುತ್ತಾನೆ, ನ್ಯಾಯವಾಗಿ ವ್ಯಾಪಾರ ಮಾಡುವ ಮನುಷ್ಯ ಟ್ಯಾಕ್ಸ್ ಕೊಡಬೇಕು.

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಇಲಾಖೆಯ ಮಂತ್ರಿಗಳು).—ಕೊಡದಿರುವವರನ್ನ ಹೇಗೆ ಹಿಡಿಯುವುದು ಸ್ವಾಮಿ?

Sri C. K. RAJAIAH SETTY.—Be a merchant when you go to a merchant. Go as an oil merchant, as an yarn merchant. ನೀವು ಹೋಮ್ ಮಂತ್ರಿಗಳಾಗಿದ್ದವರು, ನಿಮಗೆ ನಾನು ಹೇಳಿಕೊಡಬೇಕೇ? ಸೇಲ್ಸ್ ಟ್ಯಾಕ್ಸಿಗೆ ಈಗ ಆರು-ಏಳು ಷೆಡ್ಯೂಲ್‌ಗಳಿವೆ. ಜವಳಿ ವ್ಯಾಪಾರನ್ನಷ್ಟಿಗೆ ಎಕ್ಸ್‌ಸೈಸ್ ಡ್ಯೂಟಿ ಇದೆ. ಇವನಿಗೆ ಲೆಕ್ಕ ಇಡುವ ತೊಂದರೆ ಇಲ್ಲ. ಇತರರಿಗೂ ಅನುಕೂಲವಾಗುವಂತೆ ಈ ಷೆಡ್ಯೂಲುಗಳನ್ನು ಏನಾದರೂಮಾಡಿ, 3-4 ಷೆಡ್ಯೂಲ್‌ಗಳಿಗೆ ಇಳಿಸಿದೆ ಹೋದರೆ, ಲಂಚಕ್ಕೆ ಆಸ್ಪದವಾಗಿ, ಸರ್ಕಾರದ ದುಡ್ಡು ಸೋರಿಹೋಗುವುದಕ್ಕೆ ಆಸ್ಪದವಾಗುತ್ತದೆ. ಒಂದು ಲಕ್ಷ ರೂಪಾಯಿ ಟರ್ನ್ ಓವರ್ ಇದ್ದರೆ, ಮೂರು ಪರ್‌ಸೆಂಟ್ ಷೆಡ್ಯೂಲ್‌ನಿಂದ, ಒಂದು ಪರ್‌ಸೆಂಟ್ ಷೆಡ್ಯೂಲ್‌ಗೆ ಇಳಿಸಬಹುದು. ಯಾರು ಅಧಿಕಾರಿಗಳನ್ನು ಸರಿಮಾಡಿಕೊಂಡಿರುತ್ತಾರೋ ಅವರಿಗೆ ಸೇಲ್ಸ್ ಟ್ಯಾಕ್ಸ್ ಉಳಿಸುವುದಕ್ಕೆ ಸಾಧ್ಯ. ಇದರಿಂದ ಚಿಲ್ಲರೆ ವ್ಯಾಪಾರಿಗಳಿಗೆ ಬಹಳ ಅನುಕೂಲವಾಗಿದೆ. ಯಾವುದಾದರೂ ಷೆಡ್ಯೂಲ್ ಹಾಕಿಕೊಳ್ಳಬಹುದು. ನಾಲ್ಕಾರು ಷೆಡ್ಯೂಲುಗಳನ್ನು ಮಾಡಿರುವುದರಲ್ಲಿ ಸರ್ಕಾರದ ಉದ್ದೇಶವೇನೆಂದರೆ, 4-6 ವಿಧಾನಗಳಲ್ಲಿ ಟ್ಯಾಕ್ಸ್ ಹಾಕಿಬಿಟ್ಟರೆ, ಯಾವುದಾದರೂ ವಿಧಾನದಲ್ಲಿ ಟ್ಯಾಕ್ಸ್ ವಸೂಲಾಗುತ್ತದೆಂದು. ನನ್ನ ಅನುಭವದಲ್ಲಿ ಇದರಿಂದ ಸರ್ಕಾರಕ್ಕೆ ಲುಕ್ಸಾನು ಜಾಸ್ತಿ. ಇದರಿಂದ ಆದಾಯವಿಲ್ಲ. ಈವಾಗ ಸಿಮ್‌ಸನ್ ಕಂಪೆನಿಯಲ್ಲಿ ಕಾರ್ ರಿಪೇರಿಗೆ ಕೊಡುತ್ತಾರೆ. ಲಾರಿ ರಿಪೇರಿಗೆ ಹಾಕಿದಾಗ ಪೆಟ್ರೋಲ್ ಇಂಜಿಕ್ ಇರುತ್ತದೆ. ಇದರ ಬದಲು ಡೀಸಲ್ ಆಯಿಲ್ ಇಂಜಿಕ್ ರಿಪೇರಿಯಾಯಿತೆಂದು ಹಾಕಿಕೊಳ್ಳುತ್ತಾರೆ. ಸೇಲ್ಸ್ ಟ್ಯಾಕ್ಸ್ ವಿಚಾರದಲ್ಲಿ

(SRI C. K. RAJAIAH SETTY)

ನನಗೂ ಮಂತ್ರಿಗಳಿಗೂ ಒಂದು ಚಾಲೆಂಜ್ ಇತ್ತು. ಒಂದು ಫಾರ್‌ಮುಲಾ ಪ್ರಕಾರ ಏಳು ಕೋಟಿ ರೂಪಾಯಿ ಕಂಟ್ರಾಕ್ಟ್ ಕೊಡಿ ಅಂತ ಹೇಳಿದೆ. ರಾಜಿ ಮಾಡಿಕೊಂಡರು. ಇಲಾಖೆಯಲ್ಲಿ ಸ್ಪೆಷಲ್ ಆಗಿ ಕೆಲಸಮಾಡಿ, ಅನುಭವ ಪಡೆದ ಆಫೀಸರುಗಳನ್ನು ಹಾಕಿದರೂ, ಅವರಿಗೆ ಏನೂ ಕೆಲಸವಿಲ್ಲ, ಬಜಾರಿನಲ್ಲಿ ತಿರುಗಿಕೊಂಡಿರುತ್ತಾರೆ. ಪ್ರತಿದಿವಸ ಹಳೆ ತರಗು ಪೇಟೆಯಲ್ಲಿ, ಒಬ್ಬ ಮನುಷ್ಯ ಓಡಾಡುತ್ತಾ ಇದ್ದರೆ, ಬೆಂಗಳೂರು ಸಿಟಿಯಲ್ಲಿ 10 ಲಕ್ಷ ರೂಪಾಯಿ ಸೇಲ್ಸ್ ಟ್ಯಾಕ್ಸ್ ವಸೂಲು ಮಾಡಬಹುದು.

ಶ್ರೀ ಟಿ. ಮರಿಯಪ್ಪ.—ರಫ್‌ಲಿ, ಲೀಕೇಜ್ 50 ಲಕ್ಷ ರೂಪಾಯಿ ಆಗಬಹುದೆಂದು ಎಸ್ಟಿಮೇಟ್ ಮಾಡಿದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಸೇಲ್ಸ್ ಟ್ಯಾಕ್ಸ್ ಡಿಪಾರ್ಟ್‌ಮೆಂಟಿಗೂ ಕೂಡ ಜಾಸ್ತಿ ಕಾಮನ್‌ಸೆನ್ಸ್ ಇರುವ ಅಧಿಕಾರಿಗಳನ್ನು ಹಾಕಬೇಕು. ನಾನು ಒಂದು ಹೋಟೇಲಿನಲ್ಲಿ ಬೋರ್ಡರ್ ಆಗಿದ್ದೆ. ಆ ಹೋಟೇಲಿನವನು ಕೊಂಡ ಆಹಾರಪದಾರ್ಥಗಳ ಬೆಲೆಗಿಂತ, ಅವನ ವ್ಯಾಪಾರ ಕದಮೆ ತೋರಿಸಿದ್ದ. ಯಾರಾದರೂ ನಂಬುವುದಕ್ಕೆ ಆಗುತ್ತದೆಯೇ ? ಅವನು ಕಾಫೀ ಬೋರ್ಡಿನಿಂದ ಕೊಂಡುಕೊಂಡದ್ದು ಹತ್ತು ಸಾವಿರ ರೂಪಾಯಿನಷ್ಟು ಕಾಫಿಬೀಜ. ಅವನು ಹೋಟಲ್ ಮಾಡಿದೆ ಎಂದು ತೋರಿಸಿದ್ದು ಆರು ಸಾವಿರ ರೂಪಾಯಿನಷ್ಟು. ಹಾಲಿಗೆ, ಸಕ್ಕರೆಗೆ, ಕೂಲಿಗೆ, ಪಾತ್ರೆಗೆ ಹೇಗೆ ಕೊಟ್ಟ ? ಸೇಲ್ಸ್ ಟ್ಯಾಕ್ಸಿನಲ್ಲಿ ಲಂಚ ಕಡಮೆ ಯಾಗಬೇಕು. ಆ ಡಿಪಾರ್ಟ್‌ಮೆಂಟಿನಲ್ಲಿ ದಕ್ಷರಾದ ಅಧಿಕಾರಿಗಳಿರಬೇಕು. ಹಿಂದಿನ ಅನುಭವದಿಂದ ಸೇಲ್ಸ್ ಟ್ಯಾಕ್ಸ್ ವಿಚಾರದಲ್ಲಿ ಸಾಕಷ್ಟು ಮಾರ್ಪಾಡಾಗಬೇಕು. ಈಗಿರುವ ಏಳು ಷೆಡ್ಯೂಲ್‌ಗಳನ್ನು ಕಡಮೆ ಮಾಡಿದರೆ, ಸರ್ಕಾರಕ್ಕೆ ಜಾಸ್ತಿ ಉತ್ಪತ್ತಿ ಯಾಗುತ್ತದೆ.

The Government should take immediate steps to see that this sort of illicit cutting of trees in the border areas which are situated roundabout these reserve forests is stopped. Many of the people there are engaged in bringing head loads of wood and selling them in the market and make a living on such income. This sort of illicit cutting from forest areas or parched areas should be stopped forthwith and the Government should make all the necessary bundobust in this matter. There has been some practical difficulty in our areas. Formerly we used to take stones from stone quarries. Now the Government is levying some charges on the stones we take from these quarries. Formerly we used to pay some amount for a permit, say, for three days by which people were allowed to take stones for agricultural purposes or for building purposes. In fact, now we will have to pay for the permit in the first instance. Secondly, we will have to pay to the people who will take out stones. Thirdly apart from all this, the Government is levying a nominal fee of eight annas per cart load for taking out stones. One cart load comes to only 10 to 15 stones and so, for 15 stones, we will be paying eight annas which will be very costly for agriculturists for building homes or for agricultural purposes. Then, Sir, for development of some of the forests in our areas, I should like to point out some of the things. Afforestation may be taken up in our area on some of the good soil wherein there is less of these rocky areas. In the Ghataprabha River valley area, there are large extents of forest land on both sides of the canal which may be converted into beautiful pasture land and good grass can be grown and that would add to the improvement of the forest area in our parts. Coming to the question of disafforestation, many of the so-called reserve forest areas in our Districts are actually and really cultivable areas and they have not yet been disafforested and have not yet been handed over for cultivation. They are simply named as reserve forest areas, but actually they are cultivable areas. Even when such matters are brought to the notice of the Government, the matter is not being expedited and the Government is thinking that minimising the reserve forest areas, would be harmful. I would like to point out that it is not going to harm the interests of the Government and it is better to disafforest such areas and give them for regular cultivation to the people. In Bombay area formerly some of these forest areas were given on five-year contract basis and the people who have cultivated those lands for the last 10 years have converted them into very good cultivable lands and have derived good benefit. According to the previous contract, if the Government intends to take away those lands from those people, the efforts put by those poor people so long would be futile and the lands which have been acquired for cultivation would be rendered useless. These lands have been very well developed and they will help in raising

more food crops and therefore they may be added to cultivable land and they can be disafforested and given to people on regular assessment.

The Wild Life Preservation scheme is one of the healthy schemes which has been brought by Government. We have got some species of animals which are looked upon as curios by foreigners and I for one would support the Wild Life Preservation Act. The Government should spend a little more and see that this Act is implemented to the true letter of the Act. Game Sanctuaries have been established in four or five places and it should be established in some more places and rare species of animals should be protected and preserved so that foreigners may come and look at them. Sir, I also know something of shooting and I am interested in shooting. In these forest areas, due to this Act, no doubt people are afraid of going into the forest area for indiscriminate shooting. But people are however resorting to indiscriminate shooting in the forest areas hecause many of them are holding illicit or unlicensed muzzle-loading guns. It must be investigated and these muzzle-loading guns should be confiscated. If the Government want proper protection to be given, they should at least issue licences to the holders of such weapons and regulate shooting in this area. Many of the people are carrying on illicit shooting and if that is not stopped, that would harm the very object of the Wild Life Preservation Act. The Government should see that illicit shooting and professional hunters are brought to book and enforce this Act vigorously so that it would help to preserve some of the creations of God. I once again say that I support the Demand under Forest and thank the Speaker for giving me an opportunity to speak.

*ಶ್ರೀ ಎಂ. ಎಸ್. ಪಟ್ಟನ್ (ರಾಮದುರ್ಗ).—ಮಾನ್ಯ ಅಧ್ಯಕ್ಷರೇ, ಫಾರೆಸ್ಟ್ ಡಿಮ್ಯಾಂಡಿನ ಮೇಲೆ ನಾನು ಮಾತನಾಡುತ್ತಾ ಒಂದು ವಿಷಯ ಸರ್ಕಾರದ ಲಕ್ಷ್ಯಕ್ಕೆ ತರುತ್ತೇನೆ. ಈಗ ಫಾರೆಸ್ಟ್ ಖಾತೆಯಲ್ಲಿ ಕೆಲ ಕೆಲವು ಕಡೆ ಫಾರೆಸ್ಟ್ ಅಧಿಕಾರಿಗಳು ಮತ್ತು ಜಂಗಲ್ ಸಿಪಾಯಿಗಳಿಂದ ಫಾರೆಸ್ಟ್ ಖಾತೆಗಳೆಲ್ಲಾ ಹಾಳಾಗುತ್ತವೆ. ಮುಖ್ಯವಾಗಿ ಫಾರೆಸ್ಟ್ ಖಾತೆಯಿಂದ ಅಲ್ಲಲ್ಲಿ ನೂರಾರು ಹಳ್ಳಿಯವರು ಜೀವನ ಮಾಡುವ ಸಮಾಚಾರವಿದೆ. ಮೊನ್ನೆ ತಾನೆ ತಮ್ಮ ಗಮನಕ್ಕೆ ತಂದ ಪ್ರಕಾರ ಹರಿಜನರು, ಒಡ್ಡರು ಮತ್ತು ಹಿಂದುಳಿದ ವರ್ಗದವರಿಗೆ ಅಯಾಯ ಭಾಗದ ಫಾರೆಸ್ಟ್ ಖಾತೆಯಲ್ಲಿ ಕೆಲವು ಭಾಗಗಳಲ್ಲಿ ರಿಜರ್ವ್ ಇಟ್ಟು ಸಹಾಯ ಮಾಡಬೇಕು. ಅವರಿಗೆ ಆಗತಕ್ಕ ತೊಂದರೆಗಳನ್ನು ಯೋಚನೆ ಮಾಡಬೇಕು ಎಂದು ನಾನು ಸೂಚನೆ ಮಾಡುತ್ತೇನೆ. ದೊಡ್ಡ ಪ್ರಮಾಣದಲ್ಲಿ ಟ್ರಕ್‌ಗಟ್ಟಲೆ, ಲಾರಿ ಗಟ್ಟಲೆ ಸೌದೆ ಹೋಗುತ್ತಾ ಇದೆ. ಕಾವಲುಗಾರರು ದಾಕ್ಷಿಣ್ಯಕ್ಕೆ ಒಳಗಾಗದೆ ದಕ್ಷತೆಯಿಂದ ಕೆಲಸ ಮಾಡದಿದ್ದರೆ ಫಾರೆಸ್ಟ್ ಖಾತೆಗೆ ಬಹಳ ದೊಡ್ಡ ಹಾನಿಯಾಗುತ್ತದೆ. ಸಣ್ಣ ಸಣ್ಣ ಪ್ರಮಾಣದಲ್ಲಿ ಕಾಡಿನಿಂದ ಸೌದೆಗಳನ್ನು ತೆಗೆದು ಕೊಂಡು ಹೋಗುವವರಿಗೆ ಈಗ ತೊಂದರೆಯಾಗಿದೆ. ಅವರಿಗೆ ಯಾವ ತರಹ ಸೌಲಭ್ಯಗಳನ್ನು ಒದಗಿಸ ಬೇಕೋ ಅವುಗಳನ್ನು ಒದಗಿಸುವುದು ಅವಶ್ಯವಾಗಿದೆ ಎಂದು ನನ್ನ ಸೂಚನೆ.

ಶ್ರೀ ಎಚ್. ಎಸ್. ರುದ್ರಪ್ಪ.—ಎಲ್ಲಿ ?

ಶ್ರೀ ಎಂ. ಎಸ್. ಪಟ್ಟನ್.—ಬೆಳಗಾಮ್ ಡಿಸ್ಟ್ರಿಕ್ಟ್ ಮತ್ತು ಬಿಜಾಪುರ ಡಿಸ್ಟ್ರಿಕ್ಟ್‌ನಲ್ಲಿ ಮತ್ತು ಬಹುತೇಕ ಉತ್ತರ ಕರ್ನಾಟಕದಲ್ಲಿ ಕೆಲವು ತಾಲ್ಲೂಕು ಪಟ್ಟಣಗಳ ಹಿಂದೆ ಕೆಲವು ಭಾಗಗಳಲ್ಲಿ ಕೆಲ ಕೆಲವು ಅರಣ್ಯಗಳಿವೆ. ಅಲ್ಲಿ ಬಡಜನರ ಉಪಯೋಗಕ್ಕೆ ಕೆಲವು ಭಾಗಗಳನ್ನು ರಿಜರ್ವ್ ಮಾಡಬೇಕು. ತಲೆ ಹೊರೆಯಿಂದ ಉಪ ಜೀವನ ಆಗುವುದಕ್ಕೆ ಯಾವ ತರಹ ತೊಂದರೆಯೂ ಇಲ್ಲದ ಹಾಗೆ ಬೇಚೆ ವಗ್ಯೆರೆ ' ಸೌಲಭ್ಯಗಳನ್ನು ಒದಗಿಸಬೇಕು ಮತ್ತು ವೇಳೆಗೆ ಸರಿಯಾಗಿ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕು.

ಸರಿಯಾದ ವ್ಯವಸ್ಥೆಮಾಡಿ ಪ್ರತಿಯೊಂದು ಹಳ್ಳಿಯಲ್ಲೂ ಅಲ್ಲಿರುವ ಜಂಗಲ್ ಸಿಪಾಯಿಗಳಿಂದ ಆಗುತ್ತಿರುವ ತೊಂದರೆಯನ್ನು ತಪ್ಪಿಸಬೇಕು.

3 P.M.

ಸೊಂಡೂರು ಭಾಗದ ಕಾಡುಗಳಲ್ಲಿ ಗಂಧದ ಕಟ್ಟಿಗೆ ? ಹಳವಾಗಿದೆ. ಅದು ಸರ್ಕಾರದ ಪರವಾನಿಗೆ ಇಲ್ಲದೆ ಹೆಚ್ಚಾಗಿ ಸಾಗಿಹೋಗುತ್ತಿದೆ. ಅದರ ಕಡೆ ಹೆಚ್ಚು ಲಕ್ಷ್ಯ ಕೊಡಬೇಕೆಂದು ಸೂಚನೆ ಮಾಡುತ್ತೇನೆ. ಮುಖ್ಯವಾಗಿ ಬಡಜನರಿಗಾಗುವ ತೊಂದರೆಯನ್ನು ದೂರಮಾಡಬೇಕೆಂದು ಹೇಳುವುದಕ್ಕೆ ಇಷ್ಟು ಒತ್ತಾಯ ಮಾಡಿ ಸೂಚನೆಮಾಡಿ ನನ್ನ ನಾಲ್ಕು ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಆರ್. ಬದರಿನಾರಾಯಣ್ (ತೀರ್ಥಹಳ್ಳಿ).—ಸಭಾಪತಿಗಳೇ, ಈ ದಿವಸ ನಮ್ಮ ಮುಂದಿರ ತಕ್ಕಂಥ ಐದನೆಯ ಬೇಡಿಕೆ ಅಂದರೆ ಅರಣ್ಯ ಇಲಾಖೆ ಬೇಡಿಕೆಯನ್ನು ಸಮರ್ಥನೆ ಮಾಡುತ್ತಾ ನಾನು ನಾಲ್ಕು ಮಾತುಗಳನ್ನು ಇಲ್ಲಿ ಹೇಳಬೇಕೆಂದು ಅಪೇಕ್ಷೆ ಪಡುತ್ತೇನೆ. ನಮ್ಮ ನವಮ್ಯೈನೂರು ರಾಜ್ಯದಲ್ಲಿಟ್ಟಿನ ವಿಸ್ತೀರ್ಣದಲ್ಲಿ ಶೇಕಡ 18 ಭಾಗ ಕಾಡಿನ ಪ್ರದೇಶವಿದೆ. ಅದರಲ್ಲಿ ಸೇಕಡ 75 ಅಂದರೆ ಮುಕ್ಕಾಲು ಭಾಗ ಮಲೆನಾಡಿನ ಪ್ರದೇಶದಲ್ಲಿದೆ. 13,553 ಚದರ ಮೈಲಿಗಳಲ್ಲಿರುವ ಕಾಡಿನ ಪ್ರದೇಶದಲ್ಲಿ ನಮಗೆ 3¾ ಕೋಟಿ ರೂಪಾಯಿಗಳ ವರಮಾನ ಬರುತ್ತದೆ. ಅಂದಮೇಲೆ ಈ ಅರಣ್ಯ ಖಾತೆಯಲ್ಲಿ ನಮ್ಮ ದೇಶಕ್ಕೆ ಹೆಚ್ಚಿನ ವರಮಾನ ಬರುತ್ತದೆ ಎಂಬುದನ್ನು ನಾವುಗಳು ಮರೆಯುವಹಾಗಿಲ್ಲ. ಈ ಸಂದರ್ಭದಲ್ಲಿ ನಾವು ಕೆಲವು ಅಂಶಗಳನ್ನು ಗಮನಿಸ ಬೇಕಾಗಿದೆ. ಮಳೆಯನ್ನು ತರತಕ್ಕಂಥ ಮೋಡಗಳು, ಸಮುದ್ರದಿಂದ ಬರುವ ಮೋಡಗಳು ಎತ್ತರವಾಗಿರುವ ಸಹ್ಯಾದ್ರಿಪರ್ವತ ಶ್ರೇಣಿಯ ಬಳಿ ಬಂದು ಮಲೆನಾಡು

(ಶ್ರೀ ಎ. ಆರ್. ಬದರಿನಾರಾಯಣ್)

ಪ್ರದೇಶದಲ್ಲಿ ಮಳೆಯಾಗಿ ನುರಿದು ನಮ್ಮ ಮಲೆನಾಡು ಪ್ರದೇಶದಲ್ಲಿ 30 ಅಂಗುಲದಿಂದ ಹಿಡಿದು 400 ಅಂಗಲ ಗಳವರೆಗೆ ಮಳೆಯನ್ನು ನುರಿಸುತ್ತವೆ. ಇದಕ್ಕೆ ಆ ಪ್ರದೇಶದ ಹವಾಗುಣ ಮತ್ತು ಎತ್ತರವಾಗಿರುವ ಪ್ರದೇಶ ಕಾರಣ. ಹೀಗಾಗಿ ಅಲ್ಲಿ ಹೆಚ್ಚಿನ ಮಳೆ ಬರುತ್ತದೆ. ಆದರೆ ಈಗ ನಮ್ಮ ಮಲೆನಾಡಿನಲ್ಲಿದ್ದಂಥ ಅರಣ್ಯ ಸಂಪತ್ತು ಬಹಳಮಟ್ಟಿಗೆ ಕಡಮೆಯಾಗಿದೆ ಎಂಬುದನ್ನು ಎಲ್ಲರೂ ಕೂಡ ಗಮನಿಸಿದ್ದಾರೆ. ನುಮಾರು 20 ವರ್ಷಗಳ ಕೆಳಗೆ ಎಂದು ಕಾಣುತ್ತದೆ —ಶಿವಮೊಗ್ಗ ಜಿಲ್ಲೆಯಲ್ಲಾಗಲಿ ಅಥವಾ ಚಿಕ್ಕಮಗಳೂರು ಜಿಲ್ಲೆಯಲ್ಲಾಗಲಿ ಅಥವಾ ಮಲೆನಾಡಿನ ಯಾವ ಪ್ರದೇಶದಲ್ಲಾಗಲಿ ಕಾಡಿನ ಪ್ರದೇಶಗಳಲ್ಲಿ ಪ್ರವಾಸ ಮಾಡಿದರೆ ಗುಹೆಯೊಳಗೆ ಹೋದಹಾಗೆ ಭಾಸವಾಗುತ್ತಿತ್ತು, ಅಂಥ ದಟ್ಟವಾದ ಕಾಡುಗಳಿದ್ದವು. ಈ ದಿವಸ ನೋಡಿದರೆ ಎಲ್ಲಾ ಕಡೆಗಳಲ್ಲೂ ಬಟ್ಟಬಯಲಾದ ಪ್ರದೇಶವನ್ನು ನಾವು ಕಾಣುತ್ತಿದ್ದೇವೆ. ಹಿಂದೆ ಯಾವುದು ಒಂದು ದಟ್ಟವಾದ ಕಾಡಾಗಿತ್ತೋ ಅದು ಈ ದಿವಸ ಒಂದು ಬೋಳುಗುಡ್ಡವಾಗಿ ಬಹಳ ಕಡಮೆ ಪ್ರಮಾಣದ ಮರಗಿಡಗಳು ಅಲ್ಲಿ ಕಾಣುತ್ತಿವೆ. ಅಂದ ಮೇಲೆ 20 ವರ್ಷಗಳ ಹಿಂದೆ ಇದ್ದಹಾಗೆ ಈ ದಿವಸ ಕಾಡಿಲ್ಲ, ಮಳೆ ಕೂಡ ಬಹಳ ಕಡಮೆಯಾಗಿದೆ ಎಂದು ತಜ್ಞರನೇಕರು ಹೇಳುತ್ತಾರೆ. ಪನನಂಪತ್ತಾದ ವ್ಯಕ್ಷಗಳಿದ್ದರೆ ಮೋಡಗಳು ಆಕರ್ಷಿತವಾಗಿ ಮಳೆ ನುರಿಯುತ್ತಿತ್ತು ಎಂದು ತಜ್ಞರು ಹೇಳುತ್ತಾರೆ. ಹೀಗಿರುವುದರಿಂದ ಬರ ಬರುತ್ತಾ ಕ್ರಮೇಣ ಮಲೆನಾಡಿನಲ್ಲಿ ಮಳೆ ಕಡಮೆಯಾಗಿದೆ. ನೀರಾವರಿ ನಂಪತ್ತಾಗಲಿ ಅಥವಾ ಅರಣ್ಯ ನಂಪತ್ತಾಗಲಿ, ಯಾವ ನಂಪತ್ತೇ ಆಗಲಿ ಮಲೆನಾಡಿನಲ್ಲಿ ಮಳೆಯಾದರೆ ಮಾತ್ರ ಇರುತ್ತದೆ ಎಂಬುದನ್ನು ಯಾರೂ ಮರೆಯುವುದಕ್ಕಾಗುವುದಿಲ್ಲ. ಈ ದೃಷ್ಟಿಯಿಂದ ಮಳೆ ಕಡಮೆಯಾದರೆ ಕಾಡು ಕಡಮೆಯಾಗುವುದರಿಂದ ದೇಶಕ್ಕೆ ಎಷ್ಟುಮಟ್ಟಿನ ಅನಾಹುತವಾಗುತ್ತದೆಂಬುದನ್ನು ನಾವು ಮರೆಯಬಾರದು. ನಮ್ಮ ಅರಣ್ಯ ನಂಪತ್ತಿನ ಅಭಿವೃದ್ಧಿಯ ಕಡೆಗೆ ಗಮನ ಕೊಡದಿದ್ದರೆ ಅನೇಕ ತೊಂದರೆಗಳಾಗುತ್ತವೆ. ಕಾಡು ಇಲ್ಲದಿದ್ದರೆ ಮಳೆಯಿಲ್ಲ, ಮಳೆಯಿಲ್ಲದಿದ್ದರೆ ನಮ್ಮ ದೇಶದಲ್ಲಿ ಸುಭಿಕ್ಷವಿಲ್ಲ ಎಂಬುದನ್ನು ಮರೆಯಬಾರದು. ಕಾಡಿನಲ್ಲಿ ಹೆಚ್ಚು ಭಾಗ, ಮುಕ್ಕಾಲುಭಾಗ ಮಲೆನಾಡಿನಲ್ಲಿದೆ. ಇದು ಅಂಕಿ ಅಂಶಗಳಲ್ಲಿರುವ ವಿಚಾರ. ಇದ್ದ ಕಾಡು ಅನೇಕ ವರ್ಷಗಳಿಂದ ಕೊರತೆಗೀಡಾಗಿದೆ.

ಈಗ ವಿದ್ಯುಚ್ಛಕ್ತಿ ಇಲಾಖೆಯವರು ಜೋಗ್‌ನಿಂದ ತರೀಕೆರೆಯವರೆಗೆ ಕಾಡಿನಲ್ಲಿ ಟ್ರಾನ್ಸ್‌ಮಿಷ್ಷನ್ ಲೈನ್ ಹಾಕಿದ್ದಾರೆ, ತೀರ್ಥಹಳ್ಳಿ ಕಾರವಾರದ ಕಡೆಯೂ ಹಾಕಿದ್ದಾರೆ. ಇದರಿಂದ ಸುಮಾರು 200-250 ಮೈಲಿ ಅಗಲವಿರುವ ಪ್ರದೇಶದಲ್ಲಿ ಕಾಡು ಕಡಮೆಯಾಗಿರುವುದನ್ನು ನಾವು ಕಾಣಬಹುದು. ಸಾಲದ್ದಕ್ಕೆ ಈಗ ನೀರಾವರಿ ಯೋಜನೆಗಳಿಂದ, ಲಕ್ಕವಳ್ಳಿ, ತುಂಗಾ ಮತ್ತು ಶರಾವತಿ ಯೋಜನೆಗಳಿಂದ ಬಹಳ ಕಾಡು ಕಡಮೆಯಾಗಿದೆ, ಲಕ್ಷಾಂತರ ಎಕರೆಗಳ ಕಾಡು ಮುಳುಗಡೆಯಾಗಿದೆ. ಅದಲ್ಲದೆಯೇ ಈಚೆಗೆ ಜಪಾನಿನ ಮೇಲಿನ ಒಂದು ದಾಹ ಹೆಚ್ಚಾಗಿರುವುದರಿಂದ ಕಾಡಿನಲ್ಲಿರುವ ಜಪಾನು ಕೊಡಿ ಎಂದು ನರ್ಕಾರದವರನ್ನು ಕೇಳುತ್ತಿದ್ದಾರೆ, ಅರಣ್ಯ ಇಲಾಖೆಯವರು ರೆವೆನ್ಯೂ ಇಲಾಖೆಗೆ ಕಾಡು ಪ್ರದೇಶವನ್ನು ಕೊಡುತ್ತಿದ್ದಾರೆ. ಅಲ್ಲದೆ ಎಂ. ಆರ್. ಪಿ. ಲೈಸೆನ್ಸ್ ಕೊಟ್ಟು ಮರೆ ನಾಡಿನ ರಿಯಾಯಿತಿ ರೂಲ್ಸ್ ಪ್ರಕಾರ ಮಲೆನಾಡಿನವರಿಗೆ ಡಿಸ್ಪೆನ್ಸ್ಕ್ ಫಾರೆನ್ಸುಗಳಲ್ಲಿ ನೌಕರ್ಯ ಕೊಟ್ಟಿದ್ದಾರೆ. ಇದರಿಂದ ಕಾಡು ಕಡಮೆಯಾಗಿದೆ. ಇದಲ್ಲದೆ ನ್ಯಾಗ್ಲಿಂಗ್ ಅನೇಕವಾಗಿರುವುದರಿಂದ ಕಾಡು ಕಡಮೆಯಾಗುತ್ತಿದೆ. ಬೆಂಗಳೂರು, ದಾವಣಗೆರೆ, ಹರಿಹರ ಈ ಕಡೆಗಳಿಗೆ ಬೇಕಾದ ನೌದೆಗಾಗಿ ಮತ್ತು ಐರ್ ವರ್ಕ್ಸ್‌ಗೆ ಬೇಕಾದ ನೌದೆ ಮತ್ತು ಇದ್ದಲಿಗಾಗಿ ಕೂಡ ಕಾಡನ್ನು ಕಡಿಯುತ್ತಿದ್ದಾರೆ. ಅಂದ ಮೇಲೆ ಈಗ ನಮಗೆ ಬೇಕಾದಂಥ ಹೆಚ್ಚಿನ ಅರಣ್ಯ ನಂಪತ್ತು ಕಡಮೆಯಾಗಿದೆ. ಕಾಡಿನಲ್ಲಿರುವ ಮರಗಳನ್ನು ಕಡಿಯುವುದು ಮತ್ತು ಹೊನದಾಗಿ ಬೆಳೆನುವುದು ಈ ಎರಡನ್ನು ನೋಡಿದರೆ ಕಾಡನ್ನು ಎಷ್ಟು ಮಟ್ಟಿಗೆ ಉಪಯೋಗಿನುತ್ತಿದ್ದೇವೋ ಅದೇ ಮಟ್ಟದಲ್ಲಿ, ಅದೇ ಪ್ರಮಾಣದಲ್ಲಿ ಮರಗಳನ್ನು ಕಾಡಿನಲ್ಲಿ ಬೆಳೆನುತ್ತಿದ್ದೇವೆಯೇ ಎಂಬ ಅನುಮಾನ ಬರುತ್ತದೆ. ಹಿಂದೆ ನಮ್ಮ ಕಾಡಿನಮೇಲೆ ಇಷ್ಟು ಧಾಳಿ ಇರಲಿಲ್ಲ. ಈಗ ಧಾಳಿ ಹೆಚ್ಚಾಗಿರುವುದರಿಂದ ನರ್ಕಾರದವರು ಕಡಿದ ಗಿಡಗಳ ನ್ಥಾನದಲ್ಲಿ ಹೊನದಾಗಿ ಗಿಡಗಳನ್ನು ಬೆಳೆನಲು ಕಾರ್ಯಕ್ರಮ ಹಾಕಿದ್ದಾರೆಯೇ, ಹಣ ಅದಕ್ಕೆ ಒದಗಿಸಿದ್ದಾರೆಯೇ ಎಂಬುದನ್ನು ನ್ವಲ್ಪ ಯೋಚನೆ ಮಾಡಬೇಕಾಗಿದೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ 75 ನಾವಿರ ಎಕರೆ ಪ್ರದೇಶವನ್ನು ಅಫಾರೆಸ್ಟ್ರೇಷ್ ಮಾಡುವುದಕ್ಕೆ 52 ಲಕ್ಷ ರೂಪಾಯಿಗಳನ್ನೊದಗಿಸಿದ್ದಾರೆ. ಈ ವರ್ಷ 7½ ಲಕ್ಷ ರೂಪಾಯಿಗಳನ್ನೊದಗಿಸಿದ್ದಾರೆ. ಈ ಪೈಕಿ ಶಿವಮೊಗ್ಗ ನರ್ಕಲ್ಲಿಗೆ ಕೇವಲ 70 ನಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ಕಾಣುತ್ತದೆ. ಶಿವಮೊಗ್ಗ ನರ್ಕಲ್ ಅಂದರೆ ಚಿಕ್ಕಮಗಳೂರು, ಹಾನನ, ಶಿವಮೊಗ್ಗ ಈ ಪ್ರಾಂತಗಳಿಗೆ 70 ನಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಕಾರವಾರದಲ್ಲಿ ಇಕ್ವೆಸ್ಟಿಗೇಷ್ಟಗಾಗಿ ಒಂದು ಲಕ್ಷ ರೂಪಾಯಿಗಳನ್ನೊದಗಿಸಿದ್ದಾರೆ. ನಮ್ಮ ದೇಶದಲ್ಲಿ ಹೆಚ್ಚಾಗಿ ಅರಣ್ಯ ನಂಪತ್ತನ್ನು ಹೊಂದಿರುವ ಮಲೆನಾಡನ್ನು, ಅಲ್ಲರುವ ಕಾಡನ್ನು ಅಭಿವೃದ್ಧಿಮಾಡಲು, ರಿಜುವಿನೇಷ್ಟಮಾಡಿ ಕಾಡನ್ನು ಪುನರ್ವ್ಯವಸ್ಥೆ ಮಾಡಲು 70 ನಾವಿರ ರೂಪಾಯಿಗಳನ್ನು ಶಿವಮೊಗ್ಗ ನರ್ಕಲ್ಲಿಗೆ ಕೊಟ್ಟರೆ ಅನೇಕ ರೀತಿಯಲ್ಲಿ ಕಾಡಿನಮೇಲೆ ಧಾಳಿ ಮಾಡುತ್ತಿರುವಾಗ ಅಷ್ಟೇ ಪ್ರಮಾಣದಲ್ಲಿ ಹಣವನ್ನು ಕಾಡಿನ ಅಭಿವೃದ್ಧಿಗಾಗಿ ವ್ಯಯ ಮಾಡಿದ ಹಾಗಾಯಿತೆ ಎಂಬುದನ್ನು ಯೋಚನೆ ಮಾಡಬೇಕು. ಒಂದುವೇಳೆ 20 ವರ್ಷಗಳ ಕಾಲ ಈಗ ಮಾಡುತ್ತಿರುವಂತೆ ಕಾಡಿನಮೇಲೆ ಧಾಳಿ ಮಾಡಿದರೆ ಅದರ ಪರಿಣಾಮವೇನು ? ನಂಪೂರ್ಣವಾಗಿ ಕಾಡುಗಳು ನಾಶವಾಗಿ ಮಳೆ ಕಡಮೆಯಾಗಿ ದೇಶಕ್ಕೆ ಕ್ಷೋಭೆ ಬರುವುದರಲ್ಲಿ ಯಾವ ನಂದೇಹವೂ ಇಲ್ಲ ಎಂದು ಘಂಟಾಘೋಷವಾಗಿ ಹೇಳಬಹುದು. ಆದುದರಿಂದ ಮಾನ್ಯ ವ್ಯವನಾಯ ಮತ್ತು ಅರಣ್ಯ ಶಾಖೆಯ ಮಂತ್ರಿಗಳು ಹೆಚ್ಚಿನ ಗಮನ ಕೊಟ್ಟು ಕಾಡಿನ ಅಭಿವೃದ್ಧಿಯ ಬಗ್ಗೆ ಪ್ರಯತ್ನ ಮಾಡಬೇಕು, ಹಾಗು ಅದಕ್ಕಾಗಿ ಹಣ ಒದಗಿನಬೇಕು. ನ್ವಲ್ಪ ಹಣ ಒದಗಿಸಿದರೆ ಅದು ನಾಲದು. ಆದ್ದರಿಂದ ಬಹಳ ದೊಡ್ಡ ಪ್ರಮಾಣದಲ್ಲಿ ಹಣ ಒದಗಿನಬೇಕೆಂದು ನಾನು ಅವರಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನಮ್ಮ ರಾಜ್ಯದ ಅರಣ್ಯದಲ್ಲಿ ತೇಗು, ತಂಗಡಿ, ಗಂಧದ ಮರ, soft wood ಹೀಗೆ ನಾನಾ ತರದ ಉಪಯುಕ್ತ ಮರಗಳು ಕಾಡುಗಳಲ್ಲಿ ಬೆಳೆಯುತ್ತವೆ. ಅದರಲ್ಲಿಯೂ ಗಂಧದ ಮರದ ಉಪಯುಕ್ತತೆ ಬಹಳಷ್ಟಿದೆ. ಈಗಾಗಲೇ ನಮ್ಮ ರಾಜ್ಯದಲ್ಲಿ ಎರಡು Sandal wood oil factory

ಗಳು ಇವೆ. ಇದಕ್ಕಾಗಿ ಒದಗಿಸಿದ ಹಣ ಸಾಕಾಗುವುದಿಲ್ಲ. ಇದೊಂದು ಬಹಳ ಮುಖ್ಯವಾದ ವಿಚಾರವಾಗಿದೆ. ಆದ್ದರಿಂದ ಸರ್ಕಾರ ಇತ್ತಕಡೆ ಹೆಚ್ಚು ಗಮನ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ ಹೇರಳವಾದ ಅರಣ್ಯ ಸಂಪತ್ತು ಇದೆ. ಇನ್ನೊಂದು ಮುಖ್ಯವಾದ. ತೇಗದ ಮರದ ಸಂಪತ್ತು ಕಡಮೆಯಾಗುತ್ತಾ ಇದೆ ತೇಗದ ಮರಗಳನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಕಡಿಯುತ್ತಾರೆ. ಆದರೆ ಪುನಃ ಅಷ್ಟೇ ಪ್ರಮಾಣದಲ್ಲಿ ಗಿಡಗಳನ್ನು ಹಚ್ಚಬೇಕು. ಅಂದರೆ ಈ ಸಂಪತ್ತು ಕಡಮೆಯಾಗುವುದಿಲ್ಲ. ಅರಣ್ಯ ಸಂಪತ್ತು ಕಾಡು ಕಿಚ್ಚು ಮೂಲಕ ಸಹ ಬಹಳವಾಗಿ ಹಾಳಾಗುತ್ತದೆ. ಕಾಡು ಕಿಚ್ಚು ಏತಕ್ಕೋಸ್ಕರ ಉದ್ಭವಿಸುತ್ತದೆ ಎಂಬ ಕಾರಣವನ್ನು ಕಂಡುಹಿಡಿದು, ಅದನ್ನು ಕಡಮೆ ಹೇಗೆ ಮಾಡಬೇಕು ಎಂಬುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಈ ರೀತಿ ಕಾಡುಕಿಚ್ಚಿನ ಹಾವಳಿಯಿಂದ ಕಾಡಿನ ಸಂಪತ್ತು ನಾಶವಾಗುವದಕ್ಕೆ ಅವಕಾಶವಾಗಿದೆ. ಇದನ್ನು ತಡೆಯುವದಕ್ಕೆ ಕ್ರಮ ತೆಗೆದುಕೊಳ್ಳಬೇಕು.

ಶರಾವತಿ ವ್ಯಾಲಿ ಪ್ರಾಜೆಕ್ಟು ಮತ್ತು ಲಕ್ಕವಳ್ಳಿ ಯೋಜನೆಯ ಮುಳುಗಡೆ ಪ್ರದೇಶದಲ್ಲಿ ಒಂದು ದೊಡ್ಡ ಕಾಡು ಇದೆ. ಆ ಕಾಡಿನಲ್ಲಿಯ ಮರಗಳನ್ನು ಕಡಿಯುವದಕ್ಕೆ ಹರಾಜು ಮೂಲಕ ಕೊಟ್ಟಿದ್ದಾರೆ. ಎಷ್ಟು ಹಣಕ್ಕೆ ಕೊಟ್ಟಿದ್ದಾರೆ ಅದು ನನಗೆ ಗೊತ್ತಿಲ್ಲ. ಆದರೆ ಈ ಮುಳುಗಡೆ ಪ್ರದೇಶದಲ್ಲಿಯ ಕಾಡು ಉಪಯೋಗಿಸಬೇಕು. ಅದು ಹಾಳಾಗಬಾರದು. ಕಾಡಿನಲ್ಲಿಯ ಗಿಡಗಳನ್ನು ಕಡಿದುಹಾಕುವದರಿಂದ ಕಾಡು ಹಾಳಾಗುತ್ತಿದೆ. ಪುನಃ ಗಿಡಗಳನ್ನು ನೆಡುವ ಕ್ರಮ ತೆಗೆದುಕೊಂಡು ಕಾಡಿನ ಸಂಪತ್ತನ್ನು ಉಳಿಸಿಕೊಳ್ಳಬೇಕಾಗಿದೆ. ಇದಕ್ಕಾಗಿ ಹೆಚ್ಚು ಹಣ ಬೇಕಾಗುತ್ತದೆ. ಸರ್ಕಾರದವರು ಇದನ್ನೆಲ್ಲಾ ವಿಮರ್ಶೆಮಾಡಿ ನೋಡಬೇಕು ಮತ್ತು ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಪ್ಪ ಕಾಡನ್ನಾದರೂ ರಕ್ಷಣೆ ಮಾಡಬೇಕು. ಅದೇ ರೀತಿಯಾಗಿ ಖಾನಗೀ ಮಾಲೀಕತ್ವದಲ್ಲಿರ ತಕ್ಕಂಥಾ ಕಾಡನ್ನು ಕಾಪಾಡಬೇಕಾಗಿದೆ. ಕೆಲವು ಕಡೆ grazing ಗಾಗಿ ಕಾಡನ್ನು ಕಾಯ್ದಿರಿಸಲಾಗಿದೆ ಎಂದು ಕಾಣುತ್ತದೆ. ಇನ್ನೊಂದು ವಿಚಾರ ಹೇಳಬೇಕಾಗಿದೆ. ಕಾಡಿನಲ್ಲಿ indiscriminate shooting ನಡೆಯುವದಕ್ಕೆ ಅವಕಾಶಕೊಡಬಾರದು. ಏಕೆಂದರೆ ಮೃಗಸಂಪತ್ತು ಹಾಳಾಗುತ್ತದೆ.

ಇನ್ನು ಸೇಲ್ಸ್ ಟ್ಯಾಕ್ಸ್ ವಿಚಾರ. ಪುಸ್ತಕ ಮಾರಾಟದಮೇಲೆ outturn tax ಹಾಕಿದ್ದಾರೆ. ಅದನ್ನು ತೆಗೆದುಹಾಕುವದಕ್ಕೆ ಪರಿಶೀಲನೆ ಮಾಡುತ್ತೇವೆಂದು ಅರ್ಥಸಚಿವರು ಹೇಳಿದ್ದನ್ನು ಕಾರ್ಯರೂಪಕ್ಕೆ ತರಬೇಕೆಂದು ನಾನು ಹೇಳುತ್ತೇನೆ. ಎಲ್ಲ ಬುಕ್ ಸೆಲರ್ಸ್ ಬಹಳ ಬಡವರಾಗಿದ್ದಾರೆ. ಈ ವಿಷಯಕ್ಕೆ ಸರ್ಕಾರ ಗಮನ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮುಖ್ಯವಾಗಿ ನಮ್ಮ ದೇಶದ ಅಭಿವೃದ್ಧಿಯಾಗಬೇಕಾದರೆ ಅರಣ್ಯ ಸಂಪತ್ತನ್ನು ರಕ್ಷಿಸಿ, ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ದೇಶದಲ್ಲಿ ಮಳೆಯಾಗುವುದುಕೂಡ ಅರಣ್ಯವಿರುವುದರಿಂದಲೇ ಅರಣ್ಯ ಸಂಪತ್ತಿನ ಬಗ್ಗೆ ಎಷ್ಟು ಗಮನ ಕೊಟ್ಟರೂ ಅದು ಸಾಲದು. ಎಷ್ಟು ಹಣ ಅದಕ್ಕಾಗಿ ಒದಗಿಸಿದರೂ ಅದು ಕಡಿಮೆ. ದಯವಿಟ್ಟು ಈ ವರ್ಷದ ಬಜೆಟ್‌ನಲ್ಲಿ ಹೆಚ್ಚು ಹಣ ಹಾಕಬೇಕೆಂದು ಈ ಸಂದರ್ಭದಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. CHAIRMAN (Sri J. H. Shamsuddin).—The Hon'ble Member has one minute more.

Sri A. R. BADRINARAYAN.—You must please permit me. I have not been shown any indulgence from the Chair.

Mr. CHAIRMAN.—I am sorry. I have not shown any indulgence to anybody.

Sri A. R. BADRINARAYAN.—I shall finish in five minutes.

Mr. CHAIRMAN.—No, Sir.

***Smt. VIJAYA RAGHAVENDER RAO** (Chitapur).—Mr. Speaker, I rise to support the demands that are before the House. I wish to confine myself to the forest demand only. The forest area that Mysore now exhibits is about 13,553 square miles, *i.e.* about 18 per cent of the State is covered with forest. The forest is a source of considerable income to our State and it yields a revenue of about Rs. 3½ crores. The real forest work is understood by those who really love nature and who are interested in it. The development of the forest means protection of flora and fauna. But this protection of nature cannot be stretched too long as the plant is the basis of animal existence. Animals cannot survive without the chlorophyll of the plant. In order to maintain the balance of nature both flora and fauna have to co-exist. Now, how should we make the best use of the forest contents? Here, Government has already been paying attention to raise special teak plantation in North Kanara, Coorg and Shimoga Districts. Government proposes to take up special plantation in about 600 acres and here I must ask the Government to bear one thing in mind. That is, the timber should be protected from the insects and the worms that usually invade it. It should be protected as early as possible from these parasitic worms. Secondly, medicinal plants grow all over the forest area. That is, medicinal plants are scattered all through the forest region. So I hope the Government will undertake

(SMT. VIJAYA RAGHAVENDER RAO)

cultivation of these medicinal plants in the concentrated areas. This will help the manufacture of ayurvedic medicines.

Thirdly, in regard to soil conservation schemes every forest division, apart usual equipment, must be provided with a laboratory to test (1) the p.h. value of the soil (2) the rate of soil erosion and (3) to find out the insecticides and wormicides to fight insects and worms which are parasitic on timber.

Hyderabad Karnatak area is not blessed with a thick forest. The forest area is meagre and is full of small thorny shrubs and trees. I hope the Government will pay attention for the removal of these shrubs and to develop this area for the grazing purposes.

Lastly, speedy development of agriculture and industry must not threaten the destruction of wild fauna. Of course the Government is taking a lot of care by establishing national parks. Nearly 550 square miles have been utilised for preservation of the wild fauna. Still the human progress should not be at the expense of nature. The variety and beauty of the fauna of the Mysore Forests quicken the power of appreciation in us. Among the fauna the conspicuous specie is the elephant followed by the cheetah and tiger. As I have told in my previous speech these species are becoming extinct. I hope that these species will be kept alive.

The increase in population, improved communications, and means of transport are also factors responsible in diminishing the wild animals. Protection of our forest means the protection of its flora and the fauna. So, we must make an attempt to teach a layman something about the beauty and the interest and the value of our lively, magnificent forest wealth. Of course, man has to protect himself against the beasts, but not at the cost of their complete destruction. We are proud of our huge mountains, glorious forests and beautiful flowers. And imagine what emptiness it will create if our fauna were to disappear. In one of the papers I read that the deplorable state of ignorance and indifference in respect of the country's magnificent flora and fauna is giving way to a sympathetic appreciation of their vital place in the life of the land. Our people are now taking a healthy and wholesome interest in regard to the species of animals and plants which are fast vanishing. I hope the Government will take a healthy step to preserve the rich variety of animal and plant life.

ಶ್ರೀ ಪುಟ್ಟೇಗೌಡ (ಅರಕಲಗೂಡು).—ಅಧ್ಯಕ್ಷರೇ, ಮೊಟ್ಟಮೊದಲನೆಯದಾಗಿ ಫಾರೆಸ್ಟ್ ಇಲಾಖೆಯಲ್ಲಿ ಬಹಳ ವರಮಾನ ಬರತಕ್ಕಂಥ ಕೆಲವು ಮರಗಳಿರುತ್ತವೆ. ಅರಣ್ಯ ಶಾಖೆಯವರು ಜಾಸ್ತಿನಿಗಾ ಕೊಟ್ಟಿಲ್ಲ ವೆಂದು ನಾನು ಹೇಳಬೇಕಾಗುತ್ತದೆ. ಏತಕ್ಕೆಂದರೆ ಕಾಡಿನಲ್ಲಿ ಅಳಿಲೇಕಾಯಿ, ಸೀಗೇಕಾಯಿ ಅಂಟವಾಳ ಇತ್ಯಾದಿ ಇನ್ನೂ ಕೆಲವು ಫಾರೆಸ್ಟ್ ಪ್ರಾಡ್ಯೂಸ್ ಬೇಕಾದಷ್ಟು ಸಿಕ್ಕುತ್ತದೆ. ಈಗ ಸರ್ಕಾರಕ್ಕೆ ಬರತಕ್ಕ ವರಮಾನ ಇದರಿಂದ ಜಾಸ್ತಿಯಾಗಿದೆ. ಹೀಗಿದ್ದರೂ ಅರಣ್ಯಶಾಖೆಯವರು ಈ ವಿಚಾರವಾಗಿ ಅಷ್ಟಾಗಿ ನಿಗಾಕೊಟ್ಟಿಲ್ಲ ಎಂಬುದಾಗಿ ಹೇಳಬೇಕಾಗಿದೆ. ಈಗ ಹಾಲಿ ಪ್ರತಿವರ್ಷವೂ ಮಾಡಿರತಕ್ಕ ಪ್ಲಾಂಟೇಷನ್‌ನಿನಲ್ಲಿ ಎಷ್ಟು ವರಮಾನ ಬರುತ್ತದೆ ಎಂಬುದಾಗಿ ತಿಳಿಯುವುದಿಲ್ಲ, ಎಷ್ಟು ಮರಗಳು ಇವೆ, ಯಾವ ಯಾವ ಜಾತಿ ಮರಗಳು ಇರುತ್ತವೆ, ಯಾವ ಯಾವ ಸೈಜು ಇರುತ್ತವೆ ಎಂಬುದಾಗಿ ಯಾವದನ್ನೂ ತಿಳಿಸಿಲ್ಲ ಮತ್ತು ಎಲ್ಲಕ್ಕಿಂತಲೂ ಜಾಸ್ತಿ ವರಮಾನ ಈಗ ಹಾಲಿ ಬರುತ್ತಾ ಇರುವುದು ಅಂಟವಾಳ, ಅಳಿಲೇಕಾಯಿ, ಸೀಗೆ, ಇತ್ಯಾದಿ. ಇವುಗಳಿಗೆ ಯಾವತರಹ ಕ್ರಮವನ್ನೂ ತೆಗೆದುಕೊಂಡಿಲ್ಲ ಮತ್ತು ನರ್ಸರಿಯನ್ನು ಸಹ ಹಾಕಿಸಿಲ್ಲ. ಕಾರಣ ಗೊತ್ತಿಲ್ಲ. ಒಂದು ಅಳಿಲೇಮರದಿಂದ ವರ್ಷ ಒಂದಕ್ಕೆ ಒಂದು ಮಣದಿಂದ ಮೂವತ್ತು (30) ಮಣದವರಿಗೂ ಅಳಿಲೇಕಾಯಿ ಸಿಕ್ಕುತ್ತದೆ. ಅಂಟವಾಳದಕಾಯಿ, ಸೀಗೆಕಾಯಿ ಇವುಗಳು ಸಹ ಹೀಗೆ ಇರುತ್ತವೆ. ಹೀಗಿದ್ದರೂ ಫಾರೆಸ್ಟ್ ಇಲಾಖೆಯವರು ಇನ್ನೂ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ ಕಾರಣ ಗೊತ್ತಿಲ್ಲ. ಮಣ ಒಂದಕ್ಕೆ ಅಳಿಲೆ 3ರಿಂದ 5 ರೂಪಾಯಿನವರಿಗೂ ಇರುತ್ತದೆ. ಅಂಟವಾಳ, ಸೀಗೆಕಾಯಿ ಸಹ 8 ರೂಪಾಯಿ ಮಣಕ್ಕೆ ಇರುತ್ತದೆ. ಈ ವಿಚಾರದಲ್ಲಿ ಜಾಸ್ತಿಕ್ರಮ ತೆಗೆದುಕೊಳ್ಳಬೇಕು.

ಫಾರೆಸ್ಟಿನಲ್ಲಿರತ್ತಕ್ಕ ಪಸಲನ್ನು ಹರಾಜುಮಾಡುವಾಗ್ಗೆ ರೈತರಿಗೆ ತೊಂದರೆಯಾಗತ್ತಕ್ಕ ಕೆಲವು ಕಾನೂನುಗಳನ್ನು ಅನುಸರಿಸಲಾಗಿರುತ್ತದೆ. ಫಾರೆಸ್ಟು ಕಂಟ್ರಾಕ್ಟ ಮಾಡಿದವರು ರೈತರಿಗೆ ಅವಕಾಶ ಕೊಡುವವರಿಗೂ ರೈತರೂ ತಮ್ಮ ಸ್ವಂತ ಜಮೀನಿನಲ್ಲಿರತಕ್ಕ ಅಳಿಲೇಕಾಯಿ, ಸೀಗೆಕಾಯಿ, ಅಂಟವಾಳದಕಾಯಿ ಯಾವದನ್ನು ಸಹ ರೇಖಮಾಡುವ ಹಾಗಿಲ್ಲ. ಮರದಿಂದ ಉದುರಿ ಹೋದರೂ ಅಲ್ಲಿಂದ ತೆಗೆಯುವ ಹಾಗೆ ಇಲ್ಲ. ಒಂದುಪಕ್ಷ ತಾಲೋಕು ತಾಸಿಲ್ದಾರರಿಗೆ ರೈತೆಸ್ಸಿಗೆ ಅರ್ಜಿ ಕೊಟ್ಟರೆ, ಫಾರೆಸ್ಟು ಕಂಟ್ರಾಕ್ಟ್‌ದಾರ ಬರುವವರಿಗೂ ಮಹಜರ್ ಮಾಡುವುದಿಲ್ಲ. ಒಂದುಪಕ್ಷ ಬಂದರೂ ಆತ ಹೇಳಿದಹಾಗೆ ಮಹಜರ್ ಮಾಡಿಕೊಂಡು ಕಂಟ್ರಾಕ್ಟದಾರನ ಕಡೆ

ಸೇರಿಕೊಂಡು ಲೈಸೆನ್ಸ್ ಕೊಡುವುದು ತುಂಬ ರೇಟಾಗಿ ಫನರೆಲ್ಲಾ ಹಾಳಾಗಿ ಹೋಗುತ್ತದೆ. ಇಷ್ಟೆಲ್ಲಾಮಾಡಿ ಲೈಸೆನ್ಸ್ ಸಿಕ್ಕಿದರೆ ಯಾವ ನರ್ಮೆ ನಂಬರಿನಲ್ಲಿ ಕೆಡುವುತ್ತಾನೆಯೋ ಅಲ್ಲಿಯೇ ರೇಜೆ ಮಾಡಬೇಕು. ಬೇರೆಕಡೆ ಸಾಗಿಸಲು ಪುನಃ ಲೈಸೆನ್ಸ್ ಬೇಕಾಗಿರುತ್ತದೆ. ರೇಜೆಮಾಡಿದಮೇಲೆ ಮನೆಗೆ ಸಾಗಿಸಲು ಮತ್ತೆ ಲೈಸೆನ್ಸ್ ಮತ್ತು ಮಾರುವಾಗ ಪುನಃ ಲೈಸೆನ್ಸ್ ಹೀಗಾಗಿ ರೈತರಿಗೆ ತುಂಬ ತೊಂದರೆಯಾಗುತ್ತದೆ.ಈ ಮಾಲು ಕಲ್ಲುಬಂಡೆಯ ಮೇಲೆ ಒಣಗಬೇಕು. ಆದ್ದರಿಂದ ಈ ತೊಂದರೆಗಳನ್ನು ರೈತರಿಗೆ ತಪ್ಪಿಸಲು ಒಂದು ಕ್ರಮವನ್ನು ನಿರ್ಧರಿಸಬಹುದು—ಫಾರೆಸ್ಟು ಫನಲನ್ನು ಕಂಟ್ರಾಕ್ಟ್ ಮಾಡಿದವರಿಗೆ ನವೆಂಬರ್ ತಿಂಗಳು ಹವಿನೈದನೆಯ ತಾರೀಖಿನವರಿಗೂ ಜೈಮ್ ಕೊಟ್ಟು ನವೆಂಬರ್ ಹದಿನೈದು ಕಳೆದನಂತರ ಹಿಡುವಳಿದಾರರಿಗೆ ತಮ್ಮ ಸ್ವಂತ ಜಮೀನಿನಲ್ಲಿರತಕ್ಕ ಮರಗಳ ಫನಲನ್ನು ರೇಜೆ ಮಾಡಿಕೊಳ್ಳಲು ಅವಕಾಶ ಮಾಡಿ ಕೊಟ್ಟರೆ ಬಹಳ ಉಪಕಾರ ಮಾಡಿಕೊಟ್ಟಂತೆ ಆಗುತ್ತದೆ. ನಾವು ಫಾರೆಸ್ಟಿನಲ್ಲಿ ಕಳ್ಳರನ್ನು ಹಿಡಿದು ಇಲಾಖೆಯವರಿಗೆ ಮಾಲು ನಮೇತಕೊಟ್ಟರೆ ಇಲಾಖೆಯವರು ಯಾವ ಕ್ರಮ ತೆಗೆದುಕೊಳ್ಳದೆ ಇರುವುದು ಸಹ ಇರುತ್ತದೆ.ನಾನು ಈ ರೀತಿ ಕಳ್ಳರನ್ನು ಹಿಡಿದು, ಮಾಲನ್ನು ಫಾರೆಸ್ಟು ಗಾರ್ಡು ಮಹಜರ್ ನಡೆಸಿ ಇಲಾಖೆಗೆ ರಿಕಾರ್ಡನ್ನು ಕಳುಹಿಸಿದರೆ ಈ ಲಾಗಾಯ್ತಿನವರಿಗೂ ಯಾವ ನಡೆವಳಿಕೆಗಳೂ ನಡೆದಿರುವುದಿಲ್ಲ. ಅದಾದ ಮೇಲೆ ನಾವು ಹೊಳ್ಳೇನರಸಿಪುರದ ಮುನ್ಸೀಫ್ ಕೋರ್ಟಿಗೆ ಕೇಸು ಹಾಕಿಸಿ ಜುಲ್ಮಾನೆ ಕೊಟ್ಟಿರತಕ್ಕ ಕೇಸು ಸಹ ಇರುತ್ತದೆ. ಫಾರೆಸ್ಟು ಇಲಾಖೆಯವರು ಇಷ್ಟು ಉದಾಸೀನ ಮಾಡಿದರೆ ಫಾರೆಸ್ಟು ಸಂಪತ್ತು ಉಳಿಯುವುದಿಲ್ಲ. ಆದ್ದರಿಂದ ಸರ್ಕಾರದವರು ಈ ವಿಚಾರದಲ್ಲಿ ತುಂಬ ನಿಗಾ ತೆಗೆದುಕೊಳ್ಳಬೇಕು. ಇನ್ನು ಅರಣ್ಯ ಪ್ರದೇಶದಲ್ಲಿ ಇದ್ದಲು ಸುಡುವುದಕ್ಕೆ ಹಿಡುವಳಿದಾರರಿಗೆ ಲೈಸೆನ್ಸ್ ಕೊಡುತ್ತಾರೆ. ಆ ರೀತಿ ಲೈಸೆನ್ಸ್ ಕೊಟ್ಟರೆ ಹಿಡುವಳಿದಾರರು ಅರಣ್ಯ ಪ್ರದೇಶದಲ್ಲಿರುವ ಮರಗಳನ್ನು ಬುಡಸಹಿತ ಕಡಿಸುತ್ತಾರೆ. ಆದ್ದರಿಂದ ಕಾಡಿನ ಸುತ್ತಮುತ್ತ ಇದ್ದಲನ್ನು ಸುಡುವುದಕ್ಕೆ ಲೈಸೆನ್ಸ್‌ನ್ನು ಕೊಡಕೂಡದೆಂಬುದು ನನ್ನ ಅಭಿಪ್ರಾಯವಾಗಿರುತ್ತದೆ. ರೈತರು ತಮ್ಮ ಸ್ವಂತ ಹಿಡುವಳಿಯಲ್ಲಿರತಕ್ಕ ಮರಗಳನ್ನು ಕಡಿದು ಮನೆ ಕಟ್ಟಿಕೊಳ್ಳಲು ತಾಲ್ಲೂಕು ತಾಸಿಲ್ದಾರರಿಗೆ ಅರ್ಜಿ ಕೊಟ್ಟರೆ ತಾಲ್ಲೂಕು ಅಧಿಕಾರಿಗಳು ಬಂದು ಮಹಜರ್ ಮಾಡಿಕೊಡುವುದು ಬಹಳ ಕಷ್ಟವಿರುತ್ತದೆ. ಇಂಥ ಸಂದರ್ಭದಲ್ಲಿ ಕಷ್ಟದಿಂದ ಲೈಸೆನ್ಸ್ ಸಿಕ್ಕಿದರೆ ಪುನಃ ಫಾರೆಸ್ಟು ಡಿಪಾರ್ಟ್‌ಮೆಂಟಿನವರು ಬಂದು ಮಹಜರ್ ಮಾಡಬೇಕಾಗಿರುತ್ತದೆ. ಹಾಗಾದರೆ ರೈತ ಯಾವ ಯಾವ, ಅಧಿಕಾರಿಗಳಿಗೆ ಕೈಮುಗಿದು ಕೆಲಸ ಮಾಡಿಸಿಕೊಳ್ಳಬೇಕು ? ತಾಲ್ಲೂಕು ತಾಸಿಲ್ದಾರ್‌ರು ಮಾಡಿದ ಮಹಜರನ್ನು ನಂಬದೆ ಫಾರೆಸ್ಟು ಇಲಾಖೆಯವರು ಪುನಃ ಈ ರೀತಿ ಮಾಡುವುದು, ಒಂದು ಇಲಾಖೆಯನ್ನು ಇನ್ನೊಂದು ಇಲಾಖೆ ನಂಬದಹಾಗೆ ಕಾಣುತ್ತದೆ. ಇದೆಲ್ಲಾ ಮುಗಿಯುವರೆಗೆ ರೈತ ಕಟ್ಟಿದ್ದ ಮನೆ ಬಿದ್ದುಹೋಗುತ್ತದೆ. ಆದ್ದರಿಂದ ಯಾವದಾದರೂ ಒಂದು ಇಲಾಖೆಗೆ ಅವಕಾಶ ಮಾಡಿ ಕೊಡಿ. ರೈತರಿಗೆ ತೊಂದರೆ ತಪ್ಪುತ್ತದೆ. ರೈತರು ಹಿಡುವಳಿ ಮರವನ್ನು ಕಡಿದುಕೊಂಡು ಜಾಗ್ರತೆ ಮನೆ ಕಟ್ಟಿಕೊಳ್ಳಲು ಯಾವುದಾದರೂ ಒಂದು ಕ್ರಮವನ್ನು ಅನುಸರಿಸಬೇಕಾಗಿರುತ್ತದೆ ಎಂಬುದು ನನ್ನ ಅಭಿಪ್ರಾಯ. ಈಗ್ಯೆ ಆರು ತಿಂಗಳ ಹಿಂದೆ ವ್ಯವಸಾಯ ಮಂತ್ರಿಗಳಿಗೆ ಒಂದು ಅರ್ಜಿಯನ್ನು ಕೊಚ್ಚೆವು. ಫಾರೆಸ್ಟಿನಲ್ಲಿರತಕ್ಕ ಮರಗಳನ್ನು ಹರಾಜು ಮಾಡುವ ಸಂದರ್ಭದಲ್ಲಿ ಹರಾಜು ತಾರೀಖು ಮತ್ತು ಸ್ಥಳ ಎಲ್ಲವನ್ನು ತಿಳಿಸಿದ್ದರಮೇಲೆ ಪಾರ್ಟಿಗಳು ಮರಗಳು ಇರುವ ಕಡೆ ಹಾಜರಿದ್ದ ಸಂದರ್ಭದಲ್ಲಿ ಇಲಾಖೆಯವರು ಬೇರೆ ಸ್ಥಳದಲ್ಲಿಯೇ ಹರಾಜು ಮಾಡಿರುತ್ತಾರೆ. ಈ ವಿಚಾರದಲ್ಲಿ ಇಲಾಖೆಯವರು ತಮಗೆ ಬೇಕಾದವರೊಬ್ಬರ ಹೆಸರಿಗೆ ನಿಲ್ಲಿಸಿಕೊಂಡಿರುತ್ತಾರೆ ಮತ್ತು ಬೇರೆ ಸ್ಥಳದಲ್ಲಿ ಎಂದರೆ ತಮಗೆ ಬೇಕಾದಕಡೆ ಹರಾಜು ಮಾಡಿಕೊಂಡಿರುತ್ತಾರೆ ಈ ವಿಚಾರ ನಡೆಯುತ್ತಿದೆ.

ಶ್ರೀ ಎಚ್. ಎಸ್. ರುದ್ರಪ್ಪ.—ಎಲ್ಲಿ ? ಯಾವಾಗ ? ಯಾವ ತಾಲ್ಲೂಕ್ ?

ಶ್ರೀ ಪುಟ್ಟೇಗೌಡ.–ಅರ್ಕಲಗೂಡು ತಾಲ್ಲೂಕಿನಲ್ಲಿ ಹಿಪ್ಪಲಿ ಫಾರನ್ನು. ಇಂಥಾದ್ದಕ್ಕೆಲ್ಲಾ ಅವಕಾಶ ಕೊಡಕೂಡದು. ಇಲಾಖೆಯವರು ತಮ್ಮ ಗೊತ್ತಾದ ಸ್ಥಳದಲ್ಲಿ ಹರಾಜು ಮಾಡಿದ್ದರೆ 400 ರೂಪಾಯಿಗಿಂತ ಇನ್ನೂ ಹೆಚ್ಚಿಗೆ ಬಿಡ್ ಬರುತ್ತಿತ್ತು ಎಂಬುದಾಗಿ ಹೇಳುತ್ತೇನೆ.

*Sri MAQSOOD ALI KHAN (Bidar).—Mr. Speaker, Sir, while I rise to support the demand of the Government in regard to Forest, I take this opportunity to express my views on certain procedure that is prevalent in the Hyderabad Karnatak Area. I would like to confine myself to the District of Bidar. I need not emphasise the fact that many of the persons who live in towns and districts usually belong to the agriculturist class. This is especially so in Bidar Town. Many of the persons are having their lands in the vicinity of Bidar Town and they bring the forest produce such as firewood and grass from their lands. For the last one and a half years, they are encountering a great difficulty due to certain procedure that is prevalent there. The forest authorities are objecting to the transit of these commodities from the nearby areas to the Bidar Town. They say that these commodities come under the category of forest produce and unless a person gets a permit or a pass from the Forest Department to bring them to the town, he will not be allowed to do so. Now, I have to explain in detail the procedure that will have to be followed in this respect. Supposing a person wants to bring firewood or grass from his nearby lands to the Bidar Town, he will have to apply first to the Tahsildar for a certificate to show that he is the owner of certain lands and that he is in possession of them. I need not emphasise what an amount of time, labour and money is involved in getting

(SRI MAQSOOD ALI KHAN)

such a certificate. It depends upon the whims and fancies of the concerned clerks to give a certificate just in time and when he gets the certificate he will have to apply to the Divisional Forest Officer, Gulburga, and that too through the Forest Range Officer or the Inspector of Forests who is stationed at Bidar. That officer will visit the lands make an estimate of the produce and submit a report to the Divisional Forest Officer that according to his estimate so many cartloads of grass and so many cartloads of firewood can be had from the lands of the applicant. This report will get stuck up with the D.F.O. for a fortnight or so and by the time he passes any order for the issue of a permit or pass, the grass that was lying in the open will get rotten and the firewood that was cut will be stolen. So, the agriculturists find it very difficult even to make use of the produce from their lands. I would submit that this procedure has opened new channels of corruption among the rank and file of the forest officers and results in waste of public money, time and energy. It is said that the forest officers who step out of their houses in Bidar District early morning with their pockets empty return home in the evening with their pockets filled with considerable legal tender. They attribute it to the sheer magic of the procedure. I think that every log of wood works magic for them. This procedure does not bring any money to the coffers of Government, but anyhow it means considerable benefit to the forest officers. In fact, if this procedure continues, I think there will be a clamour against the Government stopping it. Under sub-section (2) of section 44 of the Forest Act that was promulgated in the year 1946, the Government was empowered to frame rules in this respect. The rules were framed, but I do not find any contingency or expediency or any reasoning in them because the forest in Bidar District is in an infant stage. The trees are just growing and it will take considerable time before they grow up. Just now a lady member pointed out that thick forests are not found in the Hyderabad Karnatak area. Similarly, there are no thick forests in Bidar also. When the forest is not thick and when the trees are not well grown, I do not think there is any meaning in restricting the transit of the products from the nearby lands.

Sri H. S. RUDRAPPA.—Is my Hon'ble friend referring to the transit of forest produce from private forest or from Government forest?

Sri MAQSOOD ALI KHAN.—I am coming to that point. A very reasonable objection has been raised by the Hon'ble Minister, but I would submit that if we take into consideration the whole forest area in Bidar District, I think it does not consist of more than 5 per cent of the total area? There are two or three compact blocks and they are not scattered in different areas and there are a number of Government servants. There are the Range Officers, Chowkidars, Foresters, Watchmen and so on. When there are so many persons, cannot they have some vigilance or superintendence over the area? If these Government servants are vigilant and careful, nobody would dare go to the forest and cut anything from there. So, instead of placing this responsibility on the Government servants, it is rather unreasonable and unjustifiable to place this burden on the persons who are bringing their produce from their lands and to ask them whether they have got a permit or not.

Sri H. S. RUDRAPPA.—Does the Hon'ble Member mean to say that they should have no permits?

Sri MAQSOOD ALI KHAN.—I am making my own suggestion in regard to that. This procedure has rather doubled the prices of grass and firewood in Bidar. Firewood which was selling at Rs. 3 per palla formerly is now selling at Rs. 8 or 9 per palla. Even the price of grass has doubled. In fact, it is not going to do any good to the people.

My suggestion in this respect is that when we find that the rules that have been promulgated are not giving any benefit to the people or the Government then those rules should be repealed but if the Government feel that the rules are quite necessary and they cannot

repeal them, then at least they must change the procedure. To require a person to get a certificate and for that purpose to make him go to Gulbarga and travel a distance of over 120 miles wasting alot of money, is not the proper thing to do. I feel that it is much easier to conduct proceedings in a court of law than to pursue the proceedings in the Forest Department. So I would suggest that it is better to give some powers to the officials who are on the spot at Bidar ; the Range Officer or the Forest Inspector should be entrusted with the powers of issuing permits to any person who wants to bring grass from his place. A person who wants to bring grass from his own place should not be required to get a certificate from the Tehsil Office. The officers should rely on the pavty book and the latest revenue receipt. Even in criminal courts whenever a person stands surety to another person he is required only to produce the pavty book and revenue receipt on which reliance is placed and on the basis of that his surety bond is accepted. When this is the procedure followed even in criminal courts, I think it can be followed in the Forest Department also. That would curtail the expenditure, the time spent and the harassment to the public.

There is another point to which I would invite the attention of the Agriculture Minister. Due to the surrounding forest area, wild pigs have grown in considerable number in our place. They come out from the forest area and devastate all the plantation that is carried on there. We had the good fortune of having you in our midst at Bidar when we represented this matter to you, but up till now no step has been taken by Government to improve matters. I suggest that hunters or marksmen or shooters should be appointed to chase the wild animals or they should be shot down. Or if the Government have any other appropriate remedy that should be taken.

With these words I resume my seat.

ಶ್ರೀ ವೈ. ವೀರಪ್ಪ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದಿರತಕ್ಕಂಥ ಅರಣ್ಯ ಶಾಖೆಯ ಡಿಮ್ಯಾಂಡಿನ ಬಗ್ಗೆ ಸರ್ಕಾರದವರಿಗೆ ಒಂದೆರಡು ಸಲಹೆಗಳನ್ನು ಕೊಡಬೇಕೆಂದು ನಿಂತಿದ್ದೇನೆ.

ದೇಶಕ್ಕೆ ಬರತಕ್ಕ ನಾನಾ ವರಮಾನದ ಬಾಬುಗಳ ಪೈಕಿ ಈ ಅರಣ್ಯ ಸಂಪತ್ತೆಂಬುದೂ ಕೂಡ ಒಂದು ಬಹಳ ಮುಖ್ಯವಾದದು. ಹೀಗೆ ಕಣ್ಣಿಗೆ ಕಾಣಿಸುವಂತೆ ಬರತಕ್ಕ ವರಮಾನ ಒಂದೇ ಅಲ್ಲದೆ ಮಳೆ ಬೆಗ್ಗೆರೆಗಳು ಬರುವುದಕ್ಕೂ ಸಹ ಈ ಅರಣ್ಯಗಳು ಬಹಳ ಸಹಕಾರಿಯಾದವುಗಳಾಗಿರುತ್ತವೆಂಬ ಅಂಶವನ್ನು ಭೂಗೋಳಶಾಸ್ತ್ರವನ್ನ ಓದಿದವರು ತಿಳಿದುಕೊಂಡಿರಬಹುದು. ಈ ದಿವಸ ಈ ಅರಣ್ಯ ಸಂಪತ್ತು ಎಲ್ಲೆಲ್ಲಿ ನಶಿಸಿಹೋಗಿ ಬೈಲು ಪ್ರದೇಶವಾಗಿರುತ್ತದೆಯೋ ಅಂಥ ಕಡೆಗಳಲ್ಲಿ ಆಹಾರ ಕೊರತೆಯುಂಟಾಗಿರುವುದಕ್ಕೆ ಕಾಡುಗಳು ಅಲ್ಲಿ ಇಲ್ಲದಿರುವುದೇ ಕಾರಣವೆಂಬ ಅಂಶ ಸರ್ಕಾರದವರ ಅನುಭವಕ್ಕೂ ಬಂದಿದೆ, ಈ ಮಾನ್ಯ ಸಭೆಯ ಸದಸ್ಯರ ಅನುಭವಕ್ಕೂ ಬಂದಿದೆ. ಈ ದಿವಸ ಎಲ್ಲೆಲ್ಲಿ ದಟ್ಟವಾದ ಅರಣ್ಯಗಳಿರುವುದಿಲ್ಲವೋ ಅಲ್ಲೆಲ್ಲ ಮಳೆಗೆ ತುಂಬ ಅಭಾವ. ಮಳೆಗೆ ಅಭಾವ ವಿರುವ ಕಡೆಗಳಲ್ಲೆಲ್ಲ ಆಹಾರಕ್ಕೆ ಅಭಾವ. ಅದುದರಿಂದ ಈ ಅರಣ್ಯ ಸಂಪತ್ತನ್ನ ದೇಶಾದ್ಯಂತವೂ ಅಭಿವೃದ್ಧಿ ಪಡಿಸಬೇಕಾದ್ದು ನಮ್ಮೆಲ್ಲರ ಮತ್ತು ಸರ್ಕಾರದವರ ಮೇಲೆ ಬಿದ್ದರತಕ್ಕಂಥ ಒಂದು ಗುರುತರವಾದ ಜವಾಬ್ದಾರಿ ಎಂಬುದನ್ನ ಯಾರೂ ಮರೆಯುಬಾರದು. ಯುದ್ಧ ಕಾಲದಲ್ಲಿ ಯಾವುದೋ ಒಂದು ರೀತಿಯಲ್ಲಿ ಮರೆಮಾಡಿಕೊಳ್ಳುವುದಕ್ಕಾಗಿ, ಒಂದು ರಕ್ಷಣೆಗಾಗಿ ಕಾಡಿನಲ್ಲಿರತಕ್ಕ ಮರಗಳನ್ನೆಲ್ಲ ಕೊಯ್ಯುವುದಕ್ಕೆ ಪ್ರಾರಂಭ ಮಾಡಿದರು. ಆದರೆ ಆ ಯುದ್ಧ ನಿಂತು ಹೋಗಿ ಇಲ್ಲಿಗೆ ಹತ್ತು ವರ್ಷಗಳ ಮೇಲಾಗಿದ್ದರೂ, ಇಲ್ಲಿಯವರೆಗೂ ಸರ್ಕಾರದವರು ಈ ಅರಣ್ಯಾಭಿವೃದ್ಧಿಯ ವಿಷಯದ ಕಡೆಗೆ ಗಮನಕೊಡದೆ ಮತ್ತು ಯಾವ ಒಂದು ಕಾರ್ಯಕ್ರಮಗಳನ್ನೂ ಕೈಗೊಳ್ಳದೆ ಇರುವುದು ತುಂಬ ಚಿಂತಾಜನಕವಾದಂಥ ವಿಚಾರವಾಗಿದೆ. ಮಾನ್ಯಮಂತ್ರಿಗಳು ಹೇಳಿದರು, ಶ್ರೀಗಂಧದ ಸಸಿಗಳಿಗೆ ಬರತಕ್ಕ ರೋಗವನ್ನು ತಡೆಗಟ್ಟಲು ಸ್ಯಾಂಡಲ್ ಸ್ಪೈಕ್ಸುಗಳ ಬಗ್ಗೆ ರಿಸರ್ಚನ್ನು ಡೆಸ ಲಾಗುತ್ತಿದೆ ಎಂದು. ಆದರೆ ಇದರಿಂದೇನೂ ಪ್ರಯೋಜವಾಗುವಂತೆ ಕಂಡುಬರುತ್ತಿಲ್ಲ. ಸಸ್ಯ ಶಾಸ್ತ್ರದಲ್ಲಿ ಪರಿಣತರಾಗಿ ಬರಲು ನಮ್ಮ ದೇಶದಿಂದ ಅನೇಕರನ್ನ ಪರದೇಶಕ್ಕೆ ಕಳುಹಿಸುತ್ತಿದ್ದಾರೆ. ಅಲ್ಲಿಂದ ಪಾಂಡಿತ್ಯ—ಪರಿಶ್ರಮಗಳನ್ನ ಪಡೆದು ಬಂದಂಥ ಜನರು ಇಲ್ಲಿ ಈ ಸ್ಯಾಂಡಲ್ ಸ್ಪೈಕ್ಸ್‌ಗಳ ಬಗ್ಗೆ ಸಂಶೋಧನೆಗಳನ್ನ ಇನ್ನೂ ನಡೆಸುತ್ತಲೇ ಇದ್ದಾರೆ. ಆದರೆ ಅವರ ಸಂಶೋಧನೆಗಳಿಂದ ಇಲ್ಲಿಯವರೆಗೂ ಅಷ್ಟರ ಮಟ್ಟಿನ ಪ್ರಯೋಜನಗಳೇನೂ ಆದಂತೆ ಕಂಡು ಬರುತ್ತಿಲ್ಲ. ಹೀಗೆ ಆ ಸಂಶೋಧನೆ ಇನ್ನೂ ಫಲಕಾರಿಯಾಗದೆ ಇರುವುದರಿಂದ ಈ ದಿವಸ ಈ ಸ್ಯಾಂಡಲ್ ಸ್ಪೈಕ್ ಎಂಬ ರೋಗ ಒಂದು ಗಂಧದ ಸಸಿಗೇನಾದರೂ ತಗುಲಿದರೆ ಆ ಪ್ರದೇಶದಲ್ಲಿರತಕ್ಕ ಗಂಧದ ಮರಗಳಿಗೆಲ್ಲ ವ್ಯಾಪಿಸಿ ಇಡೀ ಗಂಧದಮರವನ್ನೇ ನಿರ್ಮೂಲವಾಡತಕ್ಕಂಥ ರೋಗವಾಗಿದೆ ಅದು. ಆದುದರಿಂದ ಇಲ್ಲಿಯವರೆಗೂ ಆ ರೋಗವನ್ನ ತಡೆಗಟ್ಟಲು ನಮ್ಮ ದೇಶದಲ್ಲೇನಾದರೂ ಪರಿಣತರಿಗೆ ಅಭಾವವಿದೆಯೋ ಅಥವಾ ಈ ವಿಚಾರದಲ್ಲಿ ಸರ್ಕಾರದವರ ನಿಗವೇ ಕಡಮೆಯಾಗಿದೆಯೋ ಆ ವಿಚಾರವನ್ನ ತಿಳಿಸಬೇಕಾಗಿದೆ.

ಇನ್ನು ಈ ಬಾಬಿನಲ್ಲಿ ಸಾಯಿಲ್ ಕಜರ್ವೇಷನ್ ಎಂಬುದು ಬಹಳ ಮುಖ್ಯವಾದುದು. ಈ ವಿಚಾರದಲ್ಲೂ ಸಾಕಷ್ಟು ಮಾಹಿತಿ ಪಡೆದು ಬರಲು ಅನೇಕರನ್ನು ಪರದೇಶಕ್ಕೆ ನಮ್ಮ ದೇಶದಿಂದ ಕಳುಹಿಸಿ ಕೊಡುತ್ತಿದ್ದಾರೆಂಬುದಾಗಿ ನಾನು ಕೇಳುತ್ತೇನೆ. ಈ ದಿವಸ

(ಶ್ರೀ ವೈ. ವೀರಪ್ಪ)

ನಮ್ಮಲ್ಲಿ ಸಾರ್ವಜನಿಕ ಕೈಸರ್ವೇಕ್ಷಣೆ ವಿಚಾರದಲ್ಲಿ ಅನುಭವ ಪಡೆದಿರತಕ್ಕಂಥ ಪರಿಣತರುಗಳಿಲ್ಲದೆ ಎಲ್ಲೆಲ್ಲಿ ತುಂಬ ಕೊರತೆಯುಂಟಾಗಿದೆಯೆಂಬ ವಿಚಾರದಲ್ಲಿ ಸರ್ಕಾರದವರು ನಮಗೆ ಅಂಕಿ ಅಂಶಗಳನ್ನೊದಗಿಸಬೇಕಾಗಿದೆ. ಆದರೆ ಈ ದಿವಸ ನಮ್ಮ ಮುಂದೆ ಆ ಅಂಕಿಅಂಶಗಳನ್ನಿಡಲು ಸರ್ಕಾರದಲ್ಲಿ ಸರಿಯಾದ ಲೆಕ್ಕ ಪತ್ರಗಳಿಲ್ಲವೆಂದು ಹೇಳಬೇಕಾಗಿದೆ. ಆದುದರಿಂದಲೇ ಆ ಅಂಕಿಅಂಶಗಳನ್ನು ಈ ಮಾನ್ಯ ಸಭೆಯ ಸದಸ್ಯರಿಗೆ ಒದಗಿಸಲು ಈ ದಿವಸ ಸರ್ಕಾರಕ್ಕೆ ಅದು ಸಾಧ್ಯವಾಗಿಲ್ಲ. ಈ ಅರಣ್ಯ ಸಂಪತ್ತನ್ನ ಬೆಳೆಸುವುದಕ್ಕಾಗಿ ಸರ್ಕಾರ ಪ್ರತಿವರ್ಷವೂ ಸಾರ್ವಜನಿಕರ ಹಣವನ್ನು ವಿಶೇಷವಾಗಿ ಖರ್ಚು ಮಾಡುತ್ತಿದೆ, ಹೀಗೆ ಸಾರ್ವಜನಿಕರ ಹಣದಲ್ಲಿ ಪರದೇಶದ ವ್ಯಾಸಂಗಕ್ಕಾಗಿ ವಿಶೇಷ ಹಣವನ್ನು ವೆಚ್ಚಮಾಡುತ್ತಿದ್ದಾರಲ್ಲ ಇಲ್ಲಿಗೆ ನುಮಾರು 50 ವರ್ಷಗಳ ಕಾಲದಿಂದ ಈ ಅರಣ್ಯ ಬಾಬಿನ ಅಭಿವೃದ್ಧಿಯ ಬಗ್ಗೆ ಯಾವ ಒಂದು ಪ್ರತಿಫಲವನ್ನಾಗಲೀ ಅಥವ ಅಂಥ ಪ್ರತಿಫಲ ಕೊಡುವಂಥ ಒಂದು ಜಯಪ್ರದವಾದ ಕುರುಹನ್ನಾಗಲಿ ಈ ಸಂಶೋಧನೆಗಳಿಂದ ನಾವು ಕಾಣಲು ಸಾಧ್ಯವಾಗದೆ ಇರುವಾಗ ಇಂಥ ವ್ಯಾಸಂಗಕ್ಕಾಗಿ ಸರ್ಕಾರದವರು ಏಕೆ ನಿಷ್ಪ್ರಯೋಜನವಾಗಿ ಸಾರ್ವಜನಿಕರ ಹಣವನ್ನು ಖರ್ಚು ಮಾಡಬೇಕು? ಈ ದಿವಸ ಬೆಂಗಳೂರು ನಗರದಲ್ಲಿ ನೀರಿಗೆ ತುಂಬ ಅಭಾವವಿದೆ. ಹಾಗಿರುವಾಗ ಬೆಂಗಳೂರು ನಗರದ ಸುತ್ತಮುತ್ತಲೂ ಗಿಡ ಮರಗಳನ್ನು ಬೆಳೆಸಲು, ವನಸಂಪತ್ತನ್ನು ಹೆಚ್ಚಿಸಲು ಸರ್ಕಾರದವರು ಏನೇನು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆಂಬುದನ್ನು ಸ್ವಲ್ಪ ಒಳಹೊಕ್ಕು ನೋಡುವುದಾದರೆ ಯಾವ ಒಂದು ಕಾರ್ಯಕ್ರಮವನ್ನೂ ಕೈಗೊಂಡಿಲ್ಲವೆಂಬುದು ವೇದ್ಯವಾಗುತ್ತದೆ. ಬೆಂಗಳೂರು ಸುತ್ತಮುತ್ತಲೂ ಇರುವ ಪ್ರದೇಶದಲ್ಲಿ ಹೈರು ಬೆಳಸಲು ಅನಾನುಕೂಲವಾಗಿದ್ದರೂ ಮತ್ತು ಬೆಂಗಳೂರು ನಗರದಲ್ಲಿ ನೀರಿಗೆ ಅಷ್ಟೊಂದು ಅಭಾವವಿದ್ದಾಗ್ಗೂ ಸರ್ಕಾರದವರು ಈ ವಿಚಾರಗಳ ಕಡೆಗೆ ನಿಗಾ ಕೊಡದೆ ಇವರು ತಮ್ಮ ಜವಾಬ್ದಾರಿ ಈ ವಿಚಾರದಲ್ಲಿ ಎಷ್ಟರಮಟ್ಟಿಗೆ ಇದೆಯೆಂಬುದನ್ನು ಮನಗಾಣದೆಹೋದರೆ ದೇಶದ ಜನತೆ ಮುಂದೆ ತುಂಬ ಸಂಕಟಕ್ಕೀಡಾಗಬೇಕಾಗುತ್ತದೆ.

ಪ್ಲೈನರ್ ಫಾರೆಸ್ಟುಗಳ ಅಭಿವೃದ್ಧಿಯಿಂತೂ ಇಲ್ಲವೇ ಇಲ್ಲ. ಈ ಪ್ಲೈನರ್ ಫಾರೆಸ್ಟುಗಳ ಅಭಿವೃದ್ಧಿಯಿಂದ ಜನತೆಗೆ ತುಂಬ ಸಹಾಯವಾಗುತ್ತದೆ. ಈ ವಿಚಾರಕ್ಕೆ ಸರ್ಕಾರ ನಿಗಾ ಕೊಡದೆಹೋದರೆ ಇನ್ನು ಸ್ವಲ್ಪ ಕಾಲದೊಳಗಾಗಿಯೇ ಅವುಗಳನ್ನು ಫಾರೆಸ್ಟ್ ಎಂದು ಕರೆಯುವುದಕ್ಕೂ ಕೂಡ ಅವಕಾಶ ವಿರುವುದಿಲ್ಲ. ಇನ್ನು ಕೆಲವು ಕಡೆಗಳಲ್ಲಿ ಹಳ್ಳಿ ಫಾರೆಸ್ಟುಗಳೆಂದು ಇರುತ್ತವೆ. ಇವುಗಳ ಕಡೆಗೆ ಸರ್ಕಾರದವರು ಸ್ವಲ್ಪ ಹೆಚ್ಚಿನ ನಿಗಾ ಕೊಟ್ಟು ಅವುಗಳನ್ನು ಅಭಿವೃದ್ಧಿಪಡಿಸಬೇಕು. ಹಾಗಿಲ್ಲದೆ ಹೋದರೆ ನಿಜವಾಗಿಯೂ ಮುಂದೆ ಬಹಳ ಕಠಿಣ ಪರಿಸ್ಥಿತಿ ಒದಗುತ್ತದೆ. ಎಷ್ಟು ವನಸಂಪತ್ತು ಹೆಚ್ಚಿದರೆ ಅಷ್ಟು ಹೈರು ಹುಲುಸಾಗಿ ಬೆಳೆಯುತ್ತದೆ; ಆಹಾರ ಧಾನ್ಯಗಳ ಉತ್ಪತ್ತಿ ಹೆಚ್ಚುತ್ತದೆ, ದೇಶದಲ್ಲಿ ಗೋಸಂಪತ್ತು ಅಭಿವೃದ್ಧಿಯಾಗುತ್ತದೆ. ಇನ್ನು ಗಂಧದ ಮರಗಳು ಕಳ್ಳತನದಿಂದ ಸಾಗಿಸಲ್ಪಡುತ್ತಿವೆ. ಹೋದಸಾರ್ತಿ ನಾನು ಈ ವಿಚಾರವಾಗಿ ಬಹಳ ಕಟುವಾಗಿ ಟೀಕೆ ಮಾಡಿ ಕೆಲವು ಸಲಹೆಗಳನ್ನು ಕೂಡ ಕೊಟ್ಟಿದ್ದೆನು. ಆದರೆ ಈ ದಿವಸ ಈ ಕಳ್ಳ ಸಾಗಾಣಿ ಕೆಗೆಲ್ಲ ಸ್ಥಳೀಯ ಮುಖಂಡರೇ ಕಾರಣ. ಆದುದರಿಂದ ಸ್ಥಳೀಯ ಮುಖಂಡರುಗಳ ಪ್ರಭಾವಕ್ಕೆ ಸರ್ಕಾರ ಒಳಗಾಗಬಾರದು. ನಮ್ಮ ದೇಶದ ಗಂಧದ ಮರದ ಸಾಮಾನುಗಳೂ ಮತ್ತು ಗಂಧದೆಣ್ಣೆ ವಿಶ್ವ ಪ್ರಖ್ಯಾತಿಗಳಿಸಿವೆ. ತಾವು ಅರಣ್ಯ ಸಂಪತ್ತಿನಲ್ಲಿ ಸೇರಿರತಕ್ಕ ಗಂಧದ ಮರಗಳನ್ನು ಹೆಚ್ಚಾಗಿ ಬೆಳೆಸದೆ ಹೋದರೆ ನಮ್ಮಲ್ಲೀಗ ತಯಾರಾಗುತ್ತಿರುವ ಗಂಧದ ಸಾಬೂನಿನ ತಯಾರಿಕೆಗೆ ಧಕ್ಕೆ ಬರುತ್ತದೆ. ಅದರ ಸುತ್ತಮುತ್ತಲೂ ಹೊಂದಿಕೊಂಡಿರುವ ಅನೇಕ ರೀತಿಯಾದ ತೊಂದರೆಗಳು ಬರುತ್ತವೆ. ಈ ದೃಷ್ಟಿಯಿಂದ ಈ ಬಗ್ಗೆ ಹೆಚ್ಚಿಗೆ ನಿಗಾ ಕೂಡ ಬೇಕೆಂದು ಹೇಳುತ್ತೇನೆ. ಅದರಲ್ಲೂ sandal spike ವಿಚಾರದಲ್ಲಿ ಮತ್ತೂ ಹೇಳಬೇಕೆಂದಿದ್ದೇನೆ. Sandal ಎನ್ನುವುದು ಒಂದು Root Parasite ಎಂದು ಸಸ್ಯ ಶಾಸ್ತ್ರಜ್ಞರು ಹೇಳಿದ್ದಾರೆ. ಇನ್ನೊಂದಕ್ಕೆ ಈ ರೋಗ ಬಂದರೂ ಅದು ಇದನ್ನು ನಿರ್ಮೂಲ ಮಾಡುತ್ತದೆ. ಆದ್ದರಿಂದ ಕಾಫಿ ಮುಂತಾದುವುಗಳಿಗೆ spray ಮಾಡುವಂತೆ ಇದಕ್ಕೂ ಯಾವುದಾದರೊಂದು ಔಷಧವನ್ನು ಕಂಡುಹಿಡಿದು ಹಡೆಗಟ್ಟದೆ ಇದ್ದರೆ ನಿಜವಾಗಿಯೂ ನಮ್ಮ ಕಾಡುಗಳಲ್ಲಿನ ಗಂಧದ ಮರದ ಸಂಪತ್ತು ಬಹಳ ಕುಗ್ಗಿಹೋಗುತ್ತದೆಂದು ಹೇಳುತ್ತೇನೆ.

ಮತ್ತು, ಈಹೊತ್ತು ಅರಣ್ಯ ಶಾಖೆಯ ಆದಾಯ ಖರ್ಚುಗಳನ್ನು ನೋಡುವುದಾದರೆ, 365 ಲಕ್ಷ ರೂಪಾಯಿಗಳ ಹುಟ್ಟುವಳಿಯಿದ್ದು working expenses 187 ಲಕ್ಷ ರೂಪಾಯಿಗಳಷ್ಟಿದೆ. ಲೆಕ್ಕಾಚಾರ ಹಾಕಿದರೆ ಶೇಕಡ 42 ರಷ್ಟಾಯಿತು. ಇದು ಬಹಳ ದುಬಾರಿ. ಆದಷ್ಟುಮಟ್ಟಿಗೆ ಇದನ್ನು ಕಡಮೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ರಾಜಯ್ಯಶೆಟ್ಟರು ಮಾತನಾಡುತ್ತಾ ಶರಾವತಿ valley ಮತ್ತು Lakkavalli valleyಯಲ್ಲಿ ಸಾವಿರಾರು ಎಕರೆ ಕಾಡುಗಳ ಮುಳುಗಡೆಯ ವಿಷಯವನ್ನು ಪ್ರಾತನಾಡಿದರು. ಈ ಬಗ್ಗೆ ಇದುವರೆಗೂ ಯಾವ ತರಹ ಯೋಜನೆ ಮಾಡಿದ್ದಾರೋ ಗೊತ್ತಿಲ್ಲ. ಯಾವುದೂ ಇಲ್ಲವೆಂತಲೇ ಕಾಣುತ್ತದೆ. ಶರಾವತಿ valleyಯಲ್ಲಿ ಸಾವಿರಾರು ಎಕರೆ ಕಾಡುಗಳು ಮುಳುಗಡೆಯಾಗುವಲ್ಲಿ ಬಹುಶಃ ಲಕ್ಷಗಟ್ಟಲೆ ದುಡ್ಡು ಕೊಡುವ ಮರಗಳಿರುವುದನ್ನು ಕಂಟ್ರಾಕ್ಟ್ ಕೊಡುವ ಸಂದರ್ಭದಲ್ಲಿ ಹೆಚ್ಚು ಜನರಿಗೆ ಪ್ರಚಾರ ಮಾಡದೆ ಪ್ರಭಾವಕ್ಕೊಳಗಾಗಿ ಕಂಟ್ರಾಕ್ಟ್ ಕೊಟ್ಟಿದ್ದಾರೆಂದು ಅಲ್ಲಿ ಇಲ್ಲಿ ಮಾತನಾಡಿಕೊಳ್ಳುತ್ತಿದ್ದಾರೆ. ಅದರಲ್ಲೂ ಕಾಂಗ್ರೆಸ್ ವ್ಯಕ್ತಿಗಳಿಗೆ ಕೊಟ್ಟಿದ್ದಾರೆಂದು ಜನರು ಆಡಿಕೊಳ್ಳುತ್ತಿದ್ದಾರೆ. ಅಸೆಂಬ್ಲಿಯ ಮುಂದೆ ಸುಮ್ಮನೆ ಆಪಾದ್ಧ ಹೇಳುತ್ತಿದ್ದಾರೆಂದು ಭಾವಿಸಬಾರದು. ನಿಜವಾಗಿಯೂ ಟೆಂಡರು ಕರೆದು ಬಹಿರಂಗವಾಗಿ ಕೊಟ್ಟಿದ್ದರೆ ಸರ್ಕಾರಕ್ಕೆ ಹೆಚ್ಚಿಗೆ ದುಡ್ಡು ಬರುತ್ತಿತ್ತೆಂದು ಕಾಣುತ್ತದೆ. ಇದು ಅನ್ಯಾಯದ ಪರಮಾವಧಿಯೆಂದು ಹೇಳಿದರೂ ಅತಿಶಯೋಕ್ತಿಯಾಗಲಾರದು.

ಶ್ರೀ ಎಚ್. ಎಸ್. ರುದ್ರಪ್ಪ.—ಟೆಂಡರು ಕರೆದೇ ಕೊಟ್ಟಿದ್ದಾರೆ.

ಶ್ರೀ ವೈ. ವೀರಪ್ಪ.—ಲೈಸೆನ್ಸ್‌ಗಳನ್ನು ಡಿಪೋಗಳಿಗೂ, ಸಾ-ಮಿಲ್‌ಗಳಿಗೂ ಕೊಟ್ಟಿದ್ದೀರಿ. ನನ್ನ ಮಿತ್ರರು ಹೇಳಿದ ಹಾಗೆ ಕಳ್ಳತನದಲ್ಲಿ ಮರಗಳನ್ನು ಸ್ವಂತ ಡಿಪೋಗಳಿಗೆ ಸಾಗಾಣಿಕೆ ಮಾಡಿ ಇವರು ಹೆಚ್ಚಿಗೆ ಲಾಭ ಸಂಪಾದನೆ ಮಾಡುತ್ತಿರುವುದು ಕಂಡು ಬಂದಿದೆ. ಈ ಕಳ್ಳಸಾಗಾಣಿಕೆಗೆ ಇಲಾಖೆಯವರೇ ಪರೋಕ್ಷವಾಗಿ ಕೆಲಸ ಮಾಡುತ್ತಿರುವುದೂ ಬಹುಶಃ ಮಾನ್ಯ ಮಂತ್ರಿಗಳ ಗಮನಕ್ಕೂ ಬಂದಿರಬಹುದು. ಇಂಥ

ಅನ್ಯಾಯಗಳು ನಡೆಯದಂತೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನಿಜವಾಗಿಯೂ ಈ ರೀತಿ ಲೈಸೆನ್ಸ್ ತೆಗೆದುಕೊಂಡಿರುವವರು ಅರಣ್ಯ ದಲ್ಲಿರುವ ಎಳೆಯ ಗಿಡಗಳನ್ನೆಲ್ಲಾ ಕತ್ತರಿಸಿ ಅರಣ್ಯ ವನ್ನು ಹಾಳುಮಾಡುವುದಕ್ಕೆ ಪ್ರಯತ್ನ ಮಾಡು ತ್ತಿದ್ದಾರೆಂದು ನಾನು ವ್ಯನದಿಂದ ಹೇಳುತ್ತೇನೆ.

ಸೇಲ್ಸ್ ಟ್ಯಾಕ್ಸ್ ಹಾಕುವ ವಿಚಾರದಲ್ಲಿ ಹಣ್ಣು ಹಂಪಲುಗಳ ಮೇಲೆ ವಿಧಿಸಿರುವುದು ಬಹಳ ಅನ್ಯಾಯ. ಖಾಯಿಲೆಯವರಿಗೆ, ಪರಮಪಾಮರರಿಗೆ—ಎಲ್ಲರಿಗೂ ಬೇಕಾಗಿದ್ದಿವು. ಅಂಥದರಲ್ಲೂ ಹಣ್ಣಿನ ವ್ಯಾಪಾರಿಗಳ ಮೇಲೆ Turnover Tax ಹಾಕುವುದು ಬಹಳ ಕಷ್ಟ ವಾಗುತ್ತದೆ. ಓರಿನ್ಸ್, ಮದ್ರಾಸ್, ಬೇರೆ ಕಡೆಗಳಲ್ಲಿ ಇದನ್ನು ಹಾಕಿಲ್ಲ. ಅಲ್ಲಿ ಹಾಕದಿರುವುದನ್ನು ಇಲ್ಲಿ ಹಾಕಿದರೆ, ನಮ್ಮವರು ಅಲ್ಲಿಂದ ಕೊಂಡುಕೊಳ್ಳುವು ದಕ್ಕೂ ಅವರು ಇಲ್ಲಿಂದ ತರಿಸಿಕೊಳ್ಳುವುದಕ್ಕೂ ಕಷ್ಟ ವಾಗುತ್ತದೆ. ಈ ಎಲ್ಲ ದೃಷ್ಟಿಯಿಂದ ಈ ತೆರಿಗೆಯನ್ನು ವಜಾ ಮಾಡಬೇಕೆಂದು ಹೇಳುತ್ತೇನೆ.

ಈಚೆಗೆ ಹೆಣ್ಣುಮಕ್ಕಳು ಹಾಕಿಕೊಳ್ಳುವ ರಿಬ್ಬನ್ನಿನ ಮೇಲೆಯೂ ಟ್ಯಾಕ್ಸ್ ಹಾಕಿದ್ದಾರೆಂದು ಗೊತ್ತಾಗಿದೆ. ನಾನು ಅನೇಕ ಕಡೆ ಪಟ್ಟಣಗಳಲ್ಲಿ ಮನೆಗಳಲ್ಲಿ ಇದನ್ನು ತಯಾರಿಸುತ್ತಿರುವುದನ್ನು ನೋಡಿದ್ದೇನೆ. ಅವರು ಒಂದೇ ಕಡೆಯಲ್ಲಿ ಅಲ್ಲೇ ಕೆಲಸ ಮಾಡುವುದು, ಅಲ್ಲೇ ಮಲಗಿಕೊಳ್ಳುವುದು ಮಾಡಿಕೊಂಡು ಕಡುಬಡವರಾಗಿ ರುತ್ತಾರೆ. ಜೀವನ ಹೊರೆಮಾಡಿಕೊಳ್ಳುವುದೇ ಅವರಿ ಗೊಂದು ಕಷ್ಟವಾಗಿರುವಾಗ ಅಂಥವರಮೇಲೆ ನೀವು ತೆರಿಗೆ ಹಾಕುವುದು ಬಹಳ ಕಷ್ಟದಾಯಕವಾಗಿ ಪರಿಣ ಮಿಸುತ್ತದೆ. ಕೊನೆಗೆ ಯಾರು ಉಪಯೋಗ ಮಾಡು ತ್ತಾರೋ ಅವರಮೇಲೆ ಈ ತೆರಿಗೆ ಬೀಳುತ್ತದೆಂದರೂ ಇವರಿಗೂ ಅದರ ಪರಿಣಾಮ ತಟ್ಟದಿರದು—ಎಂದು ಹೇಳಿ ಇದನ್ನು ಕೂಡಲೆ ರದ್ದು ಮಾಡಬೇಕೆಂದು ಹೇಳುತ್ತೇನೆ.

ಶ್ರೀಮತಿ ಕೆಂಪಮ್ಮ (ಕೊಳ್ಳೆಗಾಲ—ಅನುಸೂಚಿತ ಜಾತಿಗಳು).—ಸ್ವಾಮಿ, ಅರಣ್ಯ ಅಭಿವೃದ್ಧಿಯ ಸಲು ವಾಗಿ ಕೆಲವು ವಿಷಯಗಳನ್ನು ಸರ್ಕಾರದವರ ಗಮ ನಕ್ಕೆ ನಾನು ತರಲಿಚ್ಛಿಸುತ್ತೇನೆ. ಕಾಡುಗಳಲ್ಲಿ ಬೆಳೆದಿ ರುವ ಮರಗಳನ್ನು ಕಂಟ್ರಾಕ್ಟ್ ಕೊಟ್ಟು ಕಡಿಸಿ ಪೂರೈಸಿದ ಮೇಲೆ ಪುನಃ ಆ ಜಮೀನುಗಳಲ್ಲಿ ಸರ್ವೆ ಮರಗಳನ್ನು ನೆಡಸಿ ಅವುಗಳನ್ನು ಅಭಿವೃದ್ಧಿ ಮಾಡ ಬೇಕೆಂದು ಹೇಳುತ್ತೇನೆ. ಎಷ್ಟೋ ವೇಳೆ ಕಾಡು ಗಳನ್ನು ಕಂಟ್ರಾಕ್ಟ್ ಮಾಡಿಕೊಂಡು ಕಂಟ್ರಾಕ್ಟ್ ದಾರರು ಸರ್ಕಾರದಿಂದ ನಿಗದಿಮಾಡಿದ ರೂಲ್ಸ್ ಗಳನ್ನು ಮೀರಿ ಕಡಿಯುತ್ತಿರುತ್ತಾರೆ. ಸರ್ಕಾರ ದಿಂದ ನಿಗದಿಯಾದ ಕಾಲದಲ್ಲಿ ಅವರು ಪೂರೈಸು ವುದಿಲ್ಲ. ಇದರಿಂದಾಗಿ ಕಾಡುಗಳನ್ನು ಅನುಕೂಲ ವಾಗಿ ಬೆಳೆಸಲು ಅವಕಾಶವಾಗುವುದಿಲ್ಲ. ಅಲ್ಲದೆ, ಕಂಟ್ರಾಕ್ಟ್‌ದಾರರುಗಳು ಸೌದೆ ಡಿಪೋಗಳನ್ನಿಟ್ಟು ಯಾರಿಗೂ ನಿಗದಿಯಾದ ಬೆಲೆಗೆ ಕೊಡುವುದಿಲ್ಲ. ಹೀಗಾಗಿ ಜನರಿಗೆ ನಿರೀಕ್ಷಿಸಿದ ಅನುಕೂಲ ಒದಗು ತ್ತಿಲ್ಲ. ಆದ್ದರಿಂದ ಕಂಟ್ರಾಕ್ಟ್‌ದಾರರು ಸರ್ಕಾರದ ವರು ನಿಗದಿಮಾಡಿದ ಬೆಲೆಗೆ ಮಾರುವಂತೆ ಹೇಳ ಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಕೊಳ್ಳೆಗಾಲದ ತಾಲ್ಲೂಕನ್ನೇ ನೋಡುವುದಾದರೆ ಅಲ್ಲಿ ಸೌದೆ ರೂಪಾಯಿಗೆ ಒಂದುವರೆ ಮಣ ಆಗಿಬಿಟ್ಟಿದೆ. ಹತ್ತಿರ ನಾಲ್ಕೈದು ಮೈಲಿಗಳಲ್ಲೇ ಅರಣ್ಯವಿದೆ. ಇಲ್ಲಿ ಬೆಂಗಳೂರು, ಮೈಸೂರು ನಗರಗಳಲ್ಲಿ ರೂಪಾಯಿಗೆ ಮೂರು ಮಣ ಸಿಕ್ಕುತ್ತಿದೆ. ಕೇವಲ 5-6 ಮೈಲಿ ದೂರದಿಂದ ತಂದು ಸೌದೆಯನ್ನು ರೂಪಾಯಿಗೆ ಒಂದೂವರೆ ಮಣದಂತೆ ಮಾರುವುದೆಂದರೆ ಬಹಳ ಅನ್ಯಾಯ. ಆದ್ದರಿಂದ ಸರ್ಕಾರದವರು ತಕ್ಷಣ ಸರಿಯಾದ ಕ್ರಮ ಕೈಗೊಂಡು ಹಳ್ಳಿಯ ಜನರ ಕಷ್ಟವನ್ನು ಪರಿಗಣಿಸುತ್ತೀರೆಂದು ನಂಬಿದ್ದೇನೆ.

ಇನ್ನೊಂದು ವಿಷಯವನ್ನು ನಾನು ಹೇಳಬಯಸು ತ್ತೇನೆ. ಇಲ್ಲಿ ನಮಗೆ ಒದಗಿಸುತ್ತಿರತಕ್ಕ ಬಡ್ಜೆಟ್ ಮುಂತಾದ ಪುಸ್ತಕಗಳೆಲ್ಲವೂ ಬರೀ ಇಂಗ್ಲೀಷಿನಲ್ಲೆ ಇವೆ. ಕೆಲವು ಮುಖ್ಯ ವಿಷಯಗಳನ್ನಾದರೂ ಕನ್ನಡ ದಲ್ಲಿರುವಂತೆ ಮಾಡಬೇಕೆಂದು ಕೇಳಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಎಂ. ಲಿಂಗೇಗೌಡ (ಕನಕಪುರ).—ಸ್ವಾಮಿ, ಮೊದಲನೆಯದಾಗಿ ಅರಣ್ಯ ಶಾಖೆಯ ವಿಷಯದಲ್ಲಿ ಬಂದಿರುವ ಈ ಡಿಮ್ಯಾಂಡಿನ ವಿಷಯದಲ್ಲಿ ನಾನು ಒಂದೆರಡು ವಿಷಯಗಳನ್ನು ಮಾತ್ರ ಹೇಳಬೇಕೆಂದಿ ದ್ದೇನೆ. ನಮ್ಮ ಮೈಸೂರು ರಾಜ್ಯ ನಿಜವಾಗಿಯೂ ಅರಣ್ಯದ ವಿಷಯದಲ್ಲಿ ಅದೃಷ್ಟ ಪಡೆದಿದೆಯೆಂದು ಹೇಳಬಹುದು. ಇದಕ್ಕೆ ಹೆಚ್ಚು ಅರಣ್ಯ ಸಂಪತ್ತಿದೆ. ಇಂಥ ಅರಣ್ಯ ಸಂಪತ್ತನ್ನು ಕಾಪಾಡಿಕೊಂಡು ಹೋಗುವುದು ನಮ್ಮ ಕರ್ತವ್ಯ. ಪ್ರಜಾಸರ್ಕಾರ ಬಂದ ಮೇಲೆ ಏನು ಕಾರಣದಿಂದಲೋ ಒಂದು ರೀತಿಯಲ್ಲಿ ಅರಣ್ಯಸಂಪತ್ತು ಹೆಚ್ಚಾಗುವುದಕ್ಕೆ ಅವಕಾಶವಾ ಗಿಲ್ಲ. ನಮಗೆ ಹೆಚ್ಚಿಗೆ ಉತ್ಪತ್ತಿ ಬರುತ್ತಿಲ್ಲ. ಪ್ರಜಾ ಸರ್ಕಾರ ಬಂದಮೇಲೆ ಸಾಮಾನ್ಯವಾಗಿ ಅರಣ್ಯಶಾಖೆಯ ಅಧಿಕಾರಿಗಳ ಹೆಚ್ಚು ಸಂಬಂಧವನ್ನು ಕಂಟ್ರಾಕ್ಟರು ಗಳಿಟ್ಟುಕೊಂಡು ಸಂಪಾದನೆ ಮಾಡುತ್ತಿರುವುದು ಎಲ್ಲರಿಗೂ ಗೊತ್ತಿದೆ. ಅರಣ್ಯ ಶಾಖೆಯ ಅಧಿಕಾರಿಗಳ ಜೊತೆಗೆ ನಮ್ಮಂಥ ಸದಸ್ಯರೂ ಸೇರಿಕೊಂಡು ದೇಶದ ಸಂಪತ್ತು ಸರ್ಕಾರದ ಖಜಾನೆಗೆ ಹೋಗುವುದಕ್ಕೆ ಬದಲಾಗಿ ತಮ್ಮ ಮನೆಗೆ ಹೋಗುವಂತೆ ಮಾಡುತ್ತಿ ದ್ದಾರೆ. ಈ ಕಾರಣದಿಂದ ನಾನು ಹೇಳುತ್ತೇನೆ. ದೇಶವನ್ನು ನಿಜವಾಗಿ ಉದ್ಧಾರಮಾಡಬೇಕೆಂದು ನಿಮ್ಮ ಮನಸ್ಸಿನಲ್ಲಿ ಇರುವುದಾದರೆ, ಅರಣ್ಯ ಸಂಪ ತ್ತನ್ನು ಒಂದಕ್ಕೆ ಮೂರರಷ್ಟು ಹೆಚ್ಚಿಸುವುದಕ್ಕೆ ಸಾಧ್ಯ ವಿದೆ. ಆ ಕಡೆ ಮಾನ್ಯ ಮಂತ್ರಿಗಳು ಹೆಚ್ಚು ಗಮನ ಕೊಡಬೇಕು. ಹೀಗಿಲ್ಲವಾದರೆ ನಮಗೆ ಬರತಕ್ಕಂಥ ಉತ್ಪತ್ತಿ ಸರಿಯಾಗಿ ಬರುವುದಿಲ್ಲ. ಸರ್ಕಾರಕ್ಕೆ ಬರತಕ್ಕಂಥ ಉತ್ಪತ್ತಿ ಕಳ್ಳದಾರಿಯಲ್ಲಿ ಹರಿದು ಹೋಗದೆ, ಸರ್ಕಾರಿ ಖಜಾನೆ ಕಡೆ ನೇರವಾಗಿ ಬರ ಬೇಕು.

ಈ ವಿಷಯದಲ್ಲಿ ಸದಸ್ಯರು ಬೇಕಾದಷ್ಟು ಹೇಳಿ ದ್ದಾರೆ. ನನಗೆ ಆರೋಗ್ಯ ಸರಿಯಾಗಿಲ್ಲ. ಆದ್ದರಿಂದ ನನ್ನ ಸ್ವಂತ ಅನುಭವದಲ್ಲಿ ಬಂದ ಕೆಲವು ವಿಷಯ ಗಳನ್ನು ಮಾತ್ರ ಹೇಳುತ್ತೇನೆ.

ನಮ್ಮ ಕನಕಪುರ ಕಾರ್ನಿಟ್ಯುಯನ್ಸಿಯಲ್ಲಿ ಗಂಧದ ಮರದ ಸಂಪತ್ತು ಇದೆ. ಆದರೆ ಗಂಧದ ಮರದಿಂದ ಎಷ್ಟು ಉತ್ಪತ್ತಿ ಬರಬೇಕೋ ಅಷ್ಟು ಉತ್ಪತ್ತಿ ಬರುತ್ತಿಲ್ಲ. ಈ ತಾಲ್ಲೂಕಿನ ಫಾರೆಸ್ಟಿನಲ್ಲಿ ಬೇಕಾ ದಷ್ಟು ಮರಗಳಿವೆ. ಇದಲಗೋಸ್ಕರ ಲೈಸೆನ್ಸ್ ಕೊಟ್ಟು, ಮನೆಕಟ್ಟುವುದಕ್ಕೆ ರಾಯಕ್ಕಾದ ಮರಗಳ ನ್ನೆಲ್ಲಾ ಇದ್ದಲಿಗೆ ಕೊಟ್ಟು, ಆ ಮರಗಳನ್ನು ಸಾಗಿಸಿ, ಅರಣ್ಯವನ್ನು ಹಾಳುಮಾಡಿದರು. ಇದರಲ್ಲಿ ಅರಣ್ಯ ಶಾಖೆಯ ಅಧಿಕಾರಿಗಳೂ ಒಳಹೊಕ್ಕಿದ್ದಾರೆ. ಅನೇಕ ಸಂದರ್ಭಗಳಲ್ಲಿ ಕಳ್ಳತನವನ್ನು ಹಿಡಿದುಹಾಕಿ, ತಪ್ಪಿತ ಸ್ಥರನ್ನು ಶಿಕ್ಷೆಗೆ ಗುರಿ ಮಾಡುವ ನನ್ನ ವೇಶದಲ್ಲಿ ಕೆಲವು ಸದಸ್ಯರ ಪ್ರಭಾವದಿಂದ ಶಿಕ್ಷೆಗಳು ಕೂಡ ತಪ್ಪುತ್ತಾ ಇವೆ. ನಾನು ಕೆಲವು ವಿಷಯಗಳಲ್ಲಿ ಮಾನ್ಯ ಮಂತ್ರಿ ಗಳಿಗೂ ಒಂದು ವರ್ಷಕ್ಕೆ ಹಿಂದೆ ಎರಡು ಪತ್ರಗಳನ್ನು

(ಶ್ರೀ ಎಂ. ಲಿಂಗೇಗೌಡ)

ಬರೆದಿದ್ದೆ. ಪತ್ರ ಬಂದಿದೆ ಎಂದು ಕೂಡ ಮಾನ್ಯ ಮಂತ್ರಿಗಳು ನನಗೆ ಒಂದು ಕಾಗದ ಬರೆಯಲಲ್ಲ, ಅದಕ್ಕೋಸ್ಕರ ನಾನು ಪುನಃ ಅವರಿಗೆ ಕಾಗದ ಬರೆಯುವುದಾಗಲಿ, ಅಥವ ಈ ವಿಷಯವನ್ನು ಅವರೊಡನೆ ಮಾತನಾಡುವುದಾಗಲೀ, ಬಿಟ್ಟು, ಸುಮ್ಮನಾಗಿ ಬಿಟ್ಟೆ.

ಶ್ರೀ ಎಚ್. ಎಸ್. ರುದ್ರಪ್ಪ.—ಮುಖತಃ ಮಾತನಾಡಿದೆವಲ್ಲಾ !

ಶ್ರೀ ಎಂ. ಲಿಂಗೇಗೌಡ.—ಪುನಃ ಮಾತನಾಡೋಣ ಎಂತ ಹೇಳಿದಿರಿ. ಮಾನ್ಯ ಮಂತ್ರಿಗಳು ಪಕ್ಷವಹಿಸಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಕನಕಪುರದಲ್ಲಿ ಅವರ ವಿಶ್ವಾಸ ಕಳೆದುಕೊಂಡ ಜನಗಳು ಮಾತನಾಡಿದಾಗ, ವಿನಾ ಕಾರಣ ಅವರಿಗೆ ಹಿಂಸೆ ಕೊಟ್ಟ ಅನೇಕ ಸನ್ನಿವೇಶಗಳಿವೆ. ಅವರ ಹೆಸರುಗಳನ್ನು ಹೇಳುವುದಕ್ಕೆ ನಾನು ತಯಾರಿಲ್ಲ. ಕನಕಪುರ ತಾಲ್ಲೂಕಿನ ಫಾರೆಸ್ಟಿನಲ್ಲಿ ಏನು ಅತ್ಯಾಚಾರಗಳು ನಡೆದಿವೆ ಎಂಬುದನ್ನು ತಿಳಿದುಕೊಳ್ಳುವುದಕ್ಕೋಸ್ಕರ, ಒಬ್ಬ ಸ್ಪೆಷಲ್ ಆಫೀಸರನ್ನು ಕಳುಹಿಸಿ ಸರ್ಕಾರಕ್ಕೆ ರಿಪೋರ್ಟ್ ತರಿಸಿಕೊಂಡಿದ್ದಾರೆ. ಅದೇ ಮಾನ್ಯ ಮಂತ್ರಿಗಳ ನೆರಳಿನ ಆಧಾರದ ಮೇಲೆ ಕೆಲವರು ಜನಗಳಿಗೆ ವ್ಯಥಾ ತೊಂದರೆ ಕೊಡುತ್ತಾ ಇದ್ದಾರೆಂದು ಅವರ ಗಮನಕ್ಕೆ ತರಬೇಕಾಗಿದೆ. ಫಾರೆಸ್ಟ್ ಡಿಪಾರ್ಟ್‌ಮೆಂಟಿನಲ್ಲಿ ಪ್ರತಿಯೊಬ್ಬಗಾರ್ಡಿಗೂ ಕೂಡ ತಿಂಗಳ ಗುತ್ತಿಗೆ ಕೊಡಬೇಕಾದ ಸನ್ನಿವೇಶ ಬಂದಿದೆ. ಇಂಥ ಸನ್ನಿವೇಶ ಪ್ರಜಾನರ್ಕಾರದಲ್ಲಿ ಬರದೆ ಇರಬೇಕಾದುದು ಬಹಳ ಅತ್ಯಗತ್ಯ. ಸಾಧಾರಣವಾಗಿ ಗಾಡಿಯಿಂದ ನಮ್ಮಲ್ಲಿ ರೈತರು ಉಪಯೋಗಕ್ಕೆ ತರುತ್ತಿದ್ದಂಥ ಕಟ್ಟಿಗೆಗೂ ಲೈಸನ್ಸನ್ನು ನಿಲ್ಲಿಸಿದ್ದಾರೆ. ಒಣಮರಗಳಿಲ್ಲ, ಆಗಿ ಹೋಗಿವೆ, ಆದ್ದರಿಂದ ನಿಲ್ಲಿಸಿದ್ದೇವೆಂದು, ಅಧಿಕಾರಿಗಳು ಹೇಳಿದ್ದಾರೆ. ಮಿನಿಸ್ಟರು, ಈ ಸಭೆಯಲ್ಲಿ ನಿಲ್ಲಿಸಿಲ್ಲ ಎಂದು ಹೇಳಿದ್ದಾರೆ. ಒಟ್ಟಿನಲ್ಲಿ ಜನಗಳಿಗೆ ಅಡಿಗೆ ಮಾಡುವ ಸೌದೆಗೂ ಕೂಡ ತೊಂದರೆಯಾಗಿದೆ. ಅಲ್ಲಿ ನೋಡಿದರೆ ವಿಧಿಯಿಲ್ಲದೆ ಸೌದೆ ತಂದವರಮೇಲೆ ಒಂದು ಗಾಡಿ, ಸೌದೆಗೆ 30 ರೂಪಾಯಿಗೆ ಕಾಂಪೌಂಡ್ ಆಗಿದೆ. ಬೇಕಾದವರಿಗೆ ಒಂದು ಲಾರಿ ಸೌದೆಗೆ 25 ರೂಪಾಯಿಗೆ ಕಾಂಪೌಂಡ್ ಆಗಿದೆ. ಹೋದ ಫೆಬ್ರುವರಿ ತಿಂಗಳಿನಲ್ಲಿ ಒಂದು ಲಾರಿ ಲೋಡ್ ಸೌದೆ ಬೆಂಗಳೂರಿಗೆ ಬರುವುದು ಕನಕಪುರಕ್ಕೆ ಹೋಯಿತು. ಕನಕಪುರದ ರೇಂಜ್ ಫಾರೆಸ್ಟ್ ಆಫೀಸರು 150 ರೂಪಾಯಿಗೆ ಕಾಪೌಂಡ್ ಆಗುವುದಕ್ಕೆ ತೀರ್ಮಾನ ಮಾಡಿದ್ದರು. ಈ ಕಡೆ ಯಾರಾದರೂ ವ್ಯವಸ್ಥಿತಕೆ ಮಾಡಿದ್ದಲ್ಲಿ, ದೊಡ್ಡವರು ಮಾಡಿರಬೇಕು. ಅನಂತರ ಅದನ್ನು 25 ರೂಪಾಯಿಗೆ ಇಳಿಸಿದರು. ಬೇಕಾದರೆ ತಮಗೆ ಹೆಸರು ಹೇಳುತ್ತೇನೆ ಪ್ರತ್ಯೇಕ ಹೇಳುತ್ತೇನೆ. ರೈತರ ಒಂದು ಗಾಡಿ ಸೌದೆಗೆ ಕಾಂಪೌಂಡ್ ಮಾಡಿಕೊಳ್ಳುವುದಕ್ಕೂ 25 ರೂಪಾಯಿ ದೊಡ್ಡವರ ಒಂದು ಲಾರಿ ಸೌದೆಗೆ, ಕಾಂಪೌಂಡ್ ಮಾಡಿಕೊಳ್ಳುವುದಕ್ಕೂ 25 ರೂಪಾಯಿ. ಒಂದು ಲಾರಿಯಲ್ಲಿ ಎಂಟುಗಾಡಿ ಸೌದೆ ಹಿಡಿಯುತ್ತದೆ. ಇದು ಅರಣ್ಯಶಾಖೆಯ ವೈಶಿಷ್ಟ್ಯ.

ಶ್ರೀ ಎಸ್ ಆರ್. ರಾಮಯ್ಯ (ಹೊನಕೋಡೆ).—ದೊಡ್ಡವರು ಎಂದರೆ ಹೇಗೆ ?

ಶ್ರೀ ಎಂ. ಲಿಂಗೇಗೌಡ.—ತಮ್ಮಲ್ಲಿ ಸಹವಾಸ ಇಟ್ಟು ಕೊಂಡಿರುವವರು. ಜೋಡಿ ಗ್ರಾಮಗಳಲ್ಲಿ ಸೌದೆ ಕಡಿದರೆ ಜೋಡಿದಾರರಿಗೆ ಒಂದು ಗಾಡಿಗೆ ನಾಲ್ಕು ರೂಪಾಯಿ ಕೊಡಬೇಕು. ಫಾರೆಸ್ಟ್ ಇಲಾಖೆಯವರು ಇದನ್ನು ಚೆಕ್ ಮಾಡುವುದಿಲ್ಲ. ಜೋಡಿದಾರರಿಗೆ ಹೆದರಿಕೊಂಡು ಏನೂ ಆಕ್ಷೇಪ ತೆಗೆದುಕೊಂಡಿಲ್ಲ. ಹಸಿ ಮರ ಕಡಿಯಕೂಡದೆಂದು ಸರ್ಕಾರ್ ಹೊರಡಿಸಿದ್ದಾರೆ. ಆದರೆ ನಾಲ್ಕು ರೂಪಾಯಿ ಕೊಟ್ಟರೆ, ಜೋಡಿದಾರರು ಬೇಕಾದ ವರಿಗೆ ಮರ ಮಾರಿಕೊಳ್ಳುತ್ತಾರೆ. ಪ್ರಜಾ ಸರ್ಕಾರದಲ್ಲಿ ಇದು ಬಹಿರಂಗವಾಗಿ ನಡೆಯುತ್ತಾ ಇದೆ. ದಯೆಯಿಟ್ಟು, ನಮ್ಮವರು ತಮ್ಮವರು ಎಂಬ ಭೇದಭಾವನೆ ಮಾಡದೆ, ಎಲ್ಲರಿಗೂ ಕಾನೂನನ್ನು ಒಂದೇ ಸಮನಾಗಿ ಅನ್ವಯಿಸುವಹಾಗೆ ಮಾಡಿ. ಹೆಚ್ಚಿಗೆಡೀಟೇರ್ಸ್ ಹೇಳುವುದಕ್ಕೆ ಹೋಗುವುದಿಲ್ಲ. ಅನುಮಾನ ಬಂದರೆ ನಮ್ಮನ್ನು ಕೇಳಿ. ಮುಖಾಬಿಲೆ ಮಾಡಿ ಹಿಂದೆ ಮಾತನಾಡುವುದು ಬೇಡ. ಇದೂ ಅಲ್ಲದೆ ಅಲ್ಲಲ್ಲಿ ಜನಗಳು ಆಡಿಕೊಳ್ಳುತ್ತಿರುವ ಮಾತನ್ನು ಕೇಳಿ. ಪ್ರಜಾಸಾಮಾನ್ಯಕ್ಕೆ ತೊಂದರೆ ಮಾಡಿ ತಾವು ಕೆಟ್ಟ ಹೆಸರು ತೆಗೆದುಕೊಳ್ಳಬೇಡಿ. ಈ ವಿಷಯ ಅಲ್ಲಗೇ ನಿಲ್ಲಿಸುತ್ತೇನೆ.

ಸೇಲ್ಸ್‌ಟ್ಯಾಕ್ಸ್ ವಿಚಾರದಲ್ಲಿ ಒಂದು ಮಾತು ಹೇಳಬೇಕೆಂದಿದ್ದೇನೆ. ದೇಶದಲ್ಲಿ ಈಗ ಬರತಕ್ಕಂಥ ಉತ್ಪತ್ತಿಯನ್ನು ಸರಿಯಾಗಿ ಕಲೆಕ್ಟ್ ಮಾಡಿದರೆ ಒಂದಕ್ಕೆ ಮೂರರಷ್ಟು ಹೆಚ್ಚು ಉತ್ಪತ್ತಿ ಆಗುತ್ತದೆ. ಸೇಲ್ಸ್‌ಟ್ಯಾಕ್ಸ್‌ನಲ್ಲಿ ತಮಗೆ ಬಹುಭಾಗ ಬರುತ್ತಾ ಇಲ್ಲ. ಆದ ಕಾರಣ ನಿಷ್ಪಕ್ಷಪಾತದಿಂದ ಕೆಲಸ ಮಾಡುವುದಾದರೆ, ದಕ್ಷತೆಯಿಂದ ಆಡಳಿತ ನಡೆಸಿದರೆ, ಒಂದಕ್ಕೆ ಮೂರರಷ್ಟು ಈ ಬಾಬಿನಲ್ಲಿ ಹಣ ಕಲೆಕ್ಟ್ ಮಾಡಬಹುದು. ಈ ಕಡೆಗೆ ತಾವು ಗಮನ ಕೊಡಬೇಕು.

*ಶ್ರೀ ಬಿ. ವಿ. ದೇಸಾಯಿ (ಗಂಗಾವತಿ).—ಮಾನ್ಯ ಅಧ್ಯಕ್ಷರೇ, ಅರಣ್ಯಖಾತೆಯ ವಿಷಯದಲ್ಲಿ ಹಿಂದೆ ಮಂಡಿಸಿದಂಥ 1,83,99,000 ರೂಪಾಯಿಗಳ ಡಿಮಾಂಡ್ ಏನಿದೆ ಅದನ್ನು ಸಮರ್ಥಿಸುತ್ತಾ ಕೆಲವೊಂದು ಮಾತುಗಳನ್ನು ಹೇಳಬಯಸುತ್ತೇನೆ. ಅರಣ್ಯ ಖಾತೆಗೆ ಹಳೆಯ ಮೈಸೂರಿನಲ್ಲಿ ನವಂಬರ್ ಒಂದನೇ ತಾರೀಖಿಗಿಂತ ಮೊದಲು ಇದ್ದುದಕ್ಕಿಂತಲೂ ಎಷ್ಟೋ ಜಿಲ್ಲೆಗಳು ಈಗ ಹೆಚ್ಚಿಗೆ ಸೇರಲ್ಪಟ್ಟಿವೆ. ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲಿ ಅರಣ್ಯ ಸಂಪತ್ತು ಸಾಕಷ್ಟು ಇದೆ. ಯಾವರೀತಿ ಸರ್ಕಾರಕ್ಕೆ ಈ ಅರಣ್ಯಗಳಿಂದ ಆದಾಯ ಬರುವಂತೆ ಮಾಡಬೇಕೆಂಬುದು ಅರಣ್ಯ ಖಾತೆಯ ದೊಡ್ಡ ಜವಾಬ್ದಾರಿ. ಮಾನ್ಯ ಮಿತ್ರರು ಹೇಳಿದಂತೆ ಯುಕ್ತಾಯುಕ್ತತೆಯನ್ನು ಗಮನಿಸದೆ ಕಾಡನ್ನು ಕಡಿದು ಆದಾಯ ಒಂದನ್ನೇ ನೋಡತಕ್ಕದ್ದು ಸರಿಯಾದ್ದಲ್ಲ. ಅದನ್ನು ಯಾವರೀತಿ ಅಭಿವೃದ್ಧಿಮಾಡಬೇಕು ಎಂಬುದನ್ನು ನೋಡಬೇಕು. ಒಂದು ಮರವನ್ನು ಕಡಿದರೆ ಅದರ ಸಂಗಡ ಒಂದು ಗಿಡ ಬೆಳಸುವುದು ಅರಣ್ಯ ಖಾತೆಯ ಜವಾಬ್ದಾರಿ. ಅಧಿಕಾರಿಗಳ ಕರ್ತವ್ಯ ಗಿಡ ಕಡಿಯುವುದು ಒಂದೇ ಅಲ್ಲ. ಅದನ್ನು ಬೆಳಸದೇ ಇದ್ದರೆ ಅದು ಪಾಪದ ಕೆಲಸ ಎಂದು ಅರಣ್ಯಖಾತೆ ತಿಳಿದು ನಡೆದರೆ ನಮ್ಮ ಅರಣ್ಯ ಸಂಪತ್ತು ಉಳಿಯುತ್ತದೆ ಎಂದು ತಿಳಿದುಕೊಂಡಿದ್ದೇನೆ. ನಮ್ಮ ದೇಶದಲ್ಲಿ ಕಾಫಿ ಮತ್ತು ಗೋಡಂಬಿ ತೋಟಗಳು ಎಷ್ಟೋ ಇವೆ. ಅರಣ್ಯದಿಂದ ನಮಗೆ ಹೆಚ್ಚು ಆದಾಯ ಬರಬೇಕು. ಕಾಫಿ ಮತ್ತು ಕ್ಯಾಷ್ಯೂನಟ್ಸ್‌ನಿಂದ ಹೆಚ್ಚು ಆದಾಯ ಬರಬೇಕು ಎನ್ನುವುದು ನೋಡುವ ವಿಷಯ ಇದೆ. ಕೊಡಗು ದೇಶದಲ್ಲಿ ಕಾಫಿಬೆಳೆಯನ್ನು ಶೇ ಅಂಶ ಬೆಳೆಯುತ್ತಾರೆ. ಅರಣ್ಯಸಂಪತ್ತು ಇಲ್ಲಿ ಸಾಕಾದಷ್ಟು

ಪುಸ್ತಕ ಕ್ರಮಾಂಕ Accession No.....4751
ದಿನಾಂಕ Date.....

ಇದೆ. 15—20 ವರ್ಷಗಳ ಹಿಂದೆ ಎಷ್ಟು ಇತ್ತೋ ಈಗಲೂ ಅಷ್ಟೇ ಇದೆ. ಕಾಫಿ ಮತ್ತು ಕ್ಯಾಷ್ಯೂ ನಟ್ಸ್ ಡಾಲರ್ ಅರ್ನಿಂಗ್ ಪದಾರ್ಥಗಳೆಂದು ತಮಗೂ ಗೊತ್ತಿದೆ. ಆದ್ದರಿಂದ ಅರಣ್ಯ ಸಂಪತ್ತಿನಲ್ಲಿ ಈ ಎರಡು ಬೆಳೆಗಳನ್ನೂ ಕೂಡ ಸೇರಿಸಿ ಬೆಳೆಸುವುದು ಅವಶ್ಯಕವಿದೆ.

ಅರಣ್ಯಖಾತೆಯವರು ಒಟ್ಟು ಒಟ್ಟಾಗಿ ನಾವಿರಾರು ಎಕರೆ ಭೂಮಿ ಏನಿದೆ ಅಲ್ಲಿ ಅರಣ್ಯ ಸಂಪತ್ತನ್ನು ಬೆಳೆಸುವುದು ಮಾತ್ರವಲ್ಲ ಬಯಲು ಸೀಮೆಯಲ್ಲಿಯೂ ಅರಣ್ಯ ಸಂಪತ್ತನ್ನು ಬೆಳೆಸುವುದು ಅಷ್ಟೇ ಅವಶ್ಯಕ ಏದೆ. ಮಲೆನಾಡು ಪ್ರದೇಶದಲ್ಲಿ ಎಲ್ಲ ಮಳೆ ಹೆಚ್ಚು ಇದೆ ಅಲ್ಲಿ ಅರಣ್ಯ ಸಂಪತ್ತು ತಾನಾಗಿಯೇ ಬೆಳೆಯುತ್ತದೆ. ಸ್ವಲ್ಪ ಶ್ರದ್ಧೆವಹಿಸಿದರೆ ಸಾಕು. ಎಲ್ಲಿ ಮಳೆ ಕಡಿಮೆ ಇದೆಯೋ ಅಲ್ಲಿ ನೀರ ಸಿಕ್ಕುವುದಿಲ್ಲ. ಅಲ್ಲಿ ಗಿಡ ಬೆಳೆಯದೆ ಹೋದರೆ, ಮಳೆ ಆಗಲಿಕ್ಕೆ ಅನ್ಪದವೇ ಇರುವುದಿಲ್ಲ. ಉದಾಹರಣೆಗೆ ಬಿಜಾಪುರ, ರಾಯಚೂರು, ಗುಲ್ಬರ್ಗ ಈ ಮೂರು ಡಿಸ್ಟ್ರಿಕ್ಟ್‌ಗಳಲ್ಲಿ ಮೈಲಿ ಗಟ್ಟಲೆ ಹೋದರೂ ಒಂದು ಗಿಡವೂ ಸಹಾ ಇರುವುದಿಲ್ಲ. ಅಂಥಾ ಪರಿಸ್ಥಿತಿ ಇದೆ. ರಾಯಚೂರ್ ಜಿಲ್ಲೆಯಲ್ಲಿ ದಂಡಕಾರಣ್ಯ ಎಂದು ಹೇಳಿ ಒಂದು ದೊಡ್ಡ ಕಾಡು ಇತ್ತು. ಇವೊತ್ತಿನ ದಿವಸ ನೂರಾರು ಮೈಲಿ ಹೋದರೂ, ಕಣ್ಣಿಗೆ ಕಾಣುವಷ್ಟು ದೂರ ನೋಡಿದರೂ, ಒಂದು ಗಿಡವೂ ಸಹಾ ಕಾಣುವುದಿಲ್ಲ. ಅಲ್ಲಿ ಈ ದಿವಸ ಏತಕ್ಕೋಸ್ಕರ ಮಳೆ ಕಡಿಮೆಯಾಗಿದೆ ಎಂದರೆ, ಅರಣ್ಯ ಇಲ್ಲದೆ ಮಳೆ ಆಗುವುದಿಲ್ಲ. ಅರಣ್ಯ ಶಾಖೆಯವರು ಅಲ್ಲಿ ಇವತ್ತಿನವರೆಗೂ ಏನೂ ಕೆಲಸಮಾಡಿಲ್ಲ. ಈ ವಿಷಯವನ್ನು ಬಹಳ ಖೇದದಿಂದ ಹೇಳಬೇಕಾಗಿದೆ. ಅರಣ್ಯ ಶಾಖೆಯಿಂದ ಸುಮಾರು 3,83,000 ರೂಪಾಯಿಗಳ ಆದಾಯ ಇದೆ. 1,84,000 ರೂಪಾಯಿಗಳಷ್ಟು ಖರ್ಚು ಇದೆ. ಈ ಖರ್ಚಿನಲ್ಲಿ ಸಿಬ್ಬಂದಿಗಾಗಿ ಇರುವುದನ್ನು ತೆಗೆದರೆ ಏನೂ ಹೆಚ್ಚಿಗೆ ಉಳಿಯುವುದಿಲ್ಲ. ಹೊಸದಾಗಿ ಅರಣ್ಯ ಸಂಪತ್ತನ್ನು ಹೆಚ್ಚುಮಾಡುವುದಕ್ಕೆ 7 ಲಕ್ಷ ಇಟ್ಟಿದೆ. ಇದು ಬಹಳ ಕಡವೆ . ಇದರಿಂದ ಏನೇನೂ ಅರಣ್ಯ ಸಂಪತ್ತು ಬೆಳೆಸ ವುದಕ್ಕಾಗುವುದಿಲ್ಲ ಎಂದು ಕಡಾ ಖಂಡಿತವಾಗಿ ಹೇಳುತ್ತೇನೆ. ಎರಡನೇ ಪಾಂಚ ವಾರ್ಷಿಕಯೋಜನೆಯಲ್ಲಿ 3 ಲಕ್ಷ 96 ಸಾವಿರ ರೂಪಾಯಿ ಇಟ್ಟಿದ್ದಾರೆ, ಅರಣ್ಯ ಸಂಪತ್ತು ಬೆಳೆಸುವುದಕ್ಕೋಸ್ಕರ. ಇದು ಜಾಸ್ತಿ ಅಲ್ಲ. Afforestation of barren lands ಮತ್ತು rehabilitation ಸ್ಕೀಮ್ಸ್‌ಗೆ 2,96,000 ರೂಪಾಯಿಗಳು. ನನ್ನ ಅಭಿಪ್ರಾಯ ಇಷ್ಟೇ: ವಾಸ್ತವಿಕವಾಗಿ ಅರಣ್ಯ ಸಂಪತ್ತು ಬೆಳೆಸುವುದಕ್ಕೆ ಇಷ್ಟು ಹಣ, ಅರಣ್ಯದ ವಿಸ್ತೀರ್ಣ ಹೆಚ್ಚುಮಾಡುವುದಕ್ಕೋಸ್ಕರ ಇಷ್ಟು ಹಣ ಎಂದು ಖರ್ಚುಮಾಡಿ 3½ ಕೋಟಿ ಆದಾಯ ತೆಗೆದು ಕೊಳ್ಳುತ್ತೀರಿ. 4 ಲಕ್ಷ ರೂಪಾಯಿ ಖರ್ಚುಮಾಡಿ 3 ಲಕ್ಷ ರೂಪಾಯಿ ತೆಗೆದುಕೊಂಡರೆ ಮುಂದೆ ಏನು ಉಳಿಯುತ್ತದೆ ? ಆದ್ದರಿಂದ ಮುಂದಿನ ಸಾರಿ ಹೆಚ್ಚು ಹಣ ಇಟ್ಟು ಹೆಚ್ಚು ಅರಣ್ಯ ಬೆಳೆಸುವ ಪ್ರಯತ್ನ ಮಾಡಬೇಕು.

ಎರಡನೆಯ ವಿಷಯ—ಅರಣ್ಯ ಸಂಪತ್ತನ್ನು ಮಲೆನಾಡು ಜಿಲ್ಲೆಯಲ್ಲಿ ಒಂದೇ ಕಡೆ ಬೆಳೆಸುವುದು ಅಲ್ಲ. ಅರಣ್ಯ ಸಂಪತ್ತು ಬೆಳೆಸುವ ಉದ್ದೇಶ ನಮ್ಮ ಸರ್ಕಾರಕ್ಕೆ ಆದಾಯ ಆಗಬೇಕು ಎಂಬುದು. ಅರಣ್ಯ ಸಂಪತ್ತು ಎಲ್ಲಿ ಜಾಸ್ತಿ ಇದೆಯೋ ಅಲ್ಲೆಲ್ಲಾ ಮಳೆಯಾಗುವುದು. ಅರಣ್ಯ ಸಂಪತ್ತು ಮಳೆಗೋಸ್ಕರ ಅವಶ್ಯಕವಿದೆ. ಪ್ರತಿಯೊಂದು ಹಳ್ಳಿಯಲ್ಲಿಯೂ, ಗೋಮಾಳ ಎಷ್ಟೋ ಇದೆ. ಅದರಿಂದ ಅರಣ್ಯ ಕ್ಕೋಸ್ಕರ ಪ್ರತಿಯೊಂದು ಹಳ್ಳಿಯಲ್ಲಿ ಇಷ್ಟು ಜಮೀನು ಎಂದು ರಿಸರ್ವ್ ಇಡಬೇಕು. ಕಲ್ಲು ಇದ್ದ ಭೂಮಿಯನ್ನು ರಿಜರ್ವ್ ಇಟ್ಟರೆ ಪ್ರಯೋಜನವಿಲ್ಲ ಫಲವತ್ತಾದ ಭೂಮಿ ರಿಜರ್ವ್ ಇಟ್ಟು ಉತ್ತಮ ಅರಣ್ಯ ಬೆಳೆಸಿದರೆ ಆ ಪ್ರದೇಶದಲ್ಲಿ ಆಗ ಮಳೆಯಾಗುತ್ತದೆ. ಪ್ರತಿಯೊಂದು ಹಳ್ಳಿಯಲ್ಲಿಯೂ ಈರೀತಿ ಇಡಬೇಕು. ಪ್ರತಿಯೊಂದು ತಾಲ್ಲೂಕಿನಲ್ಲಿಯೂ, ಪ್ರತಿಯೊಂದು ಜಿಲ್ಲೆಯಲ್ಲಿಯೂ, ಈರೀತಿ ಮಾಡುವುದಕ್ಕೆ ಅವಕಾಶ ಏದೆ. ನಮ್ಮ ಭಾಗದಲ್ಲಿ ಮಳೆ ಆಗದೆ ಇರುವುದಕ್ಕೆ ಇದೂ ಒಂದು ಕಾರಣ ಎಂದು ಹೇಳಬಯಸುತ್ತೇನೆ. ನಮ್ಮ ಕಡೆ ಬೆಳೆಯುವ ಜಾಲ ಗಿಡವನ್ನು ನೋಡ ಬಹುದು. ಅದು 10—20 ಎಕರೆಗಳಲ್ಲಿ ಬೆಳೆದಿರುತ್ತದೆ. ಅದನ್ನು ತಡೆಗಟ್ಟುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಜಾಲ ಗಿಡ ಬಹಳ ಕಡಮೆ ನೀರಿನಿಂದ ಬೆಳೆಯುತ್ತದೆ. ಅದು ನಾಗನಗೌಡರ ಜಾಲಗಿಡ ಎಂದು ಪ್ರತೀತಿ ಇದೆ. ಅದು ಬಹಳ ಶೀಘ್ರವಾಗಿ ಬೆಳೆಯುತ್ತದೆ. ಎಂಥ ಪರಿಸ್ಥಿತಿಯಲ್ಲಿಯೂ ಬೆಳೆಯುತ್ತದೆ. ಆ ಮುಳ್ಳಿನಲ್ಲಿ ವಿಷ ಪೂರ್ತಿ ಇರುತ್ತದೆ ಎಲ್ಲಿ ಅನಶ್ಯಕತೆ ಬೀಳುತ್ತದೋ ಅಲ್ಲಿ ಇದನ್ನು ಬೆಳೆಸ ಬಹುದು ಎಂದು ನನ್ನ ಅಭಿಪ್ರಾಯ.

ಆಬೇರೆ ಸೇಲ್ಸ್‌ಟಾಕ್ಸ್ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ಇದರ ಬಗ್ಗೆ ನಾನು ಹೇಳಬೇಕಾದದ್ದು ಹೆಚ್ಚು ಇಲ್ಲ. ಸೇಲ್ಸ್‌ಟ್ಯಾಕ್ಸ್‌ನಿಂದ ನಮ್ಮ ಸರ್ಕಾರಕ್ಕೆ ಎಲ್ಲಕ್ಕಿಂತಲೂ ಹೆಚ್ಚು ಆದಾಯ ಬರತಕ್ಕದ್ದು. ಸೇಲ್ಸ್‌ಟ್ಯಾಕ್ಸ್ ಇನ್ನೂ ಹೆಚ್ಚಾಗಿ ಬರುವಂತೆ ಮಾಡುವುದು ಸರ್ಕಾರದ ಪ್ರಥಮ ಕರ್ತವ್ಯ. ರೆವಿನ್ಯೂ ಸ್ಟೈಡ್ ಹೆಚ್ಚು ಮಾಡಬೇಕಾದರೆ, ಅದರ ಲೀಕೇಜು ತಡೆಗಟ್ಟಬೇಕು. ಅಡ್ಮಿನಿಸ್ಟ್ರೇಷನ್ ಟೋನ್‌ಅಪ್ ಮಾಡುವ ಅವಶ್ಯಕತೆ ಇದೆ. ಮೊದಲು ಇದ್ದ ಸೇಲ್ಸ್‌ಟ್ಯಾಕ್ಸ್ ಆಕ್ಟ್ ಪ್ರಕಾರ ಅಡ್ಮಿನಿಸ್ಟ್ರೇಟಿವ್ ಸ್ಟೈಡ್ ಹೆಚ್ಚು ಕೆಲಸ ಇತ್ತು. ಆಗ ಹೆಚ್ಚು ಕಡೆ ಆಫೀಸುಗಳ ಅವಶ್ಯಕತೆ ಇತ್ತು. ಈಗ ಸೇಲ್ಸ್‌ಟ್ಯಾಕ್ಸ್‌ನ್ನು ಮೂಲದಲ್ಲೇ ಹೆಚ್ಚಿಗೆ ಹಾಕಿರುವುದರಿಂದ, ಒಂದೇ ಆಫೀಸ್ ಸಾಕು ಎಂದು ಅನಿಸುತ್ತದೆ. 19 ಜಿಲ್ಲೆಯಲ್ಲಿ ಬೆಂಗಳೂರಿನಲ್ಲಿ ಹೆಚ್ಚು ಇರಬಹುದು. ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿಯೂ ಕೇನಸ್ ಇವೆ. ಆಫೀಸರು ಎಲ್ಲ ಇರಬೇಕು ಎಂಬುದನ್ನು ನೋಡಿಕೊಂಡು ಏರ್ಪಾಡು ಮಾಡಬೇಕು. ನಂತರ ಹೆಚ್ಚು ಆಫೀಸರ್ಸ್ ಇರುವ ಅವಶ್ಯಕತೆ ಇಲ್ಲ ಎಂದು ಅನ್ನಿಸುತ್ತದೆ. ಇಷ್ಟು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

* Sri V. SRINIVAS SHETTY (Coondapur).—Sir, the subject before us is a very vast one. Of course, from the attitude shown by the public as well as the Government, it is treated as if it is not an important subject. My friend Sri Desai has stressed the great importance of the subject. The Central Government also, in their First Five-Year Plan and Second Five-Year Plan, stressed the very great importance of the subject of forest. If you just cursorily try to find out how the Western nations like U.S.A. and U.S.S.R. have treated the subject, you

(SRI V. SRINIVAS SHETTY)

will know what astounding progress they have made in this direction. If we try to understand the background of it, we will see how the climate of the whole nation, practically the life of the nation, could be changed by the progress made in the forest of a country. In the Second Five-Year Plan it is said:

> "It is not an accident that the most advanced countries are those with the highest *per capita* consumption of wood. India's *per capita* consumption of round wood is 1.4 C.ft. as compared to 58 C.ft. in U.S.A. The consumption of pulp-products is 1.6 lbs. as against 78 lbs. in the U.K. The *per capita* forest area is 1.8 and 3.5 hectares in the U.S.A and U.S.S.R. respectively, while in India the figure is 0.2 hectares."

How far we have to progress in this direction could be seen from the statistics given in the Second Five-Year Plan. In the U.S.S.R. and U.S.A. about a third of the land area is forest area; *i.e.*, 33 1/3 area. But, in India it is 20 per cent. In the Second Five-Year Plan, they have visualised the conversion of barren land into forest area to reach the percentage of 33 1/3. In our own State the total area of forest in 1957 is 13,553 sq. miles or about 18 per cent of the total area of the State. The all-India figure is 22 per cent. To reach 33 1/3 per cent from 18 per cent, we have to practically, double the area. We have got only half of what we should have got. Looking at the pittance in the budget towards this subject, what would be the time required to double the area in our State? I would request our very good and Hon'ble Minister for Agriculture to have more progressive, more revolutionary ideas about these things. Sir, I remember to have written a letter to the Hon'ble Minister when I was in Hospet some time ago. I saw the area round about Thungbhadra. There is not a shrurb; there is nothing but stones and mud. I was reminded about an article I read about America. They not only dig pits and plant trees, but they broadcast seeds by Helicopters. Sir, in South Kanara we have more than 50 per cent forest area. In North Kanara it is 80 per cent. Hyderabad area is the worst area so far as forest is concerned. What is the plan of Government with regard to Hyderabad area? Is there no other method except digging pits and planting trees? Can we not find out a better method of increasing the forest area by broadcasting seeds in taluks of Bellary and Hyderabad. I am not an expert in this; I am not trying to advise the Government as to how to do it. But, there are other countries which have made marvellous progress. Why not this sluggish, this very narrow-minded Government take a very broad way and take to revolutionary methods? There is no harm in increasing the forest in the Northern part of the State. We have got that wonderfuldam that is, Thungabhadra. More moisture will help the detention of water. It will help the cultivators, will revolutionise the atmosphere itself. As remarked by Sri Desai, it is just like the proverb in Kannada which runs:

> "ಹುಚ್ಚು ಬಿಡದೆ ಮುದುವೆಯಾಗದು; ಮುದುವೆಯಾಗದೆ ಹುಚ್ಚು ಬಿಡದು"

Unless we have got more forest area the atmospheric condition will not change: the climatic condition will not change. One is connected with the other. It is the bounden duty of the Government to pay serious attention to this subject. This question should be treated on a war footing. If the Government have realised the importance of the forest area, they should treat it on a warfooting so that within 5 or 10 years we may reach the target. *i.e.*, 33 1/3 per cent—the target fixed by the Government of India. When I see the pittance provided for this subject in the Budget, I fail to understand the attitude taken by the Cabinet as a whole and the Finance Minister in particular. I request the Agriculture Minister who is present here, to look to this. From the answers given by the other Ministers, I understand what importance they attach to this subject. I feel some times, whether we on this side, should speak at all because mostly

the Cabinet Ministers will not be here at all.

Mr. CHAIRMAN.—May I bring it to the notice of the Hon'ble Member that an observation in the Lok Sabha was made to the effect that it was sufficient if the concerned Minister was present.

Sri V. SRINIVAS SHETTY.—I am aware of that, Sir; I have read it. I am only saying that the Cabinet, as a whole, is not giving any respect to the remarks of the members on this side. Throughout the session I find that the Chief Minister and the other Ministers who ought to have been present here, are not present. This is my grouse, Sir.

Sri J. B. MALLARADHYA (Nanjangud).—In fact, on the very same subject, *i.e.*, inadequacy of attendance of the Ministers, I have sent a short notice question; it has not been answered for the last two months.

Sri V. SRINIVAS SHETTY.—Unless the Cabinet takes a broader view of this and gives proper attention, there is no good saying that one Hon'ble Minister is here and he is taking down notes. I do not know how far those notes will carry any benefit. I hope the Cabinet will take this subject as a very vital subject of the State and give it top priority and consider it on a war basis.

Mr. CHAIRMAN.—The Hon'ble Member has only one minute more.

Sri V. SRINIVAS SHETTY.—One thing I find that in a certain part new industries are going to be established. I wish to say one word with regard to my district. It comes as second in the extent and importance of forest area after North Kanara.

Sri H. S. RUDRAPPA.—But the income is considerable

Sri V. SRINIVAS SHETTY.—That is left to the Government. I speak both on behalf of North Kanara and South Kanara. I hear that certain industries are going to be established in Shimoga District, like food preservation, etc. South Kanara is a very important district for this purpose also apart from its importance in other matters.

Sri H. S. RUDRAPPA.—South Kanara is important in many repects.

Sri V. SRINIVAS SHETTY.—I am not speaking of its importance in other respects. It is a very important district so far as forest area is concerned and deserves attention for more industries so far as wood is concerned. Therefore the Hon'ble Minister may cast a sympathetic eye on my district, and try to exploit the wood wealth in my district in the interests of the whole State. I am not saying that South Kanara should benefit by it but the Government should take active steps to exploit the forest wealth in South Kanara.

I wish the Finance Minister were here. I wish to say that there is so much of agitation with regard to multi-point sales tax levied on cocoanut oil. There is a single-point sales tax on groundnut oil here. It is a foodstuff. In South Kanara the whole district has felt that it is a great injustice to levy multi-point sales tax on cocoanut oil. Just as you use groundnut oil everyday we use cocoanut oil. There is a lot of representation. I hope Government will take a very sympathetic view of this and try to bring about a single point sales tax on cocoanut oil.

Sri H. C. LINGA REDDY (Malur).—Sir, I rise to support the demands under discussion and while so doing, I wish to make a few observations.

The Forest Department is a nation-building department which yields a very good income. It is nearly Rs. 4 crores of income that is contributed by the department to the coffers of the State. It is capable of further improvement provided the Government pay-sufficient attention to build up the wealth of the Forest Department. But, unfortunately, though suggestions have been made both by this side and also the other side on several occasions both at the time of the Budget discussion and also discussion on demands, I am afraid Government has not been paying sufficient attention at all. Our suggestions and prayers for the building up of the forest wealth, I am afraid, have been more a cry in the wilderness rather than anything else. Is is well known, as observed by many Hon'ble Members, that the forest area in our State is not sufficiently extensive. It

(SRI H. C. LINGA REDDY)

is only about 20 per cent. It has been opined by experts that the forest in a State for its prosperity has to be one-third in area. But we have only about 18 or 20 per cent. Therefore we cannot have extensive forest area. Therefore we have to devise ways and means of improving the present extent in an intensive manner. It is more the intensive development of the forest area that we have got to think of rather than the extension of the area which probably other States or countries, as Sri Srinivasa Shetty observed, can think of. There is a difference between maidan area or malnad area and also the other integrating areas which have richer forests. We have more extensive and intensive forests in malnad than in maidan area. For example in Kolar District, which is a maidan area, we have only some thorny shrubs. Vast extents of land are lying waste and the Forest Department has not been taking sufficient interest to have these areas improved in any manner at all. I had an occasion yesterday to go to Anekal Taluk and the conditions there are the same as in many parts of maidan area. There are a number of villages without any bit of land for gomal much less State forests or village forests. In those villages cattle will have no opportunity at all to go out for grazing and no plants or trees are available there. There are a number of villages which will have only small bits of land. But Government, I am afraid, has not been taking sufficient interest to have tree planting on a systematic basis though we hear that they grow a number of nurseries and even sell seedling and all that. With regard to the rate at which seedlings are sold, I am afraid it is very high. Formerly it was about Rs. 2 to Rs. 3 per thousand; now Government have been charging Rs. 10 per thousand. If the rate is Rs. 2 or Rs. 3—I am not advocating that it should be supplied free of cost in which case there will be a likelihood of wastage—it would go a long way in encouraging the raiyat class to purchase seedlings. At present it is only seedlings that are sold by Government and not seeds. As Sri Srinivasa Shetty pointed out, if seeds are planted in particular places they will grow very well. I request the Government to sell seedlings which they nurture in the nurseries, to the raiyat class.

With regard to technical personnel, our State has to send students either to the Forest College in Madras or some other places in India, sometimes outside also. We have an Agricultural College, and a Veterinary College is going to be established shortly. I do not know why we should not have a Forest College in our State. Specially with the addition of the other areas to old Mysore State I think the forest wealth has increased and if we train young men in our College they will be of very great use to our own State and we will be in a position to improve the Forest Department a good deal. Therefore I suggest to the Government in all seriousness that they should take early steps to establish a Forest College in our State.

With regard to Khedda operations, we see from the Budget it is only about Rs. 2,000 that is being spent every year. But we can get a good income. I have been making the suggestion that we have to prepare a scheme and improve the Khedda operations and see that elephants which are in abundance in our State are made available to other parts of India and also in large numbers. I think even in other countries, outside India, there is a good demand for elephants and we can get good income. I do not know why Government should not proceed in this direction.

We often hear our Agriculture Minister saying that cashew nut plantation will be undertaken on a very grand scale specially in the integrating parts of new Mysore. We see in Kolar and also, in some other parts of maidan area the cashew nut plantations coming up very well. I do not know why our Government should not pay sufficient attention to the growth of cashewnut plants.

AN HON'BLE MEMBER.—How about the yield?

SRI H. C. LINGA REDDY.—The yield also I am told is not inferior to the yield in the other areas. Therefore I appeal

to the Government to extend the area of cashewnut plantation in maidan area also and to give all possible facilities to encourage the growth of cashew nut plantations.

With regard to salas-tax, I have to make one or two suggestions. Sales tax is levied on books. That will be tax on learning and I appeal to the Goverament to remove the tariff—the levy of sales-tax on books. So also on garlic, onions and potatoes—these are food crops. If we tax these crops, production will be retarded and I appeal to the Government to remove these crops also from the purview of the sales-tax levy. Again with regard to cloth. On account of excise tax paid to the Government of India, tax is not leviable on cloth. But so far as ready-made clothes are concerned, sales-tax is being collected. I think it is not justifiable. Specially when excise tax is levied on cloth, the levy of another tax on the ready-made cloth will amount to double taxation. Therefore I request the Government to exempt ready-made clothes from the purview of sales-tax. With these observations, I welcome the Demand.

*ಶ್ರೀ ಜಿ. ವೆಂಕಟೇಗೌಡ (ಪಾಳಯಂ).—ಮಾನ್ಯ ಸಭಾಪತಿಗಳೇ, ಅರಣ್ಯ ಇಲಾಖೆಯ ಬಗ್ಗೆ ಅನೇಕ ಮಿತ್ರರು ಮಾತನಾಡುತ್ತಾ, ಅರಣ್ಯ ಸಂಪತ್ತನ್ನು ರಕ್ಷಣೆಮಾಡಬೇಕು, ಅರಣ್ಯ ಸಂಪತ್ತನ್ನು ಹೆಚ್ಚುಮಾಡ ಬೇಕು, ಅದರಿಂದ ಜಾಸ್ತಿ ಆದಾಯ ಬರುವಹಾಗೆ ಮಾಡಬೇಕು ಎಂದು ಅನೇಕ ಸೂಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಸಲಹೆಗಳು ಪರಿಣಾಮಕಾರಿ ಯಾಗಬೇಕಾದರೆ ಅರಣ್ಯ ಇಲಾಖೆಯು ಪುನರ್‌ವ್ಯವಸ್ಥೆ ಯಾಗಬೇಕಾಗಿದೆ. ಹೊಸ ಮೈಸೂರು ರಾಜ್ಯದಲ್ಲಿ ಐದು ವಿವಿಧ ಭಾಗಗಳು ಸೇರ್ಪಡೆಯಾಗಿವೆ. ಐದು ಭಾಗಗಳಲ್ಲಿ ಐದು ತರದ ಕಾನೂನುಗಳು ಇವೆ. ಐದುತರಹ ಕಾನೂನುಗಳನ್ನು ಸಮನ್ವಯಮಾಡಿ ಒಂದೇ ರೀತಿಯ ಕಾನೂನನ್ನು ಎಲ್ಲ ಪ್ರದೇಶದಲ್ಲಿಯೂ ಜಾರಿಗೆ ತರಬೇಕಾಗಿದೆ. ಈ ರೀತಿ ಸಮನ್ವಯಮಾಡು ವುದು ಬಹಳ ಕಠಿಣವಾಗಿದೆ. ಏಕೆಂದರೆ ಒಂದೊಂದು ಭಾಗದಲ್ಲಿ ಒಂದೊಂದು ರೀತಿಯ ನೀತಿನಿಯಮ ಇಟ್ಟು ಕೊಂಡಿದ್ದಾರೆ. ಇದರಿಂದ ಪ್ರಗತಿಗೆ ಅಡಚಣೆ ಯುಂಟಾಗಿದೆ. ಇದಕ್ಕೆ ಸರಕಾರ ಗಮನಕೊಡದೇ ಇರುವದಕ್ಕೆ ಕಾರಣವೇನು ? ಕಾನೂನು ಸಮನ್ವಯ ಮಾಡತಕ್ಕ ಕೆಲಸವನ್ನು ಬೇಗನೇಮಾಡಿ ಒಂದೇ ರೀತಿಯ ಕಾನೂನು, ಒಂದೇ ರೀತಿಯ ನಿಯಮ ಎಲ್ಲ ಪ್ರದೇಶದಲ್ಲಿರುವ ಹಾಗೆ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಈ ಮೂಲಕ ಸರಕಾರಕ್ಕೆ ಕೇಳಿ ಕೊಳ್ಳುತ್ತೇನೆ.

ಅರಣ್ಯ ಇಲಾಖೆಯಲ್ಲಿರುವ ಸಣ್ಣಸಣ್ಣ ನೌಕರರ ಸಂಬಳಸಾರಿಗೆ ಬಹಳ ಕಡಮೆ ಇದೆ. ಈಗಿರುವ ಸಂಬಳ ಸಣ್ಣ ನೌಕರರಿಗೆ ಸಾಲುವದಿಲ್ಲ. ಇದ ರಿಂದ ಅವರಲ್ಲಿ ಕರ್ತವ್ಯ ಚ್ಯುತಿಯಾಗುತ್ತಿದೆ. ಅವರ ಸಂಬಳದ ಸ್ಕೇಲೇ ಬಹಳ ಕಡಮೆಯಾಗಿದೆ. ಒಬ್ಬ ಕೂಲ ಕಾರನು ಒಂದು ದಿನಕ್ಕೆ ಎರಡು–ಎರಡೂವರೆ ರೂಪಾಯಿ ಸಂಪಾದಿಸುತ್ತಾನೆ. ಅಷ್ಟು ಸಂಬಳ ಕೂಡ ಈ ಅರಣ್ಯ ಇಲಾಖೆಯಲ್ಲಿರುವ ಸಣ್ಣ ನೌಕರರಿಗೆ ಸಿಕ್ಕುವು ದಿಲ್ಲ. ನಿಜವಾಗಿಯೂ ಅರಣ್ಯ ಇಲಾಖೆಯ ರಕ್ಷಣೆಯಾಗ ಬೇಕಾದರೆ, ಆದಾಯ ಜಾಸ್ತಿ ಬರಬೇಕಾದರೆ, ಸರ್ಕಾರ ಈ ಸಣ್ಣ ನೌಕರರ ಸಂಬಳವನ್ನು ಹೆಚ್ಚು ಮಾಡಬೇಕು. ಅಂದರೆ ಅರಣ್ಯ ಸಂಪತ್ತಿನ ರಕ್ಷಣೆ ಚೆನ್ನಾಗಿ ಆಗಲು ಸಾಧ್ಯವಾಗುತ್ತದೆ. ಅರಣ್ಯ ಸಂಪ ತ್ತನ್ನು ಸದ್ವಿನಿಯೋಗಪಡಿಸಲು ಸಾಧ್ಯವಾಗುತ್ತದೆ. ಅವರ ಸಂಬಳ ಅವರ ಜೀವನಕ್ಕೆ ಸಾಕಾಗದಷ್ಟು ಇರು ವುದರಿಂದ ಅವರು ಬೇರೆ ರೀತಿಯಿಂದ ಏನಾದರೂ ಸಿಕ್ಕಿದರೆ ಅದಕ್ಕೆ ಕೈಚಾಚುತ್ತಾರೆ. ಅದರಿಂದ ಸರ ಕಾರಕ್ಕೆ ಅನ್ಯಾಯವಾಗುತ್ತದೆ. ಆದ್ದರಿಂದ ಈ ಸಣ್ಣ ನೌಕರರ ಸ್ಥಿತಿಯನ್ನು ಮೊದಲು ಸುಧಾರಿಸದೆ, ಅರಣ್ಯ ಸಂಪತ್ತಿನ ರಕ್ಷಣೆ ಮಾಡಲು ಸಾಧ್ಯವಾಗುವುದಿಲ್ಲ ವೆಂದು ನನ್ನ ಅಭಿಪ್ರಾಯ.

ಇನ್ನೊಂದು ವಿಚಾರ. ಕೆಳದರ್ಜೆಯ ನೌಕರರನ್ನು ಸೇರಿಸಿಕೊಳ್ಳುವಾಗ ಅವರಿಗೆ ಒಂದು ವಿಧವಾದ ತರ ಪೇತು ಕೊಡುವ ವ್ಯವಸ್ಥೆಮಾಡಬೇಕು. ಇದಕ್ಕಾಗಿ ಒಂದು Forest Training College ಅನ್ನು ಸ್ಥಾಪನೆಮಾಡಬೇಕು. ಈ ಕೆಲಸ ಆದಷ್ಟು ಜರೂ ರಾಗಿ ಆಗಬೇಕು. ಅರಣ್ಯ ಶಾಖೆಯ ಕೆಳದರ್ಜೆಯ ನೌಕರರಿಗೆ ಸರಿಯಾದ ತರಪೇತಿ ಕೊಟ್ಟು ಅರಣ್ಯ ಸಂಪತ್ತನ್ನು ರಕ್ಷಣೆಮಾಡುವದಕ್ಕೆ ಬೇಕಾದ ತಕ್ಕ ಮನೋಭಾವನೆ ಅವರಲ್ಲಿ ಉಂಟಾಗುವಂತೆ ಮಾಡ ಬೇಕಾದುದು ಅನಿವಾರ್ಯವಾಗಿದೆ. ನಮ್ಮ ಕೊಳ್ಳೇ ಗಾಲ ತಾಲ್ಲೂಕಿನಲ್ಲಿ ಶೇಕಡ ನಾಲ್ಕನೆ ಮೂರು ಭಾಗ ಕಾಡುನಂಪತ್ತು ಇದೆ. ಆದರೆ ಸರಕಾರಕ್ಕೆ ಅದರಿಂದ ಆದಾಯ ಸರಿಯಾಗಿ ಬರುವುದಿಲ್ಲ. ಇತ್ತೀಚೆಗೆ ಸ್ವಲ್ಪ ಕ್ರಮವನ್ನು ಈ ವಿಷಯದಲ್ಲಿ ಸರಕಾರದವರು ತೆಗೆದು ಕೊಂಡಿದ್ದಾರೆ. ಈ ರೀತಿ ಆದಾಯ ಕಡಮೆ ಬರುವ ದಕ್ಕೆ ಕಾರಣವೇನೆಂದರೆ ಸಣ್ಣಪುಟ್ಟ ನೌಕರರು ಬೇರೆ ಕಡೆಗೆ ತಮ್ಮ ಮನಸ್ಸನ್ನು ಹೆಚ್ಚು ಕೊಡುತ್ತಿರುವುದ ರಿಂದ ಸರ್ಕಾರಕ್ಕೆ ನಷ್ಟವಾಗುತ್ತಿದೆ ಎಂದು ಕಾಣು ತ್ತದೆ. ಜಮೀನಿನಲ್ಲಿಯೆ ಸೌದೆಯನ್ನು ತರುವುದಕ್ಕೆ ಅಡಚಣೆಯನ್ನುಂಟುಮಾಡಿ ಬಹಳ ಅನ್ಯಾಯಮಾಡು ತ್ತಿದ್ದಾರೆ ಎಂದು ಸರಕಾರದ ಗಮನಕ್ಕೆ ತರಲು ನಾನು ಇಷ್ಟಪಡುತ್ತೇನೆ. ಶ್ಯಾನುಭೋಗರಿಗೆ ದುಡ್ಡು ಕೊಟ್ಟುಬಿಟ್ಟರೆ ರೈತರಿಗೆ ಅವರು ಬರೆದುಕೊಡುತ್ತಾರೆ ಮತ್ತು ತೊಂದರೆಯಾಗುವುದಿಲ್ಲ. ಈ ರೀತಿ ಗ್ರಾಮಾ ಧಿಕಾರಿಗಳಿಂದಲೂ ತೊಂದರೆಯಾಗಿದೆ. ಅರಣ್ಯದಿಂದ ಸೌದೆ ತರುವುದು ಬಹಳ ಕಷ್ಟವಾಗಿದೆ. ಇದನ್ನು ಸರಿಪಡಿಸುವುದಕ್ಕೆ ಅವಶ್ಯವಿರುವ ಪುನರ್ವ್ಯವಸ್ಥೆ ಮಾಡಬೇಕು.

ಅರಣ್ಯದಲ್ಲಿ ವಿಶೇಷವಾಗಿ ಬೊಂಬು ಬೆಳೆಯುತ್ತದೆ. ಎಂಟುಹತ್ತು ಕಾಗದ ಕಾರ್ಖಾನೆಗಳನ್ನು ತೆಗೆಯ ಬಹುದು. ಇನ್ನೂವರೆಗೆ ಕಾಗದ ಕಾರ್ಖಾನೆಯನ್ನು ಪ್ರಾರಂಭಿಸಿಲ್ಲ. ಆದುದರಿಂದ ಕಾಗದ ಕಾರ್ಖಾನೆ ಯನ್ನು ಪ್ರಾರಂಭಿಸುವುದಕ್ಕೆ ಸೂಕ್ತ ಪರಿಶೀಲನೆಮಾಡ ಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಅರಣ್ಯದಲ್ಲಿ ದನಗಳನ್ನು ಮೇಯಿಸಲು ಪರ ವಾನಿಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ರೀತಿ ಮೈಸೂರು ಕಡೆ ಇಲ್ಲವೆಂದು ಕಾಣುತ್ತದೆ. ಇದರಲ್ಲಿ ರುವ ನ್ಯೂನತೆಯನ್ನು ಸರಿಪಡಿಸಬೇಕು. ಆ ರೀತಿ ಕ್ರಮ ತೆಗೆದುಕೊಳ್ಳುವರೆಂದು ನಾನು ನಂಬಿದ್ದೇನೆ.

(ಶ್ರೀ ಜಿ. ವೆಂಕಟೇಗೌಡ)

ನಮ್ಮ ತಾಲ್ಲೂಕಿನಲ್ಲಿ ಒಳಗಡೆ ಪ್ರದೇಶದಲ್ಲಿ ರಸ್ತೆಗಳು ಸರಿಯಾಗಿಲ್ಲ. ಅರಣ್ಯದಲ್ಲಿಯ ರಸ್ತೆಗಳನ್ನು ಫಾರೆಸ್ಟ್ ಡಿಪಾರ್ಟ್‌ಮೆಂಟಿನವರಿಗೆ ದುರಸ್ತಿಮಾಡುವದಾಗದಿದ್ದರೆ ಈ ಕೆಲಸವನ್ನು ಸರ್ಕಾರ ವಹಿಸಿಕೊಂಡು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಮಾರಾಟ ತೆರಿಗೆಯ ವಿಷಯದಲ್ಲಿ ಈಗಾಗಲೇ ಅನೇಕ ಸದಸ್ಯರು ಮಾತನಾಡಿ ಹೇಳಿದ್ದಾರೆ. ನಾನು ಈ ಬಗ್ಗೆ ಹೆಚ್ಚಿಗೆ ಹೇಳಲು ಇಷ್ಟಪಡುವುದಿಲ್ಲ. ಈಗಾಗಲೇ ನಾನು ಸರಕಾರದ ಗಮನಕ್ಕೆ ತಂದಿರುವ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ತಕ್ಕ ಕ್ರಮ ಬೇಗನೇ ತೆಗೆದುಕೊಳ್ಳಬೇಕೆಂದು ಮತ್ತೊಮ್ಮೆ ನನ್ನ ಭಾಷಣ ಮುಗಿಸುವ ಮೊದಲು ಸೂಚಿಸಬಯಸುತ್ತೇನೆ.

ಇನ್ನು ಈ ಬಡ್ಜೆಟ್‌ನಲ್ಲಿ Union Excise Dutiesನಿಂದ 328 ಲಕ್ಷ 61 ಸಾವಿರ ರೂಪಾಯಿ ಆದಾಯ ಬರುತ್ತದೆಂದು ತೋರಿಸಿದ್ದಾರೆ. ರಾಜ್ಯಗಳಿಗೆ ಕೊಡತಕ್ಕಂಥ ಭಾಗ 192 ಲಕ್ಷ 34 ಸಾವಿರ ರೂಪಾಯಿಗಳು ಎಂದು ಇದೆ. Additional Duties 136 ಲಕ್ಷ 27 ಸಾವಿರ ರೂಪಾಯಿ ಎಂದು ತೋರಿಸಲಾಗಿದೆ.

ಇನ್ನು ಈ ವರ್ಷದ ಸೇಲ್ಸ್‌ಟ್ಯಾಕ್ಸ್ ಬಾಬಿಗೆ ಬಡ್ಜೆಟ್ ಮೆಮೋರ್ಯಾಂಡಂ 23ನೆಯ ಪುಟದಲ್ಲಿ 58·59 ಲಕ್ಷ ರೂಪಾಯಿಗಳನ್ನು ತೋರಿಸಿದ್ದಾರೆ. ಇಲ್ಲ ಕೆಲವು ಪದಾರ್ಥಗಳ ಮೇಲೆ ಮಾರಾಟತೆರಿಗೆಯನ್ನು ಕೇಂದ್ರ ಸರ್ಕಾರದ ಸೂಚನೆಯಂತೆ ತೆಗೆದುಹಾಕಲು ಅದನ್ನು ಕೇಂದ್ರ ಸರ್ಕಾರದವರೇ ವಹಿಸಿಕೊಂಡಮೇಲೆ ನಮ್ಮ ಪ್ರಾಂತ್ಯಕ್ಕೆ ಕೇಂದ್ರ ಸರ್ಕಾರದಿಂದ 136.27 ಲಕ್ಷ ರೂಪಾಯಿಗಳು ಬರುತ್ತದೆ. ಅದನ್ನು ಬಡ್ಜೆಟ್ ಮೆಮೊರ್ಯಾಂಡಂ 23ನೆಯ ಪುಟದಲ್ಲಿ 12 (A) ಸೇಲ್ಸ್‌ಟ್ಯಾಕ್ಸ್ ಬಾಬಿನಲ್ಲಿ ನಮೂದಿಸಿದೆ. ಇನ್ನೊಂದು ಸಾರಿ ಇದೇ 136.27 ಲಕ್ಷ ರೂಪಾಯಿಗಳನ್ನು ಪುಟ 12ರಲ್ಲಿ ಯೂನಿಯನ್ ಎಕ್ಸೈಜು ಡ್ಯೂಟೀಸ್ ಹೆಡ್ಡಿನಲ್ಲಿ ಕೇಂದ್ರ ಸರ್ಕಾರದಲ್ಲಿ ವಿಧಿಸುವ ಅಡಿಷನಲ್ ಡ್ಯೂಟೀಸ್ ಆಫ್ ಎಕ್ಸೈಜು ಬಾಬಿಗೆ ತೋರಿಸಿದ್ದಾರೆ. ಇದು ಡಬ್ಬರ್ ಎಂಟ್ರಿಯಾಗಿದೆ. ಇದರ ಅರ್ಥ ನನಗೆ ಗೊತ್ತಿಲ್ಲ. ಈ 136·27 ಲಕ್ಷ ರೂಪಾಯಿಗಳ ಆದಾಯವನ್ನು ಈ ಎರಡು ಬಾಬುಗಳಲ್ಲಿ ಯಾವುದಾದರೂ ಒಂದಕ್ಕೆ ಸೇರಿಸಿದ್ದರೆ, ಆಗ ಈ ದಿವಸ ಸರ್ಕಾರದವರು ಅವರ ಬಡ್ಜೆಟ್ಟಿನಲ್ಲಿ 14·05 ಲಕ್ಷ ರೂಪಾಯಿಗಳು ನಪ್ಲಸ್ ಎಂದು ತೋರಿಸಿರುವುದಕ್ಕೆ ಬದಲಾಗಿ ಈ ಬಡ್ಜೆಟ್‌ನಲ್ಲಿ 122·22 ಲಕ್ಷ ರೂಪಾಯಿಗಳು ಖೋತಾ ಬರುತ್ತಿತ್ತು ಎಂದು ತೋರಿಸುತ್ತಿದ್ದರು. ಮಾನ್ಯ ಹಣಕಾಸಿನ ಸಚಿವರು ಉತ್ತರ ಕೊಡುವಾಗ ಈ ವಿಷಯದಲ್ಲಿ ಸೂಕ್ತ ರೀತಿಯಲ್ಲಿ ವಿವರಣೆ ಕೊಡುತ್ತಾರೆಂದು ನಂಬಿದ್ದೇನೆ.

ಇನ್ನು ಚೆಕ್ಕ್ಸ್ ಬುಕ್ಕುಗಳಿಗೆ ಮಾರಾಟ ತೆರಿಗೆಯ ವಿನಾಯಿತಿ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್‌ಷಾ (ಬಾಗೇವಾಡಿ).—ಸಭಾಧ್ಯಕ್ಷರೇ, ನಾನು ಅಡಮಿಗಳ ವಿಚಾರದ ಮೇಲೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅನೇಕ ಸದಸ್ಯರು ಆ ವಿಷಯದಲ್ಲಿ ಸೂಕ್ತವಾದ ಸಲಹೆಗಳನ್ನು ಈಗಾಗಲೇ ಸರ್ಕಾರಕ್ಕೆ ಕೊಟ್ಟಿದ್ದಾರೆ. ನಾನು ಅರ್ಥಮಂತ್ರಿಗಳು ಐದು ಭಾಗಗಳಿಗೂ ಏಕರೀತಿಯಾದ ಮಾರಾಟ ತೆರಿಗೆಯ ಮಸೂದೆಯನ್ನು ಮಂಡಿಸುವುದನ್ನು ಸ್ವಾಗತಿಸುತ್ತಾ ಕೆಲವು ಸೂಚನೆಗಳನ್ನು ಕೊಡಬೇಕೆಂದಿದ್ದೇನೆ. ಈಗ ನಮಗೆ ಸಿಕ್ಕುವ ಹೆಚ್ಚಿನ ಹಣ ಮಾರಾಟ ತೆರಿಗೆಯಿಂದ ಮತ್ತು ವರಮಾನ ತೆರಿಗೆಯಿಂದ. ವ್ಯಾಪಾರಸ್ಥರಿಂದ ನಮಗೆ ಹಣಸಹಾಯ ಬಹಳಷ್ಟಿರುತ್ತದೆ. ಅದಕ್ಕಾಗಿ ಸರ್ಕಾರದವರು ಅವರಿಗೆ ಸಹಕಾರ ನೀಡುವುದು ಪ್ರಥಮ ಕರ್ತವ್ಯ. ಆದ್ದರಿಂದ ನಾನು ಮೊದಲು ಅರ್ಥಮಂತ್ರಿಗಳಿಗೆ ಧನ್ಯವಾದ ಕೊಡುತ್ತೇನೆ. ಅವರು ಬಹಳ ಜಾಣ್ಮೆಯಿಂದ ಐದು ಭಾಗಗಳನ್ನೂ ಕ್ರೋಢೀಕರಿಸಿ ಈ ಮಾರಾಟ ತೆರಿಗೆ ಮಸೂದೆಯನ್ನು ತಂದಿರುತ್ತಾರೆ. ಆದರೆ ಮುಂಬೈ ಕರ್ಣಾಟಕದ ಬೌಂದರಿ ಆಚೆಇರುವ ನಮಗೆ ಇದರಿಂದ ಕೆಲವು ತೊಂದರೆಗಳಾಗುತ್ತಿವೆ. ಮುಖ್ಯವಾಗಿ ನಿಪ್ಪಾಣಿಯಲ್ಲಿ ಬೆಲ್ಲದ ವ್ಯಾಪಾರದಿಂದ ನಮ್ಮ ಸರ್ಕಾರಕ್ಕೆ ಹಾನಿಯಾಗುತ್ತಿದೆ. ಮುಂಬೈಯಲ್ಲಿ ಈ ತರಹ ಪದ್ಧತಿ ಇಲ್ಲದಿರುವ ಕಾರಣದಿಂದ ವ್ಯಾಪಾರ ವೆಲ್ಲಾ ಅತ್ತ ಸಾಗುತ್ತಿದೆ. ಅರಜುನಗಿಪೇಟೆ ನಮ್ಮ ಗಡಿಗೆ ಕೇವಲ ಎರಡು ಮೈಲಿಗಳಿರುವುದರಿಂದ ಅಲ್ಲಿಯೇ ವ್ಯಾಪಾರವಾಗುತ್ತದೆ. ಇದರಿಂದ ಸರ್ಕಾರಕ್ಕೆ ಹೆಚ್ಚಿನ ಹಾನಿಯಾಗುತ್ತದೆ. ಸೊಲ್ಲಾಪುರದಿಂದ ಪೆಟ್ರೋಲ್, ಸೀಮೆಯೆಣ್ಣೆ ಮುಂತಾದುವುಗಳನ್ನು ತರುತ್ತಾರೆ. ವ್ಯಾಪಾರ ಅಲ್ಲಿ ಚೆನ್ನಾಗಿ ಆಗುತ್ತದೆ. ಇದರಿಂದ ನಮಗೆ ಹಾನಿಯಾಗುತ್ತದೆ. ಬೊಂಬಾಯಿ ಪ್ರಾಂತದಲ್ಲಿ ಏನು ಸೇಲ್ಸ್‌ಟ್ಯಾಕ್ಸ್ ಇದೆಯೋ ಅದಕ್ಕಿಂತ ಕಡಿಮೆ ಇಲ್ಲಿ ವಿಧಿಸಬೇಕು. ಇನ್ನು ಹಣ್ಣುಹಂಪಲುಗಳ ಮೇಲೆ ಸೇಲ್ಸ್‌ಟ್ಯಾಕ್ಸ್ ಹಾಕಿರುತ್ತಾರೆ. ಅದು ಬಹಳ ಅನ್ಯಾಯ. ಅವು ಆಗಾಗ್ಗೆ ಕೊಳೆತುಹೋಗುವುದರಿಂದ, ಅವುಗಳ ಮೇಲೆ ಮಾರಾಟ ತೆರಿಗೆ ವಿಧಿಸುವುದನ್ನು ತೆಗೆಯಬೇಕು. ಹೆಣ್ಣುಮಕ್ಕಳು ಪ್ರತಿದಿನವೂ ಉಪಯೋಗಿಸುವಂತಹ ಅರಸಿನ ಕುಂಕುಮಗಳ ಮೇಲೆ ವಿಧಿಸುವ ಮಾರಾಟ ತೆರಿಗೆಯನ್ನು ಪ್ರಥಮತಃ ತೆಗೆದುಹಾಕಬೇಕು. ಇನ್ನು ರಿಬ್ಬನ್, ಸ್ನೋ, ಫೇಸ್ ಪೌಡರ್ ಮುಂತಾದ ವಸ್ತುಗಳ ಮೇಲೆ ಕರ ಹೇರಿದರೂ ಯಾವ ಆತಂಕವೂ ಆಗುವುದಿಲ್ಲ. ಅವನ್ನು ಜನಸಾಮಾನ್ಯರು ಉಪಯೋಗಿಸಲಿಕ್ಕೆ ಅಷ್ಟಾಗಿ ಅವಶ್ಯಕತೆಯಿಲ್ಲ. ನಾನು ಈ ರೀತಿ ಹೇಳಿರುವುದನ್ನು ಮಹಿಳೆಯರು ವಿರೋಧಿಸುವುದಿಲ್ಲವೆಂದು ಆಶ್ವಾಸನವೀಯುತ್ತೇನೆ. ಶ್ರೀ ಮಲ್ಲಾರಾಧ್ಯರು ಹೇಳಿದ್ದು ಸರಿಯಲ್ಲ. ಹೊಸ ಷಸ್ತ್ರಕಗಳ ಮೇಲೂ ಮಾರಾಟ ತೆರಿಗೆಯನ್ನು ಹಾಕಬಾರದು. ಅದರಿಂದ ವ್ಯಾಪಾರ ಮುಂದಿಗೆ ಹೆಚ್ಚು ತೊಂದರೆಯಾಗುತ್ತದೆ.

ಇನ್ನೊಂದು ವಿಷಯ. ನಮ್ಮ ಮಾರಾಟ ತೆರಿಗೆ ಆಫೀಸರುಗಳಿಂದ ಅನೇಕ ವೇಳೆ ಬಹಳ ತೊಂದರೆಗಳಾಗುತ್ತವೆ. ಹೇಗೆಂದರೆ ಅವರು ಬೇಗನೆ ಲೆಖ್ಖ ಗಳನ್ನು ತಪಾಸಣೆಮಾಡದೆ ವ್ಯಾಪಾರಸ್ಥರನ್ನು ತೊಂದರೆಗೀಡುಮಾಡುತ್ತಾರೆ. ಒಮ್ಮೆಲೆ ಟ್ರೈಂ ಬಾರ್ ಆಯಿತೆಂದು ಹೇಳುತ್ತಾರೆ. ಇದರಿಂದ ಅನಾವಶ್ಯಕವಾಗಿ ಸರಕಾರದ ಬಗ್ಗೆ ಜನರಲ್ಲಿಒಂದು ತಪ್ಪು ಕಲ್ಪನೆ ಉಂಟಾಗುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಈ ತೊಡಕುಗಳನ್ನು ಬೇಗನೆ ಸರ್ಕಾರದವರು ಸರಿಪಡಿಸಬೇಕೆಂದು ಬೆನ್ನೈಸುತ್ತೇನೆ.

ಇಷ್ಟು ಹೇಳುವುದಕ್ಕೆ ನನಗೆ ಸಮಯಾವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ತುಂಬಾ ಉಪಕೃತಳು ಎಂಬುದಾಗಿ ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಬಿ. ರಾಚಯ್ಯ (ಚಾಮರಾಜನಗರ) — ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರತಕ್ಕ ಅರಣ್ಯಶಾಖೆಗೆ ಸಂಬಂಧಪಟ್ಟ ಡಿಮ್ಯಾಂಡ್ ಮನವಿಯನ್ನು ಅನುಮೋದಿಸುತ್ತಾ, ನನಗೆ ತಿಳಿದ

ಒಂದೆರಡು ವಿಷಯಗಳನ್ನು ಈ ಸಭೆಯ ಮುಂದೆ ನಿವೇದಿಸಿಕೊಳ್ಳಲು ನಿಂತಿದ್ದೇನೆ. ಕಾಲಾವಕಾಶ ಬಹಳ ಕಡಮೆಯಾಗಿರುವುದರಿಂದ ಹೆಚ್ಚಿಗೆ ಪ್ರಸ್ತಾಪಮಾಡದೆ ನೇರವಾಗಿ ಅರಣ್ಯಶಾಖೆಯ ಆಡಳಿತಕ್ಕೆ ಸಂಬಂಧಪಟ್ಟಂಥ ವಿಷಯದಲ್ಲಿ ಮೊದಲನೆಯದಾಗಿ ಒಂದೆರಡು ಮಾತುಗಳನ್ನು ಹೇಳುತ್ತಿದ್ದೇನೆ.

ಈಗ ಐದು ಭಾಗಗಳಿಂದ ಬಂದಿರತಕ್ಕ ಅರಣ್ಯ ಸಂಪತ್ತು ನಮ್ಮಲ್ಲಿ ಹಿಂದೆ ಇದ್ದುದಕ್ಕಿಂತಲೂ ಕೂಡ ಬಹಳ ಹೆಚ್ಚಾಗಿದೆ. ಅದಕ್ಕಾಗಿ ನಾವು ಹೆಮ್ಮೆಪಡಬೇಕಾದಂಥ ಸಂದರ್ಭ ಒದಗಿದೆ. ಆದರೆ ಅರಣ್ಯ ಸಂಪತ್ತಿನ ಬಗ್ಗೆ ಆಡಳಿತ ನಡೆಸತಕ್ಕ ರೀತಿ ಬೇರೆಯಾಗಿದೆ. ಈಗಿನ ಅರಣ್ಯ ಸಂಪತ್ತಿನ ಭೂಮಿ ಹಳೆಯ ಕಾಲದಲ್ಲಿನ ಅರಣ್ಯಕ್ಕೆ ಸಂಬಂಧಪಟ್ಟಂಥ ಭೂಮಿ ಎಷ್ಟಿತ್ತೋ ಅದಕ್ಕಿಂತಲೂ ಬಹಳ ಹೆಚ್ಚಾಗಿದ್ದಾಗ್ಯೂ ಕೂಡ ಆಡಳಿತ ವರ್ಗಮಾತ್ರ ಕಡಮೆಯಾಗಿದೆ. ಅದರಲ್ಲೂ ಕೂಡ ಬಡಕೆಳದರ್ಜೆ ನೌಕರರು ಅಂದರೆ ಫಾರೆಸ್ಟ್‌ನಲ್ಲಿರತಕ್ಕಂಥ ಅರಣ್ಯಸಂಪತ್ತನ್ನು ಉಳಿಸಿಕೊಂಡು, ಬೆಳೆಸಿಕೊಂಡು ಮತ್ತು ಅದನ್ನು ಕಾಪಾಡಿಕೊಂಡು ಬರತಕ್ಕ ನೌಕರ ವರ್ಗ ಇವತ್ತಿನ ದಿವಸ ಬಹಳ ಕಡಮೆ ಸಂಖ್ಯೆಯಲ್ಲಿದೆ. ಇದಕ್ಕಾಗಿ ಹೆಚ್ಚಿಗೆ ವಿಶಾಲವಾಗಿರತಕ್ಕ ಅರಣ್ಯದಲ್ಲಿ ಕೆಲವು ಮಂದಿ ಫಾರೆಸ್ಟ್ ಅಗ್ರಿಕಲ್ಚರಿಸ್ಟ್ಸ್, ಒಬ್ಬೊಬ್ಬರೇ ತಮ್ಮ ಕಾಡುಗಳನ್ನು ನೋಡಿಕೊಳ್ಳಲು ಆಗದೆ ತಾತ್ಕಾಲಿಕವಾಗಿ ಕೆಲವು ಕೂಲಿಗಾರರನ್ನು ನೇಮಿಸುತ್ತಾರೆ. ಅರಣ್ಯದಿಂದ ಕಳ್ಳತನವಾಗಿ ಸಾಗಾಣಿಕೆಯಾಗುವಂಥ ಬಹು ಬೆಲೆಯಾಗುವಂಥ ಸಾಗುವಾನಿ, ಕಪ್ಪುಮರ, ಗಳಗಳು ಇವನ್ನು ತಡೆಗಟ್ಟಬೇಕಾದರೆ ಕಾಡುಗಳಲ್ಲಿರತಕ್ಕ ನೌಕರರ ಸಂಖ್ಯೆ ಏನೇನೂ ಸಾಲದು ಎಂದು ನನಗೆ ತಿಳಿದು ಬಂದಿದೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ನಾನೂನಹ ಕಾಡಿನ ವಿಷಯವನ್ನು ಚೆನ್ನಾಗಿಬಲ್ಲೆ. ನನಗೆ ಬಳಿಗಿರಿ ರಂಗನ ಬೆಟ್ಟ ಮತ್ತು ಪೂರ್ವ ಘಟ್ಟದ ಬೆಟ್ಟಗಳಲ್ಲಿರುವ ಕಾಡಿನ ಅನುಭವ ಇರುವುದರಿಂದ ಈ ಮಾತನ್ನು ಹೇಳುತ್ತಿದ್ದೇನೆ. ಈಗ ನುಮಾರು ಒಂದೂವರೆ ವರ್ಷಗಳ ಹಿಂದೆ ಕಾಡಿನಲ್ಲಿ ಎಷ್ಟು ಸಂಪತ್ತು ಇತ್ತೋ ಅಷ್ಟು ಸಂಪತ್ತೂ ಉಳಿಯುವುದಕ್ಕೆ ಈ ದಿನ ಅವಕಾಶ ಇಲ್ಲ ಎಂದು ನನಗನಿಸುತ್ತದೆ. ಕಾಡಿನಲ್ಲಿ ಸೌದೆಯನ್ನು ಸಾಗಿಸುವುದಕ್ಕೋಸ್ಕರ ಹೆಚ್ಚಿಗೆ ಅವರು ಕೂಪ್‌ಗಳನ್ನು ಗೊತ್ತುಮಾಡಿ ಕಂಟ್ರಾಕ್ಟ್‌ದಾರರಿಗೆ ಅವನ್ನು ಲಾರಿಗಳಲ್ಲಿ ತೆಗೆದುಕೊಂಡು ಹೋಗಲು ಮತ್ತು ಆ ಸೌದೆಯನ್ನು ಸಾಗಿಸಲು ಲೈಸನ್ಸ್ ಕೊಟ್ಟು ಏನೊಂದು ಕಾಲವನ್ನು ನಿಗದಿಮಾಡಿದ್ದಾರೋ, ಆ ಕಾಲದಲ್ಲಿ ತೆಗೆದುಕೊಂಡು ಹೋಗದೆ, ಒಳ್ಳೆಯ ಮಧ್ಯರಾತ್ರಿಯಲ್ಲಿ ಕಳ್ಳತನದ ಸಾಗಾಣಿಕೆಗೆ ಅವಕಾಶವನ್ನು ಕೆಟ್ಟಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳಾದ ಫಾರೆಸ್ಟ್ ರೇಂಜ್ ಆಫೀಸರ್, ಸಬ್‌ರೇಂಜ್ ಆಫೀಸರುಗಳು ನೌಕರರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳದೇ ಕಾಂಟ್ರಾಕ್ಟುದಾರರಿಗೆ ನಾವು ಈದಿನ ಇಂತಹ ಸ್ಥಳದಲ್ಲಿ ಇನ್‌ಸ್ಪೆಕ್ಷನ್ ಮಾಡುತ್ತೇವೆ ಅಲ್ಲಿಗೆ ನೀವು ಬರಬೇಡಿ ಬೇರೆ ಇಂತಹ ಸ್ಥಳಕ್ಕೆ ಹೋಗಿ ಆ ಮೂಲಕ ಸೌದೆಯನ್ನು ಸಾಗಿಸಿ ಎಂದು ಹೇಳಿರುವ ನಿದರ್ಶನಗಳು ನನಗೆ ಕಂಡು ಬಂದಿದೆ. ಆದರೆ ನಾನು ಯಾರ ಮೇಲೂ ಆಪಾದನೆ ಮಾಡಬೇಕು ಎಂಬ ದೃಷ್ಟಿಯಿಂದ ಇದನ್ನು ಹೇಳುತ್ತಾ ಇಲ್ಲ. ಚಾಮರಾಜನಗರದಿಂದ ಟಿ. ನರಸೀಪುರಕ್ಕೆ ಹೋಗತಕ್ಕ ದಾರಿಯಲ್ಲಿ ಹಗಲನಲ್ಲಿ ಗಾಡಿಗಳಿಂದ ಸಾಗುವಾನಿ ಮರ ಸಾಗುತ್ತಿದ್ದುದನ್ನು ಮಧ್ಯೆಯಾವುದೋ ಒಂದು ಊರಿನಿಂದ ತೆಗೆದುಕೊಂಡು ಬನ್ನಿ ಎಂದು ಹೇಳಿದ್ದಾರೆ. ಮಂಡ್ಯ ಇತರ ಕಡೆಗಳಿಂದ ಹಗಲನಲ್ಲಿಯೇ ಮರವನ್ನು ಸಾಗಿಸುತ್ತಿದ್ದಾರೆ. ನನಗೆ ತಿಳಿದ ಮಟ್ಟಿಗೆ ಲಾರಿಗಳಲ್ಲಿಯೇ ಬರುತ್ತದೆ. ಒಂದು ವೇಳೆ ಚಾಮರಾಜ ನಗರದಿಂದ ಟಿ. ನರಸೀಪುರಕ್ಕೆ ಹೋಗುವ ರಸ್ತೆಯಲ್ಲಿ ಯಾವುದೋ ಒಂದು ಹಳ್ಳಿಯ ಹತ್ತಿರ ಸೌದೆ ಲಾರಿ ಬರುತ್ತದೆ, ಅಲ್ಲಿ ಹೋಗಿ ಹಿಡಿದುಕೊಳ್ಳಿ ಎಂದು ಫಾರೆಸ್ಟ್ ಇಲಾಖೆಗೆ ಹೇಳಿದರೆ, ಅವರೇ ಲಾರಿಯವರ ಹತ್ತಿರ ಹೋಗಿ ಸ್ವಾಮಿ, ನೀವು ಅಲ್ಲಿ ಬರಬೇಕಾಗಿಲ್ಲ ಇನ್ನೊಂದು ದಾರಿಯಲ್ಲಿ ತೆಗೆದು ಕೊಂಡು ಹೋಗಿ ಎಂದು ಹೇಳಿರುವ ನಿದರ್ಶನಗಳು ಬೇಕಾದಷ್ಟಿವೆ. ನಾವು ಈ ರೀತಿ ಪ್ರಚೋದನೆ ಮಾಡಿ ಹಗಲನಲ್ಲಿಯೇ ಎಷ್ಟೋ ಕಳ್ಳತನದಲ್ಲಿ ಸಾಗಾಣಿಕೆ ಮಾಡಿದಂತಹವರನ್ನು ಹಿಡಿದಿದ್ದೇವೆ.

5 P.M.

ಈ ಇಲಾಖೆಯ ನಣ್ಣ ನೌಕರರು ನಿಸ್ಪೃಹತೆಯಿಂದ ದುಡಿಯಬೇಕೆಂದು ಪ್ರಯತ್ನ ಮಾಡಿದರೂ ಕೂಡ ದೊಡ್ಡವರು ಎಂದರೆ ಆ ನಮ್ಮ ಸಬ್‌ಡಿವಿಜ್ಞ ಮಟ್ಟಿಗೆ ಹೇಳುತ್ತೇನೆ ಆ ರೀತಿ ಮಾಡುತ್ತಾರೆ. ಅದು ಮಾನ್ಯ ಮಂತ್ರಿಗಳವರ ಗಮನಕ್ಕೆ ಬರದೇ ಇರಬಹುದು, ಅದನ್ನು ವಿಚಾರಮಾಡಿ, ಅದೇನಿದೆ ಎಂಬುದನ್ನು ಸರ್ಕಾರದವರು ನೋಡಿ ತಿದ್ದಬೇಕೆಂದು ಹೇಳುತ್ತೇನೆ. ನಣ್ಣ ನೌಕರರ ವರ್ಗ ಏನಿದೆ ಅದು ಸಾಲದು. ಇನ್ನೂ ಹೆಚ್ಚು ಸಿಬ್ಬಂದಿ ಕೊಟ್ಟು ಅರಣ್ಯ ಸಂಪತ್ತನ್ನು ಕಾಪಾಡುವುದಕ್ಕೆ ಏನೇನು ಸೌಲಭ್ಯಗಳನ್ನು ಅವರಿಗೆ ಒದಗಿಸಬೇಕೊ ಅದನ್ನೆಲ್ಲಾ ಮಾಡಿಕೊಡಬೇಕೆಂದು ಮಾತ್ರ ಈ ಸಂದರ್ಭದಲ್ಲಿ ಹೇಳುತ್ತೇನೆ. ಕಾಡಿನಲ್ಲಿ ವಾಸ ಮಾಡತಕ್ಕ ಕಾಡು ಕುರುಬರು ಮುಂತಾದವರಿಂದ ಅರಣ್ಯದಲ್ಲಿರತಕ್ಕ ರಸ್ತೆಗಳ ಕೆಲಸ ಮತ್ತು ಮರಗಳನ್ನು ಬೆಳೆಸುವುದು ಈ ಕೆಲಸಗಳನ್ನು ಮಾಡಿಸುತ್ತಾರೆ. ನಾನು ಸ್ವಂತ ಅನುಭವದಿಂದ ಹೇಳುತ್ತೇನೆ. ಇಲಾಖೆಯವರು ಅವರಿಗೆ ಎಷ್ಟು ಕೂಲಿ ಕೊಡಬೇಕೆಂದು ನಿಗದಿ ಮಾಡಿದ್ದರೂ ನಹ ಅದರಲ್ಲೂ ಹಿಡಿದುಕೊಂಡು ನ್ಯಾಯವಾದ ರೀತಿಯಲ್ಲಿ ಕೂಲಿಕೊಡುತ್ತಿಲ್ಲ. ಮತ್ತು ವರ್ಷೇ ವರ್ಷೇ ಆ ಕಾಡಿನಲ್ಲಿರತಕ್ಕ ರಸ್ತೆಗಳನ್ನು ಸರಿ ಮಾಡಿಸ ಬೇಕೆಂದು ಹೇಳಿದ್ದರೂ ನಹ ಅದು ಆಗದೆ ನೆಪಮಾತ್ರದ ಬಿಲ್ ಆಗುವುದು ನೋಡಿ ಬಹಳ ವ್ಯಥೆಯಾಗುತ್ತಿದೆ. ತಾವು ಒಂದೆರಡು ಸಾರಿ ಮಂತ್ರಿವರ್ಗದವರಾಗಲಿ, ಅಥವಾ ಚೀಫ್ ಕನಸರ್ವೇಟರ್ ಆಗಲಿ ದಯಮಾಡಿ ಅಲ್ಲಿ ಏನಾಗಿದೆ, ಅಲ್ಲಿರತಕ್ಕ ನಣ್ಣ ಪುಟ್ಟ ನೌಕರ ವರ್ಗದವರು, ಇಲಾಖೆಯವರು ಏನು ಹೇಳುತ್ತಾರೆ ಎಂಬುದನ್ನು ವಿಚಾರಮಾಡಬೇಕೆಂದು ಈ ಸಭೆಯಲ್ಲಿ ಸೂಚನೆ ಮಾಡುತ್ತೇನೆ.

ಎರಡನೆಯದಾಗಿ ಡೆವಲಪ್‌ಮೆಂಟಲ್ ಪ್ರೋಗ್ರಾಂನಲ್ಲಿ ಕಳೆದ 56-57 ಮತ್ತು ಚಾಲ್ತಿ 58-59ನೇ ಸಾಲುಗಳಲ್ಲಿ ಯಾವ ಹಣವನ್ನೂ ಒದಗಿಸಿಲ್ಲ. ಅರಣ್ಯಸಂಪತ್ತು ಹೆಚ್ಚು ಮಾಡಬೇಕಾದರೆ ಇದ್ದಂಥ ಅರಣ್ಯ ಸಂಪತ್ತನ್ನು ಕಾಪಾಡಿಕೊಂಡು ಹೋಗುವುದು ಅವಶ್ಯಕ ಅರಣ್ಯ ಸಂಪತ್ತು ಹಾಳಾಗದೇ ಇರುವಂತೆ ಮತ್ತು ಹೆಚ್ಚು ಮಾಡುವಂಥ ಕಾರ್ಯಗಳನ್ನು ಪರಿಶೀಲನೆ ಮಾಡುವ ಸಂದರ್ಭದಲ್ಲಿ ಒಂದು ಮಾತು ಹೇಳಬೇಕಾಗಿದೆ. ಲಕ್ಕ ವಳ್ಳಿ ಮತ್ತು ಇತರ ಕಾಡುಗಳನ್ನು ನಾನು ಎಸ್ಟಿಮೇಟ್ಸ್ ಕಮಿಟಿಯಲ್ಲಿದ್ದಾಗ ಹೋಗಿ ಕಾಡಿನಲ್ಲಿ ನುತ್ತಿದ್ದೇನೆ. ನಮ್ಮ ಅರಣ್ಯ ಸಂಪತ್ತಿನಲ್ಲಿ ಗಂಧದ ಮರದಿಂದ ನನಗೆ 50 ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಉತ್ಪನ್ನ ಬರುತ್ತದೆ. ಗಂಧದ ಮರಕ್ಕೆ ಬೇಳತಕ್ಕ spike disease ನಬಗ್ಗೆ ರಿನರ್ಚ್ ನಡೆಸಿಲ್ಲ. ಅದನ್ನು

(ಶ್ರೀ ಬಿ. ರಾಚಯ್ಯ)

ನಡೆಸಬೇಕು ಮತ್ತು ಎಷ್ಟೋ ಅರಣ್ಯಗಳಲ್ಲಿ ಗಂಧದ ಮರದ ಸಂಪತ್ತು ಇದೆ. ಅದನ್ನು ಸರ್ವೇ ಮಾಡಿಸ ಬೇಕು ಮತ್ತು ಇನ್ನೆಷ್ಟು ವರ್ಷ ಅವನ್ನು ಪ್ಯಾಕ್ಟರಿಗೆ ಒದಗಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ನೋಡ ಬೇಕು. ಒಂದು ವೇಳೆ ಅದು ಸಾಕಾಗದೇಹೋಗುವ ಪಕ್ಷದಲ್ಲಿ ಗಂಧದ ಬೀಜಗಳನ್ನು ಬಿತ್ತಿ ಈ ಸಂಪತ್ತನ್ನು ಹೆಚ್ಚಿಸ ಬೇಕೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ.

ಮತ್ತು ಕಾಡಿನಲ್ಲಿ ಬೆಂಕಿ ಹತ್ತಿಕೊಂಡು ಕಾಡುಕಿಚ್ಚಿ ನಿಂದ ಅನೇಕ ಮರಗಳು ಹಾಳಾಗಿಹೋಗುತ್ತವೆ. ಬೇಸಿಗೆಯಲ್ಲಿ ಮರಗಳು ಒಂದಕ್ಕೊಂದು ತಿಕ್ಕಾಟ ವಾಗಿ ಬೆಂಕಿ ಉತ್ಪನ್ನವಾಗುತ್ತದೆ. ಇದನ್ನು ಯಾವ ರೀತಿ ತಪ್ಪಿಸಲು ಅವಕಾಶವಿದೆ ಎಂಬುದನ್ನು ಪರಿಶೀಲನೆ ಮಾಡಿ ಅವನ್ನು ತಪ್ಪಿಸುವುದಕ್ಕೆ ಸ್ವಲ್ಪ ಪ್ರಯತ್ನ ಮಾಡ ಬೇಕೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ.

ಕಾಡಿನಲ್ಲಿ ಹರಾಜಿನಿಂದ ಬರತಕ್ಕ ಉತ್ಪನ್ನವನ್ನು ಹೆಚ್ಚುಮಾಡಿಕೊಳ್ಳಬೇಕು. ಅದು ಕೆಲವರಿಗೆ ಮಾತ್ರ ಒಂದು ಮನಾಪಲಿ ಆಗಿರುವಂತೆ ಕಾಣುತ್ತಿದೆ. ದೊಡ್ಡ ದೊಡ್ಡ ಕಾಡನ್ನು ಹರಾಜುಮಾಡಿ ಸಣ್ಣ ಪುಟ್ಟ ಕಂಟ್ರಾಕ್ಟ್‌ದಾರರು ಒಂದು ಬಿಡ್‌ಮಾಡಿ ಸರ್ಕಾರಕ್ಕೆ ಬರತಕ್ಕ ಹೆಚ್ಚಿನ ಉತ್ಪನ್ನವನ್ನು ಕಳೆದುಕೊಳ್ಳಬಾರದು ಎಂದು ಸೂಚನೆ ಸಾಡುತ್ತೇನೆ.

ಕಾಡಿನಲ್ಲರತಕ್ಕ ಮೃಗಗಳನ್ನು ಕಾಪಾಡುವುದಕ್ಕೆ ಬಂಡೀಪುರದಲ್ಲಿ ತಾವು ಬಹಳ ಹೆಚ್ಚಿನ ಶ್ರಮವಹಿಸಿ ದ್ದೀರಿ. ಅದೇ ರೀತಿ ಬಿಳಿಗಿರಿರಂಗನ ಬೆಟ್ಟದಲ್ಲೂ ಏರ್ಪಾಡು ಮಾಡಬೇಕು ಮತ್ತು ಅಲ್ಲರತಕ್ಕ ಅರಣ್ಯ ಬಂಡೀಪುರದಲ್ಲರುವುದಕ್ಕಿಂತಲೂ ಉನ್ನತವಾಗಿದೆ ಎಂದುಕೊಳ್ಳುತ್ತೇನೆ. ಅಲ್ಲಿಗೆ ಒಳ್ಳೆಯ ಡಿಸ್ಟಿಂಗ್ ವಿಷ್ಡ್‌ಗೆಸ್ಟ್‌ಸ್, ಮತ್ತು ರಾಜಪ್ರಮುಖರು ಬೇಜೆಗಾಗಿ ಬರುತ್ತಾರೆ. ಇಂಥಾ ಪ್ರೇಕ್ಷಣೆಯ ಸ್ಥಳವಾದುದರಿಂದ ಬಂಡೀಪುರದಲ್ಲಿ ಯಾವ ಮಟ್ಟಕ್ಕೆ ತಂದಿದ್ದೀರೋ ಅದೆ ಮಟ್ಟಕ್ಕೆ ತರಬೇಕೆಂದು ಕೇಳಿಕೊಳ್ಳುತ್ತೇನೆ ಇಷ್ಟು ಹೇಳುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ತಮ್ಮನ್ನು ವಂದಿಸಿ ನನ್ನಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ಎಸ್. ಪುಟ್ಟಣ್ಣ (ತುಮಕೂರು).—ಮಾನ್ಯ ಅಧ್ಯಕ್ಷರೇ, ತಾವು ದಯವಿಟ್ಟು ಒಂದು ಅವಕಾಶವನ್ನು ಕೊಟ್ಟದ್ದಕ್ಕಾಗಿ 10 ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ಇಲ್ಲಿಯವರೆಗೂ ಮಾನ್ಯ ಸದಸ್ಯರೆಲ್ಲಾ ಫಾರೆಸ್ಟ್ ಇಲಾಖೆಯ ವಿಷಯ ಹೇಳಿದ್ದಾರೆ. ನಾನು ಸೇಲ್ಸ್ ಟ್ಯಾಕ್ಸ್ ವಿಷಯ ತೆಗೆದುಕೊಳ್ಳುತ್ತೇನೆ. ಏಕೆಂದರೆ ಮಾನ್ಯ ಆರ್ಥಿಕ ಮಂತ್ರಿಗಳು ತಜ್ಞರು, ಜನ್ಮಾಗಿ ತಿಳಿದವರು. ಬೆಂಗಳೂರು ಸಿಟಿ ಒಂದರಲ್ಲೇ 50 ಲಕ್ಷ ರೂಪಾಯಿಗೆ ಮೇಲ್ಪಟ್ಟು ಸೇಲ್ಸ್‌ಟ್ಯಾಕ್ಸ್ ಲೀಕೇಜು ಇದೆ ಎಂದ ಮಾನ್ಯ ಮಂತ್ರಿಗಳು ಹೇಳಿದರು. ಆ ರೀತಿ ಹೇಳುವುದು ಬಹಳ ಒಳ್ಳೆಯದು. ಏಕೆಂದರೆ ಈ ಆಫೀಸರುಗಳನ್ನು ಕುರಿತು ಅವರ ತಲೆಯ ಮೇಲೆ ಹೊಡೆದು ನೀವು ಕೆಲಸ ಮಾಡುತ್ತಿಲ್ಲವೆಂದು ನಾವು ಹೇಳಿದ ಹಾಗಾಯಿತು ನಾನು ಒಂದು ಕಡೆ 10-18 ಸೇಲ್ಸ್ ಟ್ಯಾಕ್ಸ್ ಕೇಸು ಪತ್ತೆಮಾಡಿದೆ. ಮೂರು ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಸರ್ಕಾರಕ್ಕೆ ಸೇಲ್ಸ್‌ಟ್ಯಾಕ್ಸ್ ಬಾಬಿನಲ್ಲಿ ವರಮಾನ ಬಂತು. ಒಬ್ಬ ದೊಡ್ಡ ಮನುಷ್ಯ, ಆ ವ್ಯಾಪಾರಾಯ ಒಬ್ಬನೇ 25 ಸಾವಿರ ರೂಪಾಯಿ ಟ್ಯಾಕ್ಸ್ ಕೊಡಬೇಕಾಗಿತ್ತು. ಹಿಡಿದು ಹಾಕಿದೆ. ಇದು ಸರ್ಕಾರಿ ರೆಕಾರ್ಡ್‌ನಲ್ಲಿ ಇದೆ. ಇದರಿಂದ ನನಗೆ ಬಂದ ಪ್ರತಿಫಲ ಏನೆಂದರೆ ಅಲ್ಲಿಂದ ನನಗೆ ಒಬ್ಬ ಕಾಂಗ್ರೆಸ್ ಪುಡಾರಿಹತ್ತಿರದಿಂದ ಟ್ರಾನ್ಸ್‌ಫರ್ ಆಯಿತು. ಎಲ್ಲರೂ ಅಲ್ಲಿ ಸೇಲ್ಸ್‌ಟ್ಯಾಕ್ಸ್ ನ್ಯಾಗ್ಲಿಂಗ್ ಆಗುತಾ ಇದೆ ಎಂದು ಹೇಳಿದ್ದರು. ಅದನ್ನು ತಪ್ಪಿಸುವುದು ಹೇಗೆ ಎಂಬುದನ್ನು ಹೇಳಬಲ್ಲೆ. ರೈಲ್ವೇ ಸ್ಟೇಷನ್ ಗುಡ್ಸ್ ಹೆಡ್ಡಿನಲ್ಲಿ ಲೆಕ್ಕ ಸಿಕ್ಕುತ್ತದೆ. ಆಕ್ಟ್ರಾಯ್ ಆಫೀಸಿನಲ್ಲಿ ಬೇಕಾದಷ್ಟು ಲೆಕ್ಕ ಸಿಕ್ಕುತ್ತದೆ. ಬ್ಯಾಂಕ್‌ಗಳಲ್ಲಿ ಸಿಕ್ಕುತ್ತದೆ. ಕ್ರಾಸ್-ರೆಫರೆನ್ಸಿನಲ್ಲಿ ದಾಖಲೆ ಸಿಕ್ಕುತ್ತದೆ.

ಮಲಬಾರಿನಿಂದ ಕೊಬ್ಬರಿ ಎಣ್ಣೆ ತರಿಸುತ್ತಿದ್ದಾರೆ. ಇದನ್ನಲಾರಿಗಳಲ್ಲಿ ತರಿಸುತ್ತಾರೆ. ಮಲಬಾರಿನಿಂದ ಈ ಎಣ್ಣೆಯನ್ನು ಕಳಿಸಿನತಕ್ಕವನೇ ಒಬ್ಬ-ಇದನ್ನು ತರಿಸ ತಕ್ಕವನೇ ಒಬ್ಬ. ಮಧ್ಯೆ ಸಾಗಿಸತಕ್ಕವನೇ ಇನ್ನೊಬ್ಬ. ಈ ಎಣ್ಣೆಯನ್ನ ಆಖ್ಯೆರಿನಲ್ಲಿ ಮಾರಾಟ ಮಾಡುವವನೇ ಇನ್ನೊಬ್ಬ. ಹೀಗೆಲ್ಲಾ ನಾನಾ ರೀತಿ ಕಲಕು ಮಲಕು ಮಾಡುತ್ತಾರೆ. ಆದರೆ ನಮ್ಮ ಮಿತ್ರರಾದ ಶ್ರೀ ವೈ. ವೀರಪ್ಪನವರು ಮುಗುಂ ಆಗಿ ಸೇಲ್ಸ್ ಟ್ಯಾಕ್ಸ್ ಬಾಬಿನಲ್ಲಿ ಬಹಳಹಣ ಲೀಕೇಜಾಗುತ್ತಿದೆ ಯೆಂದು ಮಾತ್ರತಿಳಿಸಿದರು. ಬೊಂಬಾಯಿ, ಮದ್ರಾಸ್, ಕಲ್ಕತ್ತ ಇತ್ಯಾದಿ ಸ್ಥಳಗಳಿಂದ ಮಾಲನ್ನು ಕಳುಹಿಸಿ ಕೊಡುತ್ತಾರೆ. ಆದರೆ ಅಲ್ಲಿ ಅವರಿಗೆ ಯಾವಪತ್ತೆ—ವಿಳಾಸಗಳೊಂದೂ ಇರುವುದಿಲ್ಲ. ಅವರು ಉಡುಪಿ ಮಾವನ ಮನೆಯಲ್ಲಿದ್ದುಕೊಂಡು ಈ ವ್ಯವಹಾರಗಳನ್ನೆಲ್ಲ ನಡೆಸುತ್ತಾರೆ. ಹೀಗೆ ಯಾರೋ ಸಾಮಾನು ಕಳುಹಿಸಿ ಕೊಡುವುದು—ಅದನ್ನು ಯಾರೋ ಮಾರಾಟ ಮಾಡುವುದು. ಒಬ್ಬೊಬ್ಬರಿಗೂ ಸಂಬಂಧವೇ ಇರುವುದಿಲ್ಲ. ಮಾಲು ಕಳುಹಿಸತಕ್ಕವನಿಗೂ-ಆ ಮಾಲನ್ನು ಮಾರಾಟಮಾಡತಕ್ಕವನಿಗೂ ಯಾವ ಸಂಬಧವೂ ಇಲ್ಲದಂಥ ರೀತಿಯಲ್ಲಿ ವ್ಯವಹಾರಗಳನ್ನು ನಡೆಸುತ್ತಿದ್ದಾರೆ. ಇಂಥ ಒಂದು ಸಂದರ್ಭವನ್ನು ನಾನಿದ್ದಾಗ ಪತ್ತೆ ಹಚ್ಚಿ ಒಬ್ಬನಿಂದಲೇ 25 ಸಾವಿರ ರೂಪಾಯಿಗಳನ್ನು ವಸೂಲ್ಮಾಡಿದ್ದೇನೆ. ಮತ್ತೊಂದು ವಿಚಾರವನ್ನು ಈ ರಿಬ್ಬನ್‌ಗಳಬಗ್ಗೆ ಶ್ರೀ ವೀರಪ್ಪನವರು ಹೇಳಿದ್ದಾರೆ. ಆದರೆ ಈ ಹಿಂದೆ ರಿಬ್ಬನ್‌ಗಳು ಮೈಸೂರು ದೇಶದಲ್ಲಿ ತಯಾರಾಗುತ್ತಿರಲಿಲ್ಲ. ಜರ್ಮನಿ ದೇಶದಿಂದ ತರಿಸಲಾಗುತ್ತಿತ್ತು. ಆಗ ಆ ರಿಬ್ಬನ್‌ಗೆ ಗಜಕ್ಕೆ ಅರುಕಾಸುಗಳ ಬೆಲೆಯಿತ್ತು. ಹಾಗಿದ್ದರೂ ಅದನ್ನು ಗಜಕ್ಕೆ ಎಂಟು ಆಣೆ, ಹತ್ತು ಆಣೆ ಪ್ರಕಾರ ಮಾರಾಟ ಮಾಡುತ್ತಿದ್ದರು. ಶ್ರೀಮಂತರ ವಿಚಾರದಲ್ಲೇನೋ ಪರವಾಇಲ್ಲ. ಆದರೆ ಬಡಜನಗಳಿಗೆ ಬೆಲೆಬಾಳತಕ್ಕ ಭಂಗಾರದ ಒಡವೆಗಳನ್ನಂತೂ ಇಡಲು ಸಾಧ್ಯವಿಲ್ಲ. ಆದರೆ ಈ ರಿಬ್ಬನ್ ಬಟ್ಟೆಯ ಚೂರನ್ನಾದರೂ ಸ್ಕೂಲು ಗಳಿಗೆ ಹೋಗತಕ್ಕ ಹೆಣ್ಣು ಮಕ್ಕಳಿಗೆ ಒಂದು ಸುಲಭದರದಲ್ಲಿ ಸಿಕ್ಕುವಂತೆ ಮಾಡ ಬೇಡವೇ? ಒಂದು ದಿವಸ ನನ್ನ ಮಗಳನ್ನು ಜೊತೆಯಲ್ಲಿ ಕರೆದುಕೊಂಡು ಪೇಟೆಯಲ್ಲಿ ಬರುತ್ತಿದ್ದಾಗ ಈ ರಿಬ್ಬನ್ನಗಳನ್ನು ಕೇಳಲು ಆತ ಗಜಕ್ಕೆ ಎಂಟು ಆಣೆ ಹತ್ತು ಆಣೆ ಬೆಲೆಹೇಳಿದನು. ಆಗ ನನ್ನ ಮಗಳು ಈ ಸಾಮಾನುಗಳಿಗೆಲ್ಲ ಇಷ್ಟೊಂದು ಬೆಲೆಯನ್ನು ಏರಿಸುವುದಕ್ಕಾಗೇನಪ್ಪಾ ನೀವೆಲ್ಲರೂ ಅಸೆಂಬ್ಲಿಗೆ ಮೆಂಬರುಗಳಾಗಿ ಹೋಗಿರುವುದು ಎಂದು ಕೇಳಿದಳು. ಬಹುಶಃ ಈ ರೀತಿ ನನ್ನ ಮಗಳು ಕೇಳಿರಬೇಕಾಗಿದ್ದರೆ ಈ ವಿಚಾರವನ್ನು ನಮ್ಮ ಮತ್ತು ನೆರೆ ಮನೆಯ ಹೆಂಗಸರೇ ಆ ಮಗುವಿಗೆ ಹೇಳಿ ಕೊಟ್ಟಿರ ಬೇಕೆಂದು ಕಾಣುತ್ತದೆ. ಈ ಹಿಂದೆ ನಾನು ಖುದ್ದಾಗಿ, ಮಂತ್ರಿಗಳಿಗೂ—ನನಗೂ ಪರಿಚಯ ವಿದ್ದುದರಿಂದ, ಅವರಲ್ಲಿ ಈ ರಿಬ್ಬನ್ ಮೇಲೆ ಹಾಕಿರ ತಕ್ಕ ಟ್ಯಾಕ್ಸ್‌ನ್ನು ವಜಮಾಡ ಬೇಕೆಂದು ಕೇಳಿಕೊಂಡಿ

ದ್ದುದಕ್ಕೆ ಅವರು ಆಗಲಿ ವಜಾಮಾಡುತ್ತೇವೆ ಎಂದು ಭರವಸೆ ಕೊಟ್ಟರು.

ಶ್ರೀ ಟಿ. ಮರಿಯಪ್ಪ.—ಆ ವಿಚಾರವನ್ನು ಎಗ್ಸಾಮಿನ್ ಮಾಡಿ ವಜಾಮಾಡ ಬೇಕಾಗಿರುತ್ತದೆಯೆಂದು ತಿಳಿಸಿದ್ದೆ. ಅಷ್ಟೇ ಹೊರತು ವಜಾಮಾಡಿಯೇ ಬಿಡುತ್ತೇನೆಂದು ಎಲ್ಲಿ ಹೇಳಿದ್ದೆ?

ಶ್ರೀ ಜಿ. ಎಸ್. ಪುಟ್ಟಣ್ಣ.—ಈ ಸಾಮಾನನ್ನು ಸ್ಕೂಲುಗಳಿಗೆ ಹೋಗತಕ್ಕ ಹೆಣ್ಣು ಮಕ್ಕಳು ಹೆಚ್ಚಿಗೆ ಹಾಕಿಕೊಳ್ಳುತ್ತಾರೆ. ಅದುದರಿಂದ ಈ ಬಾಬಿನಲ್ಲಿ ಸ್ವಲ್ಪ ರಿಯಾಯಿತಿ ತೋರಿಸಬೇಕೆಂದು ಕೇಳಿಕೊಂಡಿದ್ದೆನು. ಆದರೆ ಏನೂ ಪ್ರಯೋಜನವಾದಂತೆ ಕಂಡು ಬರಲಿಲ್ಲ. ಸೇಲ್ಸ್ ಟ್ಯಾಕ್ಸ್ ಬಾಬಿನಲ್ಲಿ ಈ ದಿವಸ ವಿಶೇಷವಾಗಿ ಹಣ ಲೇಕೇ ಜಾಗುತ್ತಿರುವುದಕ್ಕೆ ಮುಖ್ಯ ಕಾರಣವೇನೆಂದರೆ ಈ ಇಲಾಖೆಗೆ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳತಕ್ಕ ಕಾಲದಲ್ಲಿ ಈ ಬಾಬಿಗೆ ರಾಯಃಕ್ಕಿಲ್ಲದ ದಂಢ ನಾಲಾಯಖ್ ಜನರನ್ನು ಕೆಲಸಕ್ಕೆ ನೇಮಕಮಾಡಿಕೊಳುತ್ತಿರುವುದೇ ಆಗಿದೆ. ಹಾಗೆ ಸರಿಯಾದ ತಾಖತ್ ಇಲ್ಲದ ಜನಗಳನ್ನು ಕೆಲಸಕ್ಕೆ ನೇಮಿಸಿಕೊಂಡಿರುವುದರಿಂದ ಅವರು ದೊಡ್ಡ ದೊಡ್ಡ ಮುಖಂಡಜನರುಗಳಿಂದ ಬರಬೇಕಾಗಿರತಕ್ಕ ಟ್ಯಾಕ್ಸನ್ನು ವಸೂಲ್ಮಾಡತಕ್ಕ ಶಕ್ತಿಯಿಲ್ಲದೆ ಆ ಲೆಕ್ಕಗಳನ್ನೆಲ್ಲ ಮುಚ್ಚಿಹಾಕುತ್ತಿದ್ದಾರೆ. ಅದರಿಂದ ಸರ್ಕಾರಕ್ಕೆ ಸರಿಯಾಗಿ ವರಮಾನ ಈ ಬಾಬಿನಲ್ಲಿ ಬರುತ್ತಿಲ್ಲ. ನಾನು ಈ ಹಿಂದೆ ಚಿತ್ರದುರ್ಗದಲ್ಲಿ ಈ ಇಲಾಖೆಯಲ್ಲಿದ್ದಾಗ 612 ಕೇಸುಗಳನ್ನು ರಿಜಿಸ್ಟರ್ ಮಾಡಿದ್ದೆ. ಆಗಿದ್ದ ೪॥ ಸೇ॥ ಆಫೀಸರು ಮಾರಪ್ಪನೆಂಬುವವರು ಆ ಕೇಸುಗಳನ್ನೆಲ್ಲ ಲಸ್ಟಿನಿಂದ ವಜಾಮಾಡಿ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳನ್ನು ನಷ್ಟಪಡಿಸಿದರು. ಆದರೆ ಈ ದಿವಸ ಆ ಕೇಸುಗಳ ತೀರ್ಮಾನವೇನಾಯಿತು ಎಂಬುದೇ ತಿಳಿಯದಂತಾಗಿದೆ. ಹೀಗಾಗಿ ಸರ್ಕಾರಕ್ಕೆ ಆ ಕೇಸುಗಳಿಂದ ಬರಬೇಕಾಗಿದ್ದ ಎರಡೂವರೆ ಲಕ್ಷ ರೂಪಾಯಿಗಳು ಲುಕ್ಸಾನಾಗಿದೆ. ಈ ವಿಚಾರ ಎಲ್ಲೆಡೆ ತಡೆದು ನಿಂತಿದೆ ಎಂಬುದನ್ನು ಸರ್ಕಾರದವರು ತಿಳಿಸಲು ಈ ಹೊತ್ತು ಅವರಿಗೆ ಶಕ್ತಿ ಇಲ್ಲ. ಆ ಕೇಸುಗಳೆಲ್ಲ ಕೇವಲ ದೊಡ್ಡ ಮನುಷ್ಯರುಗಳಿಗೆ ಸಂಬಂಧಪಟ್ಟವುಗಳಾಗಿವೆ. ಆದರೆ ನಾನೀಗ ಅವರ ಹೆಸರುಗಳನ್ನೆಲ್ಲಾ ನೋಟ್ಮಾಡಿಕೊಂಡಿದ್ದರೂ ತಿಳಿಸಲು ಇಚ್ಛೆಯಿಲ್ಲ. ಈ ಸರ್ಕಾರಕ್ಕೆ ತಿಳಿಸಿದರೆ ನಾಳೆ ಅದರಿಂದ ನನಗೇ ಒಂದು ಮೂಲವಾಗುತ್ತದೆ. ಆ ದಿವಸ ನಾನು ಅಷ್ಟೆಲ್ಲ ಕಷ್ಟಪಟ್ಟು ಕೆಲಸಮಾಡಿ ಆ ಕೇಸುಗಳನ್ನು ಪತ್ತೆಹಚ್ಚಿ ಸರ್ಕಾರಕ್ಕೆ ವರದಿ ಮಾಡಿದ್ದಕ್ಕೆ ನನಗೆ ದೊರತ ಬಹುಮಾನವೇನು? ನನಗೆ ನಾಮ ಹಚ್ಚಿದರು. ದೊಡ್ಡ ನಗಾರಿ ಹೊಡೆದು ಟ್ರಾನ್ಸ್ಫರ್ಮಾಡಿಸಿಬಿಟ್ಟರು. ಈ ದಿವಸ ಎಲ್ಲಾ ಇಲಾಖೆಯಲ್ಲಿರತಕ್ಕ ಅನೇಕರಿಗೆ ಬೆಳಗಾದರೆ ಅವರಿಗೆ ಇಂತಕ್ಕ ಒಂದೇ ಒಂದು ಕೆಲಸವೇನೆಂದರೆ, ಸಿವಿಲ್ ಲಿಸ್ಟನ್ನು ನೋಡುತ್ತಿರುವುದು. ಎಷ್ಟುಜನವೇಲದ್ದಾರೆ, ಯಾರನ್ನು ಹೇಗೆ ಮನೆಗೆ ಕಳುಹಿಸಬೇಕು, ಎಷ್ಟು ಜನ ಬೇಗ ರಿಚ್ಚೈರ್ ಆಗತಕ್ಕವರಿದ್ದಾರೆ, ಯಾರು ಯಾವತ್ತು ಸಾಯುತ್ತಾರೆ ಎಂಬ ಇತ್ಯಾದಿ ಗುಣಾಕಾರ ಹಾಕುವುದು ಏನಾ ಆ ಅಧಿಕಾರಿಗಳಿಗೆ ಬೇರೆ ಕೆಲಸವೇ ಇಲ್ಲ. ಹಾಗೆ ಬೇಗ ಯಾರೂ ರಿಚ್ಚೈರ್ ಆಗತಕ್ಕವರಿಲ್ಲವೆಂದು ಕಂಡುಬಂದಲ್ಲಿ ಅವರಮೇಲೆ ಏನಾದರೂ ಒಂದು ವಸೀಲಬಾಜಿ ಹಾಕಿ ಅವರನ್ನು ಬೇಗ ರಿಚ್ಚೈರ್ ಮಾಡಿಸಿಬಿಡುವುದು—ಆ ಸ್ಥಾನಕ್ಕೆ ಅವರು ಬರುವುದು. ಬರಿ ಇಂಥ ಅನ್ಯಾಯ, ಅನೀತಿ, ಲಂಚ, ರುಷುವತ್ತುಗಳ ನೀಚ ವರ್ತನೆಗಳ ಮೋಸಕೃತ್ಯಗಳ—ದುರ್ನಡತೆಯಲ್ಲಿರತಕ್ಕವರು ಈ ಬಾಕಿಗಳನ್ನು ವಸೂಲುಮಾಡಲು ಅವರಿಗೆಲ್ಲಿ ಚೈ೦ ಇದೆ? ನಮ್ಮ ಮಾನ್ಯ ಮಂತ್ರಿಗಳಿಗೆ ಈ ವಿಚಾರಗಳೆಲ್ಲ ಚೆನ್ನಾಗಿ ಗೊತ್ತಿದೆ.

ಇನ್ನು ನಾನು ಫಾರೆಸ್ಟ್ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳಬೇಕಾಗಿದೆ. ಅರಣ್ಯ ಶಾಖಾ ಮಂತ್ರಿ ಈ ವಿಚಾರವನ್ನು ಒಂದು ಅರಣ್ಯ ರೋದನ ವೆಂದು ಹೇಳುತ್ತಾರೋ ಏನೋ! ಆದರೆ ಈ ವಿಚಾರದಲ್ಲಲ್ಲ ಮಂತ್ರಿಗಳೊಬ್ಬರೇ ಏನು ಮಾಡುವುದಕ್ಕೂ ಆಗುವುದಿಲ್ಲ. ಇದರಬಗ್ಗೆ ಸರ್ಕಾರಕ್ಕೆ ಹೆಚ್ಚಿಗೆ ಸಾರ್ವಜನಿಕರಿಂದ ಸಹಕಾರ ಬೇಕಾಗಿದೆ. ಈ ವಿಚಾರದಲ್ಲಿ ಪ್ರತಿಯೊಬ್ಬರೂ ಸಹಕರಿಸಿದರೆ ಮಾತ್ರ ಅನುಕೂಲವಾಗುತ್ತದೆ. ಆದರೆ ಈ ಇಲಾಖೆಯಲ್ಲೂ ಸಹ ಯಾರು ಸರಿಯಾಗಿ ಮತ್ತು ಚೆನ್ನಾಗಿ ಕೆಲಸ ಮಾಡುತ್ತಾರೋ ಅಂಥವನಿಗೆ ದೊರೆಯತಕ್ಕ ಪ್ರೋತ್ಸಾಹವೇನೆಂದರೆ—ಅವನಿಗೆ ತಲೆ ಬೋಳಿಸಿ—ನಾಮ ಹಚ್ಚುತ್ತಾರೆ; ಯಾರು ಜನರಿಗೆ ಕಿರುಕುಳ ಕೊಟ್ಟು ಲಂಚ-ರುಷವತ್ತುಗಳನ್ನು ಹೊಡೆಯುತ್ತಿರುತ್ತಾರೋ ಅಂಥವರಿಗೆ ಪ್ರಮೋಷ್ಷ-ಕಷ್ಟರ್ಮೇಷ್ಷ ಇತ್ಯಾದಿಗಳು ದೊರೆಯುತ್ತಿರುತ್ತವೆ. ಆದ್ದರಿಂದ ಈ ಫಾರೆಸ್ಟ್ ಬಾಬಿನಲ್ಲಿ ಈ ದಿವಸ ಅಂಥ ಯಾವ ಆದಾಯಪೂಬರುತ್ತಿಲ್ಲ. ಇನ್ನಸಾಯಿಲ್ ಕಷನರ್ಮೇಷ್ಷ ವಿಚಾರ ತೆಗೆದುಕೊಂಡರೆ ಹೋದ ವರ್ಷ ಗುಂಡಿಗಳೇ ನಿದ್ದವು, ಆ ಗುಂಡಿಗಳನ್ನೇ ಈ ವರ್ಷವೂ ಮತ್ತೆ ತೋರಿಸಿ ಆ ಬಗ್ಗೆ ಬಿಲ್ ಮಾಡಿ ಹಣ ತೆಗೆದುಕೊಂಡಿದ್ದಾರೆ. ಅವರ ಹೆಸರು-ಕುಲ-ಗೋತ್ರ-ಎಲ್ಲ ಗೊತ್ತಿದೆ. ಆದರೂ ಈಗ ನಾನು ಅವರ ಹೆಸರನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಶ್ರೀ ಎಚ್. ಎಸ್. ರುದ್ರಪ್ಪ.—ಮಂತ್ರಿಗಳ ಛೇಂಬರಿನಲ್ಲಿ ಬಂದು ತಾವು ಗುಟ್ಟಾಗಿ ತಿಳಿಸಬಹುದು.

ಶ್ರೀ ಜಿ. ಎಸ್. ಪುಟ್ಟಣ್ಣ.—ಆಗಬಹುದು. ಆದರೆ ನಾಳೆ ತಾವು ಹೋಗಿ ಅವರಿಗೆ ತಿಳಿಸಿಬಿಡುತ್ತೀರಿ. ಆಗ ಅವರು ಬಂದು ನಮ್ಮ ತಲೆ ಹೊಡೆದು ಬಿಡುತ್ತಾರೆ. ಇಷ್ಟೇ ಇದರಿಂದ ಆಗತಕ್ಕ ಪ್ರಯೋಜನ. ಈ ದಿವಸ ಫಾರಂಗಳಲ್ಲಿ ಅನೇಕ ಕಡೆ ಲಕ್ಕಪ್ಪ-ರಂಗಪ್ಪ-ತಿಮ್ಮಪ್ಪ-ನಾಗಪ್ಪ ಎಂದು ಅನೇಕರ ಹೆಸರುಗಳನ್ನು ಬರೆದುಕೊಂಡಿರುತ್ತಾರೆ. ಅವರನ್ನು ರಿಜಿಸ್ಟರೂ ಸಹ ಮಾಡಿಕೊಂಡು ಅಂಥವರಿಗೆ ಸನ್ನದ್ದನ್ನೂ ಕೂಡ ಕೊಟ್ಟಿರುತ್ತಾರೆ. ಆದರೇನು ಪ್ರಯೋಜನ? ಮರಗಳನ್ನು ಬೆಳಸಿದವನಿಗೆ ನಿಜವಾಗಿಯೂ ತಲೆ ಬೋಳಿಸಿಹೋಗಿರುತ್ತದೆ. ಆದರೆ ಅಂಥವರಿಗೆ ದೊರೆಯತಕ್ಕ ಪ್ರತಿಫಲವೇನೆಂದರೆ—ನಾಮ! ಹೀಗೆಲ್ಲ ಮಾಡಿದರೆ ಯಾರುತಾನೆ ದಾಕ್ಷಿಣ್ಯಕ್ಕೆ ಮರಗಳನ್ನು ಬೆಳೆಸುತ್ತಾರೆ ಸ್ವಾಮಿ? ಈ ದಿವಸ ನ್ಯಾಯವಾಗಿ ರಿಜಿಸ್ಟರ್ ಮಾಡಿ, ಸನ್ನದ್ದನ್ನು ಕೊಡಿ, ಆ ಪ್ರಕಾರ ನಿಮಗೆ ಇಂತಿಷ್ಟು ಪ್ರತಿಫಲ ಕೊಡುತ್ತೇವೆಂದು ನಿರ್ದಾಕ್ಷಿಣ್ಯವಾಗಿ ತಿಳಿದರೆ ಈಹೊತ್ತು ಸಾವಿರಾರು ಜನರು ನಾನು ಮುಂದು-ತಾನು ಮುಂದು ಎಂದು ಬರುತ್ತಾರೆ. ಆರೀತಿ ನ್ಯಾಯವಾಗಿ ಮಾಡಬೇಕಾದ್ದನ್ನು ಕೈಬಿಟ್ಟಿದ್ದರಿಂದಲೇ ಈ ದಿವಸ ನಿಮ್ಮ ಆ ವನಮಹೋತ್ಸವದ ಯೋಜನೆ-ಒಣಮಹೋತ್ಸವವಾಗಿದೆ. ತುಮಕೂರು ತಾಲ್ಲೂಕಿನಲ್ಲಿ ಒಂದುಕಡೆ ಇಂಥ ಒಂದು ವನಪ್ರದೇಶ ಎಂದು ಮಾಡಿದ್ದಾರೆ. It is a so called District Forest. ಆದರೆ ಅಲ್ಲಿ ಒಂದಾದರೂ ಗಿಡಮರಗಳಿಲ್ಲ. ಆದರೂ ಅಲ್ಲಿಗೆ ಅಕಸ್ಮಾತ್ತಾಗಿ ಯಾವುದಾದರೂ

(ಶ್ರೀ ಜಿ. ಎಚ್. ಪುಟ್ಟಣ್ಣ)

ದನಕರುಗಳು ಹೋಗಿ ಮುಟ್ಟಿದ್ರೆ ಆ ಮಾಲೀಕರು ಗಳಿಂದ 10-20 ರೂಪಾಯಿಗಳ ದಂಡ ವಸೂಲ್ಮಾಡಿ ಕೊಳ್ಳುತ್ತಿದ್ದಾರೆ. ಸರಕಾರದವರ ಕಾನೂನಿನಲ್ಲಿ ಇಂಥಾದ್ದೆಲ್ಲ ವಜಾ ಆಗಿದ್ದರೂ ಆ ಗ್ರಾಮಗಳ ಜನರ ಕಾನೂನಿನಲ್ಲಿ ಅದಿನ್ನೂ ವಜಾ ಆಗಿಲ್ಲ.

ಇನ್ನು ಗಂಧದಮರಗಳ ಕಳುವಿನಬಗ್ಗೆ ಹೇಳುವು ದಾದರೆ ಈ ದಿವಸ ಕೂಡ ಗಂಧದಮರಗಳನ್ನು ಕಳ್ಳತನದಲ್ಲಿ ಕಡಿದು, ಆ ಮರವನ್ನು ಸಣ್ಣ ಸಣ್ಣ ತುಂಡುಗಳಾಗಿ ಕತ್ತರಿಸಿ, ಅವುಗಳನ್ನು ಸಗಣಿ ಬಗ್ಗುಡದಲ್ಲಿ ಎದ್ದು-ಒಣಗಿಸಿ ಗೋಣಿಚೀಲಗಳಲ್ಲಿ ತುಂಬಿ ಲಾರಿಗಳಮೂಲಕ-ಮೈಸೂರಿನಕಾಯಿ ಚೀಲಗಳ ಕೆಳಗೆ ಹಾಕಿ ಸಾಗಿಸುತ್ತಲೇ ಇದ್ದಾರೆ. ಅಂಥ ಜನರನ್ನು ಹಿಡಿಯಲು ಈ ದಿವಸ ಡಿ.ಸಿ., ಡಿ.ಎಫ್.ಓ. ಇಂಥವರೆಲ್ಲ ಹೆದರಿಬಿಟ್ಟಿದ್ದಾರೆ. ಕಾರಣವೇನೆಂದರೆ ಹಾಗೆ ಗಂಧದಮರಗಳನ್ನು ಕಳುವಿನಲ್ಲಿ ಸಾಗಿಸತಕ್ಕ ವರು ಒಬ್ಬ ದೊಡ ಆಫೀಸರಿಗೆ ಸಂಬಂಧಪಟ್ಟಂಥ ಜನ ವಾಗಿದ್ದಾರೆ ಅವರು. ನಾನು ಹಿಂದೆ ಅಧಿಕಾರ ದಲ್ಲಿದ್ದಾಗ ಇಂಥ ಒಂದು ಕೇಸಿನಬಗ್ಗೆ ಒಬ್ಬರ ಮನೆಯನ್ನು ರೇಡ್‌ಮಾಡಿ ಗಂಧದಚಕ್ಕೆ ತುಂಬಿದ್ದ 25 ಗಾಡಿ ಗಂಧದಮರಗಳನ್ನು ಹಿಡಿದೆ. ಆದರೆ ಅವರು ಒಬ್ಬ ದೊಡ್ಡಮನುಷ್ಯರು! ಆದ್ದರಿಂದ ಅಂಥಾ ಒಂದು ಕೇಸನ್ನು ಹಿಡಿದುದಕ್ಕೆ ನನಗೆ ದೊರೆತ ಶಹಭಾಸ್‌ಗಿರಿ ಏನೆಂದರೆ—ಛೀಮಾರಿ ಆಯಿತು-ಆ ಕೇಸ್ ವಿತ್‌ಡ್ರಾ ಆಯಿತು. ಹೀಗೆ ದೊರೆ ಚೇಸಿದ್ದಾ ನಿಕೇಮಿ ದಂಡಮುರೇದು. .....

ಶ್ರೀ ಎಚ್. ಎಸ್. ರುದ್ರಪ್ಪ.—ನೀವು ಹೇಳು ತ್ತಿರುವುದೆಲ್ಲ ಹಿಂದಿನಮಾತು.

ಶ್ರೀ ಜಿ. ಎಚ್. ಪುಟ್ಟಣ್ಣ.—ಈ ದಿವಸ ಸಹ ಈ ಟಿಂಬರ್ ಅನೇಕ ಕಡೆಗಳಲ್ಲಿ ಸ್ಮಗ್ಲಿಂಗ್ ಆಗುತ್ತಿದೆ. ಶರಾವತಿ ವ್ಯಾಲಿಯಲ್ಲಿ ಬಹಳ ಸ್ಮಗ್ಲಿಂಗ್ ಆಗುತ್ತಿದೆ. ಈಕಡೆಗೆ ಸರ್ಕಾರದವ್ವಲ್ಪ ನಿಗಾ ಇಡಬೇಕು. ಶ್ರದ್ಧೆ ಯಿಂದ ಕೆಲಸಮಾಡತಕ್ಕ ಜನರಿಗೆ ರಿಜಿಸ್ಟರ್ ಮಾಡಿ ಕೊಂಡು ಅವರಿಗೆ ಸನ್ನದ್ದುಕೊಡಿ.

ಇನ್ನು ಸೇಲ್ಸ್‌ಟ್ಯಾಕ್ಸ್ ವಿಚಾರವಾಗಿ ಬಹಳ ಹಣ ಲೀಕೇಜ್ ಆಗುತ್ತಿದೆಯೆಂದು ಅನೇಕ ಸದಸ್ಯರು ಹೇಳಿದ್ದಾರೆ. ಆದರೆ ನಾನಿನ್ನೂ ತಿಳಿಸಬೇಕಾಗಿದ್ದ ವಿಷಯಗಳು ಬಹಳವಾಗಿದ್ದವು. ಅಧ್ಯಕ್ಷರು ಅವಕಾ ಶವಿಲ್ಲವೆಂದು ಪದೇಪದೇ ಒತ್ತಾಯಮಾಡುತ್ತಿದ್ದಾರೆ. ಹಿಂದೆ ನಾನು ಸರ್ವೀಸಿನಲ್ಲಿದ್ದಾಗ "I am your most obedient servant" ಎಂದು ಬರೆಯುತ್ತಿದ್ದೆ. ಈಗಲೂ ಅದೇರೀತಿಯಾಗಿ ಅಧ್ಯಕ್ಷರು ಹೇಳತಕ್ಕ ತೀರ್ಮಾನಕ್ಕೆ ಹೇಳುತ್ತೇನೆ. ಮಾನ್ಯ ವಂತಿಗಳಿಗೆ ಬಾಕಿ ವಿಚಾರಗಳನ್ನು ಪ್ರೈವೇಟಾಗಿ ತಿಳಿಸುತ್ತೇನೆ—ಇನ್ನು ಆಖೈರಾಗಿ ತಿಳಿಸಬೇಕಾದುದು ಏನೆಂದರೆ—

Sri G. ANNA RAO (Afzalpur).—Mr. Speaker Sir, ಈ ಫಾರೆಸ್ಟ್ ವಿಷಯ ವಾಗಿ ಮಾತನಾಡುವಾಗ ನಮ್ಮ ಸೆಟ್ಟರು ಕೆಲವು ರಿಮಾರ್ಕ್ಸ್‌ಗಳನ್ನು ಮಾಡಿದ್ದಾರೆ. ಇದರ ವಿಷಯ ದಲ್ಲಿ ನಮ್ಮ ದೇಶದಲ್ಲಿರತಕ್ಕ ಭೂಮಿ ಎಷ್ಟು,—ಇತರ ದೇಶಗಳಲ್ಲಿರತಕ್ಕ ಭೂಮಿಯೆಷ್ಟು ಎಂಬುದನ್ನು ನಾವು ನೋಡಬೇಕಾಗಿದೆ. ಇತರ ದೇಶಗಳಲ್ಲಿ-ಎಂದರೆ ಯು.ಎಸ್.ಎ., ರಷ್ಯ ಇತ್ಯಾದಿ ದೇಶಗಳ ವಿಚಾರ ತೆಗೆದುಕೊಂಡರೆ ಅಲ್ಲಿ ಬಹಳ ಬದಾವಣೆ ಗಳಾಗಿವೆ. ಅಲ್ಲಿ ಈ ದಿವಸ ಒಟ್ಟು ಭೂಮಿಯ ಮೂರನೇ ಒಂದು ಭಾಗ ಅರಣ್ಯ ಪ್ರದೇಶವಾಗಿದೆ ಎಂದು ಹೇಳುತ್ತಿದ್ದಾರೆ. ನಮ್ಮ ಕೇಂದ್ರ ಸರ್ಕಾರ ದವರ ಪಾಲಿಸಿ ಪ್ರಕಾರ ನಮ್ಮ ಎರಡನೇ ಪಂಚ ವಾರ್ಷಿಕ ಯೋಜನೆಯಲ್ಲಿ 1959ರ ವೇಳೆಗೆ ಈ ಅರಣ್ಯ ಸಂಪತ್ತು ದೇಶದಲ್ಲಿರತಕ್ಕ ಒಟ್ಟು ಭೂಮಿಯ ಶೇಕಡಾ 33 1/3 ರಷ್ಟು ಆಗಬೇಕೆಂದು ಒಂದು ಟಾರ್ ಜಟ್‌ನ್ನು ಇಟ್ಟುಕೊಂಡಿದ್ದಾರೆ. ಈ ಅಂಶವನ್ನು ನಾವು ಎರಡನೇ ದೇಶಗಳಿಗೆ ಹೋಲಿಸಿದರೆ ಅಲ್ಲಿ ಎಷ್ಟು ಭೂಮಿಯಿದೆ—ಅದಕ್ಕೆ ತಕ್ಕಂತೆ ಅಲ್ಲಿರತಕ್ಕ ಅರಣ್ಯ ಸಂಪತ್ತು ಎಷ್ಟೆಂಬುದನ್ನು ಕಾಣಬಹುದು.

ಏಕೆಂದರೆ ನಮ್ಮಲ್ಲಿ 4,72,73,751 ಎಕರೆಗಳ ಭೂಮಿಯಿದ್ದರೂ ಪ್ರತಿಯೊಬ್ಬರಿಗೂ Per-capita 97 ಸೆಂಟ್‌ಗಳಷ್ಟು ಸಾಗುವಳಿಗೆ ಲಾಯಕ್ಕಾದ ಭೂಮಿ ಸಿಕ್ಕುತ್ತದೆ. ಮಿಕ್ಕಿದ್ದೆಲ್ಲವೂ ಪ್ರಾಕೃತಿಕ ವಾಗಿ ನದಿ, ಬೆಟ್ಟ ಈ ರೀತಿಯಾಗಿದ್ದು ಸಾಗುವಳಿಗೆ ನಾಲಾಯಕ್ಕಾದ ಭೂಮಿ. ಆದ್ದರಿಂದ ನಾವು ಅಮೇ ರಿಕಾದಲ್ಲಿ ರಷ್ಯದಲ್ಲಿ ಎಷ್ಟು ಬೆಳೆಸಬಹುದೋ ಅಷ್ಟು ಬೆಳೆಸುವುದಕ್ಕೆ ಸಾಧ್ಯವಿಲ್ಲ. ಇಡೀ ಜಗತ್ತಿನಲ್ಲಿ ಶೇಕಡ 15 ರಷ್ಟು ನಮಗೆ ಸೇರಿದ್ದರೂ, ಭೂ ಪ್ರದೇಶ ವಿರುವುದು ಶೇಕಡ 2.2 ಮಾತ್ರ. ಈ ಪ್ರಕಾರ ಭೂಮಿ ನಮಗೇ ಕಡಮೆಯಿದೆ. ಆದ್ದರಿಂದ ನಮ್ಮಲ್ಲಿ ಕಾಡುಪ್ರದೇಶವನ್ನು ಶೇಕಡಾ 33 1/3 ರಷ್ಟು ಜಾಸ್ತಿ ಮಾಡಬೇಕೆಂಬ ಉದ್ದೇಶವೇನಿದೆ, ಅದನ್ನು ಪೂರ್ತಿ ಗೊಳಿಸಬೇಕಾದರೆ, ನಮ್ಮಲ್ಲಿರುವ Hill Tracts ನಲ್ಲಿ ಬೆಳೆಮಾಡುವುದು ಅವಶ್ಯಕ. ಮೈದಾನ ಪ್ರದೇಶ ದಲ್ಲಾದರೋ ಶೇಕಡಾ 20 ರಷ್ಟು ಹೆಚ್ಚಿಸಿಕೊಂಡರೆ ಸಾಕೆಂದು ಕಾಣುತ್ತದೆ. ಏಕೆಂದರೆ, ಕಾಡಿನ ಮಹತ್ವ ವನ್ನೇನೋ ನಾವು ಅರಿತಿದ್ದೇವೆ. ಕೆಲವು ಪ್ರಸಂಗ ಗಳಲ್ಲಿ ಕಾಡಿನಿಂದ ಹೆಚ್ಚಿಗೆ ರೆವೆನ್ಯೂಕೂಡ ಬರುತ್ತಿದೆ. ಎಕರೆಯೊಂದಕ್ಕೆ ಎಷ್ಟು ಬರುತ್ತದೆಂದು ನೋಡುವು ದಾದರೆ, ಎಕರೆಗೆ ರೂ. 13—15—5 ಬರುತ್ತದೆ. ಅದೇ ಸಾಗುವಳಿಯಾದ ಪ್ರದೇಶದಿಂದ ಎಕರೆಗೆ ಒಂದು ರೂಪಾಯಿ ಮಾತ್ರ ಬರುತ್ತದೆ. ಆದರೂ ನಮಗೆ ರೆವೆನ್ಯೂ ಮಾತ್ರ ಮುಖ್ಯವಲ್ಲ. ಮುಖ್ಯವಾಗಿ ಕಾಡು ಒಂದೇ ಕಡೆಯಲ್ಲಿ ಇರಕೂಡದು. ಶೇಕಡಾ 33 1/3 ರಷ್ಟು ಮೈದಾನದಲ್ಲಿ ಕಾಡು ಬೆಳಸಿದರೆ ಹೆಚ್ಚಿಗೆ concentration ಆಗಬಹುದು. ಈ ದೃಷ್ಟಿ ಯಿಂದ ಮೈದಾನಪ್ರದೇಶಗಳಲ್ಲಿ 20 ರಷ್ಟು ಶೇಕಡಾ ಇರುವಂತೆ ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯ ಈ ಸಂದರ್ಭದಲ್ಲಿ ಹೇಳಬಯ ಸುತ್ತೇನೆ. ಭದ್ರಾವತಿ ಕಬ್ಬಿಣ ಕಾರ್ಖಾನೆಗೆ ಸರ್ಕಾರ ದವರು ಇದ್ದಲಿಗಾಗಿ ಸೌದೆಯನ್ನು ಅರಣ್ಯಶಾಖೆಯಿಂದ ಅಗಾಧಪ್ರಮಾಣದಲ್ಲಿ ತೆಗೆದುಕೊಳ್ಳುತ್ತಿದ್ದಾರೆ. ಇದು ತಪ್ಪು. ಏಕೆಂದರೆ, ಸೌದೆಯೆಲ್ಲವೂ ಯಾವಾಗ ಈ ರೀತಿ ಖರ್ಚಾಗಿಬಿಡುತ್ತದೆಯೋ ಆಗ್ಗೆ ಊರುಗಳಲ್ಲಿ ಸೌದೆಯ ಅಭಾವವಾಗಿ ದನದ ಗೊಬ್ಬರಕ್ಕೆ ಬೇಕಾದ ಸಗಣಿಯೆಲ್ಲಾ ಸೌದೆಯಾಗಿ ಉಪಯೋಗವಾಗುತ್ತಿದೆ. ಅಲ್ಲದೆ, ಮೊರಗಳಿಂದ ದೊರಕಬಹುದಾದ ಹಿಂಡಿ ಗೊಬ್ಬರ ಕೂಡ ಕಡಮೆಯಾಗಿದೆ. ಆದ್ದರಿಂದ ಭದ್ರಾವತಿ ಕಾರ್ಖಾನೆಗೆ ಕೊಡುವ ಸೌದೆಯನ್ನು ನಿಲ್ಲಿಸಬೇಕು. ಇನ್ನು ಮುಂದೆ ಭದ್ರಾವತಿ ಕಾರ್ಖಾನೆಯನ್ನು ವಿದ್ಯುಚ್ಛಕ್ತಿಯಿಂದ ನಡೆಸಿ ಹಳ್ಳಿಯ ಜನರಿಗೆ ಈ ಕಾಡುಗಳ ಉಪಯೋಗ ದೊರೆಯುವಂತೆ ಮಾಡ ಬೇಕೆಂದು ಹೇಳುತ್ತೇನೆ.

ಕಾಡುಗಳನ್ನು ಹೆಚ್ಚು ಬೆಳೆಸುವ ಸಂಬಂಧದಲ್ಲಿ ಒಂದು ಸಲಹೆ ಕೊಡಬಯಸುತ್ತೇನೆ. ನಮ್ಮಕಡೆ ಈಗ ಅರಣ್ಯ ಎಷ್ಟೋ ಅಷ್ಟು ಇದೆ. Ever

green forests ಏನಿದ್ದರೂ ಹಾಸನ, ಚಿಕ್ಕಮಗಳೂರು, ನೌತ್ ಕೆನರಾ ಮುಂತಾದ 100 ಇಂಚು ಮಳೆಬೀಳುವ ಪ್ರದೇಶಗಳಲ್ಲವೆ. ಆದರೆ, ಗುಲಬರ್ಗ, ರಾಯಚೂರು ಮುಂತಾದ ಜಿಲ್ಲೆಗಳಲ್ಲಿ 25—30 ಇಂಚು ಮಾತ್ರ ಮಳೆಯಿದೆ. ಅಲ್ಲಿ ದೊಡ್ಡ ಕಾಡುಗಳನ್ನು ಬೆಳೆಸುವುದೂ ಕಷ್ಟ. ಈಗ ಆ ಪ್ರದೇಶದಲ್ಲಿ ಕಡುವೆ ಕಾಡುಪ್ರದೇಶವಿರುವುದರಿಂದ ಸ್ವಲ್ಪ ಹೆಚ್ಚಿನ ಗಮನ ತೆಗೆದುಕೊಂಡರೆ ವಿಶೇಷವಾಗಿ ಮರಗಳನ್ನು ಬೆಳೆಸುವುದಕ್ಕೆ ಅವಕಾಶವಿದೆ. ಈ ದೃಷ್ಟಿಯಿಂದ ನಾನು ಸೂಚನೆಮಾಡುವುದೇನೆಂದರೆ ಎಲ್ಲೆಲ್ಲಿ Nala Irrigation ವ್ಯವಸ್ಥೆಯಿದೆ ಅಲ್ಲೆಲ್ಲಾ ನಾಲೆಗಳ ಪಕ್ಕದಲ್ಲಿ ಪ್ಲಾಂಟೇಷ್ಗಳನ್ನು ಮಾಡಬೇಕು. ಹಾಗೆಯೇ P.W.D. ರಸ್ತೆಗಳ ಎರಡು ಕಡೆಗಳಲ್ಲೂ ಮರಗಳನ್ನು ಬೆಳೆಸಬೇಕು. ಹಾಗೆಯೇ ರೈಲ್ವೆ ಇರುವ ಕಡೆಯಲ್ಲಿ ಪಕ್ಕಗಳಲ್ಲಿ ಜಾಲ ಮರಗಳನ್ನು ಹಾಕಬೇಕು, ವಿಲೇಜ್ ಫಾರೆಸ್ಟ್‌ನಲ್ಲಿಯೂ ಇದನ್ನು ಬೆಳೆಸುವಂತೆ ಏರ್ಪಾಡುಮಾಡಬೇಕೆಂದು ಹೇಳುತ್ತೇನೆ. ಒಟ್ಟಿನಲ್ಲಿ ಮೈಸೂರು ದೇಶದಲ್ಲಿ ಶೇಕಡಾ 33 1/3 ರಷ್ಟು ಕಾಡುಪ್ರದೇಶವನ್ನು ಬೆಳಸಬೇಕೆಂದರೆ ಗುಡ್ಡಗಾಡು ಪ್ರದೇಶಗಳನ್ನೆಲ್ಲಾ ಉಪಯೋಗಿಸಿಕೊಳ್ಳಬೇಕು. ನಾನು ಮೊದಲೇ ಹೇಳಿದಂತೆ Canal Plantation, Road Side Plantation ಮಾಡಿದಮೇಲೆ ಹಳ್ಳಿಗಳಲ್ಲಿರುವ Grazing landsನಲ್ಲಿ ಮರಗಳನ್ನು ಬೆಳೆಸುವ ಏರ್ಪಾಡುಮಾಡಬೇಕು. ಮುಖ್ಯವಾಗಿ ಅರಣ್ಯಶಾಖೆಯನ್ನು ಒಂದು Commercial Department ಎಂತಲೇ ಪರಿಗಣಿಸಿ, ನಿಮಗೆ ಎಷ್ಟು Per cent ಲಾಭ ಬರಬೇಕೆಂಬದನ್ನು ನೋಡಿಕೊಂಡು ಕೆಲಸ ನಡೆಸಬೇಕೆಂದು ಹೇಳುತ್ತೇನೆ.

'PRODUCE MOST AND DETERIORATE LEAST.' What has the Government done in this direction? Looking to the activities of the Forest Department of the State, there is no comprehensive plan in this direction. Such a comprehensive plan is lacking is regrettable. Such a comprehensive plan will have to be prepared by the Government. The Forest Policy Resolution of the Central Government lays stress on the well-being of the people. Here I may quote from the Policy Resolution. It says: ". . . . establishing tree lands wherever possible, for the amelioration of physical and climatic condition and promoting the general welfare and well-being of the people." Amelioration of the physical and climatic condition and promoting the general well-being of the people are the objectives of the Planning Commission as well as of the Government of India. Looking at the conditions existing in our forest areas, we see that the relations of the people with the Department are far from happy. The people feel that the Forest Department is a sort of impediment in their every day life. There is harassment at every step on account of the rigid and strict rules of the Forest Department. No doubt forest wealth will have to be preserved, but at the same time, adequate amenities and facilities should be given to the people residing in the forest areas, as they are the sons of the forest. They have to depend much on the forest resources. Their main needs are fuel and timber—timber for implements and for building huts and houses. So, in this respect, Sir, I may again quote the policy Resolution. ". . . . Ensuring progressively increasing supplies of grazing, small wood for agricultural implements and in particular of firewood to release cattle dung for manure to step up food production." In this respect, the Forest Department unfortunately—at least the people feel so—is coming in the way of making sufficient provision or making sufficient arrangement for the people in respect of fuel. The people are harassed on this account by the Forest Officers and particularly Forest Guards in the forest areas. The question of fuel is of vital importance

Sri B. R. SUNTHANKAR (Belgaum City).—Mr. Chairman, Sir, we hear very often in this House about the richness of the natural resources and forest wealth that the State of Mysore possesses. The Hon'ble the Chief Minister is never tired of repeating this and indeed he has adverted to this subject of natural wealth of the State *ad nauseum*. I agree no doubt that the State is very rich in forest wealth and all praise to the wealth of the State I know that perhaps our State stands first in respect of the forest wealth in the whole of India. But the question is, Sir, whether we are exploiting the natural resources of the State to the full extent and whether we have harnessed it to the well-being of the people of the State; that is the question. Looking to the record of the Government, I am not in a position to pay any compliments to this Government. Little is being done in that direction and much still remains to be done. The Forest policy resolution of the Government of India lays down definite policies and comprehensive schemes. Their main directive is,

(SRI B. R. SUNTHANKAR)

to the agriculturist, because cattle dung is mostly used by the villager and the people in the forest areas as fuel. This cattle dung is a very valuable manure as well as an easily available manure to our agriculture. But unfortunately, this manure wealth is being wasted as fuel in our country. From that viewpoint, the Forest Department should be more careful and should provide adequate fuel in the form of wood to the villagers in the forest areas. My suggestion is that there should be a balance between the needs of the Forest community, the community residing in the forest areas and the preservation of forests. Such a balance will have to be found out by the Forest Department.

Then about communications. All the forest areas lack in this respect. They lack in the adequate facilities of communications. Most of the forest areas, particularly interior areas, are without any communications or roads. Most of the forest areas are veritable Andamans. Almost half the year, particularly in the rainy season, they are cut off by floods, flooded rivers and rivulets and they are turned into Andamans particularly in the rainy season. The Second Five Year Plan also lays very good emphasis in this direction. Attention also will have to be given to large scale development of forest communications. This is a very important point because forest areas are very backward areas and it is not the fault of the people residing there that they are backward. It is their conditions that are responsible. It is the responsibility of the Government to see that the impediments in the development of their life there should be removed as early as possible. It is the duty of the Government to provide adequate facilities for communications in the forest area. There are no roads joining various parts of the forests as well as there are no approach roads to various villages. So, the Government should make adequate provision for communication. In my District, there are some forest roads belonging to the Forest Department but unfortunately, the Forest Department has handed over these roads for management to the District Local Board and the District Local Board is not taking proper care of all these forest roads and they are not properly maintained. I would suggest therefore that these forest roads belonging to the Forest Department, particularly in Khanapur Taluk of my District, should be taken over by the Forest Department and should be maintained by them well. Then there is another point about the depletion of forests. During the last war, our forests were very much depleted on account of fuel and charcoal and timber that was required for war purposes. Now, there are some schemes found in the Budget regarding afforestation of the forest areas. But the schemes to my mind fall too short of the need and vigorous efforts will have to be made in this respect to improve the depleted forest areas. I may point out my experience in my area and in my taluk and the surrounding areas. The seedlings are planted in the monsoon in the coupes belonging to the Government. But unfortunately, after the seedlings are planted, no care is taken of them. And that is why majority of the seedlings that were planted in the rainy season die. Vana Mahotsava which is celebrated every year in our State has become almost a farce. The Forest Department provides lakhs and lakhs of seedlings for this Vana Mahotsava. But more than 90 per cent of the seedlings that are planted during this Vana Mahotsava die. Care is not taken after they are planted. Plantation of the seedlings has become merely a ceremony. So, more concerted efforts will have to be made by the Forest Department in this respect. Then, about rehabilitation of deserted villages. It is a well-known fact that due to the epidemic disease—malaria—during the last many years, large number of villages in North Kanara and Belgaum have been deserted. It is very necessary to rehabilitate those village people. Special efforts should be made to help people for rehabilitating such villages.

About sales-tax, the retail merchants of Belgaum have made representation and sent several reminders to this Government about rule 26. They have

got a number of difficulties regarding this rule. I only request the Hon'ble Minister to go into these points and see that the retail merchants of that area get relief about rule 26.

*ಶ್ರೀ ಸಿ. ಜೆ ಮುಕ್ಕಣ್ಣಪ್ಪ (ಗುಬ್ಬಿ).—ಸನ್ಮಾನ್ಯ ಸಭಾಧ್ಯಕ್ಷರೇ, ಅರಣ್ಯ ಖಾತೆ ಮತ್ತು ಮಾರಾಟ ತೆರಿಗೆ, ಈ ಎರಡು ಡಿಮ್ಯಾಂಡುಗಳನ್ನು ವಿರೋಧ ಮಾಡುವುದಕ್ಕೆ ಮುಂಚೆ ನಾಲ್ಕು ಮಾತುಗಳನ್ನಾಡ ಬೇಕೆಂದು ನಿಂತಿದ್ದೇನೆ.

ನಾವು ಹೋದ ಸಲ ಅರಣ್ಯ ಖಾತೆಯ ವಿಷಯವಾಗಿ ಅನೇಕ ವಿಷಯಗಳನ್ನು ಹೇಳಿದೆವು. ಅರಣ್ಯ ಸಂಪತ್ತು, ಗೋಸಂಪತ್ತು, ಭೂಸಂಪತ್ತು ಆ ಸಂಪತ್ತು. ಈ ಸಂಪತ್ತು ಬರೀ ಸಂಪತ್ತುಗಳು ದಿಕ್ಷನರಿಯಲ್ಲಿ ಸಮೃದ್ಧಿ ಯಾಗಿವೆ ಎಂದು ಹೇಳುತ್ತೇನೆ. ಅರಣ್ಯ ಸಂಪತ್ತನ್ನು ಅಧಿವೃದ್ಧಿ ಮಾಡುವುದರಿಂದ ದೇಶಕ್ಕೆ ಎಷ್ಟೊರಮಟ್ಟಿಗೆ ಉಪಕಾರವಿದೆ ಎಂದು ಹೋದಸಲ ಹೇಳಿದ್ದೇನೆ. ಒಂದು ವರ್ಷದ ಅವಧಿಯಲ್ಲಿ ಏನನ್ನೂ ಮಾಡಿಲ್ಲ. ಸಿಬ್ಬಂದಿಗೆ ಸಂಬಳಗಳನ್ನು ಮಾತ್ರ ಕೊಟ್ಟಿದ್ದಾರೆ. ಅಧಿಕಾರಿಗಳು ಓಡಾಡುವುದಕ್ಕೆ ವ್ಯಾನ್, ಜೀಪ್, ಎಲ್ಲ ಕೊಟ್ಟಿದ್ದಾರೆ. ಅವರಿಗೆ ಟಿ.ಎ., ಡಿ.ಎ. ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳು ತಲೆ ಅಲ್ಲಾಡಿಸಿದರು ಅವರಿಗೆ ವಿವರಗಳನ್ನು ಬೇಕಾದರೆ ಚೇಂಬರಿನಲ್ಲಿ ಹೇಳುತ್ತೇವೆ. ಇಲ್ಲಿ ಹೇಳಲು ಕಾಲಾವಕಾಶವಿಲ್ಲ. ಇವರು ಹೇಳತಕ್ಕ ಮಾತು ನಡೆಯತಕ್ಕ ನಡೆ ಇವೆರಡಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ನಮ್ಮ ದೇಶದಲ್ಲಿ ಬಹಳ smallest per cent of forest ಇದೆ ಎಂದು ಹೇಳುತ್ತಾರೆ. ಆದರೆ ಆ ಕಡೆಯವರು ಬಂದು ಕೇಳಿದವರಿಗೆ ಜಮೀನು ಕೊಡುತ್ತಾರೆ. ತುಮಕೂರು ತಾಲ್ಲೂಕು ದೇವರಾಯನ ದುರ್ಗದ ಅರಣ್ಯದಲ್ಲಿ 50 ಎಕರೆ ಜಮೀನನ್ನು ಹಾಲು ಸಮೃದ್ಧಿ ಮಾಡತಕ್ಕ ಒಂದು ಹಾಲಿನ ಕೇಂದ್ರಕ್ಕೆ ಕೊಟ್ಟಿದ್ದಾರೆ. ಇದು ಯಾವ ಧರ್ಮ? ಮಂತ್ರಿಗಳಿಗೆ ಇಲ್ಲಿ ಮಾಡುವ ಭಾಷಣ ಇಲ್ಲಿಯೇ ಮರೆತುಹೋಗುತ್ತದೆ ಎಂಬುದು ನನ್ನ ಅಭಿಪ್ರಾಯ. ಅರಣ್ಯವನ್ನು ಬೆಳೆಸಬೇಕು ಎಂದು ಹೇಳುತ್ತಾರೆ. ಇರುವ ಅರಣ್ಯವನ್ನು ಹಾಳು ಮಾಡಿ ದನಸಾಕಿ, ಹಾಲು ಕೇಂದ್ರ ಮಾಡಬೇಕು ಎನ್ನುವುದು ಏಕೆ ಎಂಬುದು ನನಗೆ ಗೊತ್ತಿಲ್ಲ. ಈ ಜಮೀನನ್ನು ಹಾಲಿನ ಕೇಂದ್ರಕ್ಕೆ ಕೊಡುವಾಗ ಮಂತ್ರಿಮಂಡಲ ತೀರ್ಮಾನ ಮಾಡಿದೆ. ಶ್ರೀ ರುದ್ರಪ್ಪನವರು ಇದಕ್ಕೆ ಏಕೆ ತಲೆ ತಗ್ಗಿಸಿದರೋ ಗೊತ್ತಿಲ್ಲ. ವಶೀಲಬಾಜಿಗೆ ಏಕೆ ತಲೆ ಕೊಟ್ಟರೋ ಗೊತ್ತಿಲ್ಲ. ಒಬ್ಬರಿಗೇ ಏಕೆ 50 ಎಕರೆ ಜಮೀನನ್ನು ಕೊಟ್ಟರೆಂಬುದು ಗೊತ್ತಿಲ್ಲ. ಮಂತ್ರಿಗಳೇ ವಶೀಲಬಾಜಿ ಮಾಡಿದರೆ ಏನು ಮಾಡುವುದು? ಈಗ ಹಾಲಿನ ಕೇಂದ್ರಕ್ಕೆಂದು ತಮಗೆ ಬೇಕಾದವರಿಗೆ ಕೊಟ್ಟರುವ ಜಮೀನನ್ನು ವಜಾ ಮಾಡ ಬೇಕು. Devarayanadurga forest is a very thick forest. ಈ 50 ಎಕರೆ ಜಮೀನನ್ನು ವಾಪಸು ಪಡೆಯುವುದಕ್ಕೆ ಮಂತ್ರಿಗಳು ಮನಸ್ಸು ಮಾಡಬೇಕು. ಇಲ್ಲದೇಹೋದರೆ ನಮ್ಮ ರೋದನವೆಲ್ಲ ಅರಣ್ಯ ರೋದನವಾಗುತ್ತದೆ. ಮಂತ್ರಿಗಳು ಹಾಲಿನ ಕೇಂದ್ರಕ್ಕೋಸ್ಕರ ಕೊಟ್ಟಿದ್ದೇವೆಂದು ಹೇಳಬಹುದು. 50 ಎಕರೆ ಜಮೀನನ್ನು ಹಾಲಿನ ಕೇಂದ್ರಕ್ಕೋಸ್ಕರ ಕೊಟ್ಟಿರುವಾಗ ತುಮಕೂರಿನಲ್ಲಿರತಕ್ಕ ಎಷ್ಟು ಜನರಿಗೆ ಹಾಲನ್ನು ಇವರು ಒದಗಿಸುತ್ತಿದ್ದಾರೆಂದು ಮಾನ್ಯ ಮಂತ್ರಿಗಳಾದ ರುದ್ರಪ್ಪನವರನ್ನು ಬಹಳ ವಿನಯ ದಿಂದ ಕೇಳುತ್ತೇನೆ.

ದೇಶದಲ್ಲಿ ಆಯುರ್ವೇದವು ಹೆಚ್ಚಾಗಿ ಬಳಕೆಗೆ ಬರ ಬೇಕೆಂದು ಪ್ರಯತ್ನಗಳಿವೆ. ಇದಕ್ಕಾಗಿ ಬೆಂಗಳೂರಿ ನಲ್ಲಿ ಧರ್ಮ ಪ್ರಕಾಶ ಪೆಂಕಾಜಿರಾಯರು ಕಟ್ಟಿಸಿರುವ ಒಂದು ಆಯುರ್ವೇದ ಆಸ್ಪತ್ರೆಯೂ ಇದೆ. ಇಲ್ಲಿ ಗಿಡ ಮೂಲಿಕೆಗಳನ್ನು ಉಪಯೋಗಿಸುತ್ತಾರೆ. ಅಲೋಪಥಿ ಔಷಧಿಗಳಿಗೆ ಅಷ್ಟೊಂದು ಬೆಲೆ ಕೊಡಬಾರದು, ಆಯುರ್ವೇದ ಔಷಧಿಗಳಿಗೆ ಹೆಚ್ಚು ಪ್ರೋತ್ಸಾಹ ಕೊಟ್ಟು ಅದನ್ನು ಮುಂದೆ ತರಬೇಕು. ಜನರು ಹಳ್ಳಿ ಯಲ್ಲಿರತಕ್ಕ ಒಬ್ಬ ಸಾಮಾನ್ಯ ಆಳಲೆಕಾಯಿ ಪಂಡಿತರ ಹತ್ತಿರ ಹೋಗುತ್ತಾರೆ. ಅಲೋಪಥಿ ಔಷಧಿ temporary relief ಕೊಡುತ್ತದೆ ಎಂದು ಆಯುರ್ವೇದಕ್ಕೆ ಗಮನ ಕೊಡುತ್ತಿದ್ದಾರೆ. ಮೆಡಿಸಿನಲ್ ಹರ್ಬ್ಸ್ ಹೆಚ್ಚಾಗಿ ಬೆಳೆಸಿ ಉಪಯೋಗಿಸುವುದರಿಂದ ಜನಗಳ ಕಾಯಿಲೆಗಳು ದೂರವಾಗುತ್ತದೆ. ಇದಕ್ಕಾಗಿ medicinal herbs ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ.

ನಮ್ಮಲ್ಲಿ ಐದು ತರಹ ಅರಣ್ಯಗಳು ಸರಿವೆ ಎಂದು ಶ್ರೀ ಅಣ್ಣಾರಾಯರು ಸ್ವಲ್ಪಮಟ್ಟಿಗೆ ಹೇಳಿದರು. ಈ ಐದು ತರಹ ಅರಣ್ಯಗಳು evergreen, dissiduous, dry, hill, tide up ಎಂದು ಇದೆ. ಈ ಐದು ತರಹ ಕಾಡನ್ನು ಸರಿಯಾದ ರೀತಿಯಲ್ಲಿಟ್ಟು ಕೊಂಡಿಲ್ಲ. ಇದರ ಬಗ್ಗೆ ಅವರು ಎಷ್ಟು ಗಮನವನ್ನು ಕೊಡಬೇಕೋ ಅಷ್ಟನ್ನು ಕೊಟ್ಟಿಲ್ಲವೆಂದು ಹೇಳುತ್ತೇನೆ.

1952ರಲ್ಲಿ Forest policy resolution ಇಂಡಿಯಾ ಸರ್ಕಾರದವರು ಮಾಡಿದರು. ಇದನ್ನು implement ಮಾಡಿದ್ದಾರೆಯೇ, ಹಾಗೆ ಮಾಡಿದ್ದರೆ ಎಷ್ಟು ದೂರ implement ಮಾಡಿದ್ದಾರೆ ಎಂಬು ದನ್ನೆಲ್ಲ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳುತ್ತಾರೆಂದು ನಂಬಿದ್ದೇನೆ. ಈ ನಿರ್ಣಯ ಏನಾದರೂ implement ಆಗಿಲ್ಲದೆ ಹೋದರೆ ಅದನ್ನು implement ಮಾಡುವುದಕ್ಕೆ ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

1950ರಲ್ಲಿ Central Board of Forests ಎಂದು ಇಂಡಿಯಾ ಸರ್ಕಾರದವರು ಮಾಡಿದರು. ಅದೇ ವೇಳೆಯಲ್ಲಿ ಮೈಸೂರು ಸಂಸ್ಥಾನದಲ್ಲಿ ಅರಣ್ಯ ಸಂಪತ್ತನ್ನು ಬೆಳಸಬೇಕು ಎಂದು ಹೇಳಿದರು. ಮೈಸೂರು ಸಂಸ್ಥಾನದಲ್ಲಿಯೂ Central Board of Forests ಪಾದರಿಯಲ್ಲಿ ಒಂದು ಬೋರ್ಡನ್ನು ರಚನೆ ಮಾಡಬೇಕು. ತನ್ಮೂಲಕ ಫಾರೆಸ್ಟ್ ಬಗ್ಗೆ ಕೊಡತಕ್ಕ ಬುದ್ಧಿಪಾದವನ್ನು ಗಮನಕ್ಕೆ ತೆಗೆದು ಕೊಂಡು ಅರಣ್ಯವನ್ನು ಅಭಿವೃದ್ಧಿ ಪಡಿಸಲು ಪ್ರಯತ್ನ ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ. ಅರಣ್ಯ ಸಂಪತ್ತು ಅಭಿವೃದ್ಧಿಯಾಗುವುದರಿಂದ ಗೋ ಸಂಪತ್ತು ಜಾಸ್ತಿಯಾಗುತ್ತದೆ. ನಮ್ಮ ದೇಶದಲ್ಲಿ ಇವೊತ್ತಿನ ದಿವಸ ಅರಣ್ಯ ಸಂಪತ್ತು ಸರಿಯಾಗಿಲ್ಲದೆ ಇರುವುದರಿಂದ ನೇಗಿಲಿಗೆ ಕಟ್ಟತಕ್ಕ ಒಂದು ಜೊತೆ ಎತ್ತುಗಳಿಗೆ 800 ರಿಂದ 1,500 ರೂಪಾಯಿಗಳ ಬೆಲೆಯಾಗುತ್ತದೆ. ದನಗಳು ಮೇಯಲು ಹುಲ್ಲು ಇಲ್ಲ, ಕಟ್ಟಲು ಜಾಗವಿಲ್ಲ. ಅದಕ್ಕೋಸ್ಕರವಾಗಿ ಅರಣ್ಯ ಸಂಪತ್ತು ಮತ್ತು ಗೋಸಂಪತ್ತು ಹೆಚ್ಚಾಗಬೇಕು. ಯಾವ ದೇಶದಲ್ಲಿ ಕ್ಷೀರಸಾಗರ ವಿತ್ತೋ ಯಾವ ದೇಶದಲ್ಲಿ ಕಾಮಧೇನು ಇತ್ತು ಎಂದು ಹೇಳುತ್ತಿದ್ದರೋ ಅಂಥ ಕಾಮಧೇನು ಕಣ್ಮರೆಯಾಗಿದೆ ಮತ್ತು ಕ್ಷೀರಸಾಗರ ಬತ್ತಿಹೋಗಿದೆ. ಅದಕ್ಕೋಸ್ಕರ ವಾಗಿ ಅರಣ್ಯ ಸಂಪತ್ತು ಅಭಿವೃದ್ಧಿಯಾಗಬೇಕು, ಅದಾದ ಹೊರತು ಗೋಸಂಪತ್ತು ಅಭಿವೃದ್ಧಿಯಾಗುವುದಿಲ್ಲ, ಗೋಸಂಪತ್ತು ಅಧಿವೃದ್ಧಿಯಾದ ಹೊರತು ವ್ಯವಸಾಯ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ನ್ಸರಿಯಾಗಿ ನಡೆಯುವುದಿಲ್ಲ, ಅದಕ್ಕೆ ಧಕ್ಕೆ ಬರುತ್ತದೆ. ಮತ್ತೆ ಪರದೇಶಗಳಿಗೆ ನಾವು ಕೈ ಒಡ್ಡಬೇಕಾಗುತ್ತದೆ. ಅರಣ್ಯ ಸಂಪತ್ತನ್ನು ಕಾಪಾಡತಕ್ಕದ್ದು, ಅದನ್ನು ಅಭಿವೃದ್ಧಿಪಡಿಸತಕ್ಕದ್ದು ಸರ್ಕಾರದ ಕರ್ತವ್ಯ. ಸರ್ಕಾರದವರು ಈಗಲಾದರೂ ಮನಸ್ಸು ಮಾಡಿ ಅರಣ್ಯ ಸಂಪತ್ತನ್ನು ಹೆಚ್ಚಿಸಬೇಕೆಂದು ಹೇಳುತ್ತೇನೆ.

1953ರಲ್ಲಿ conservation of soil survey ಮಾಡಿದರು. ಇದಕ್ಕೆ Assistant Director of Agriculture ಒಬ್ಬರನ್ನು ಕಳುಹಿಸಿದರು. ಅವರು ಹೇಗೆ ಮಾಡುತ್ತಾರೆಂದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಎಚ್. ಎಸ್. ರುದ್ರಪ್ಪ.—ಸರ್ವೆ ಕೆಲಸ ನಡೆಯುತ್ತಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದು ಬರೀ ನಾಟಕ. ಕೃಷ್ಣಗಾರುಡಿನಾಟಕವಾಗಿದೆ. ಅದು ಬೇಡ, ದೇಶದ ಉನ್ನತಿಗೋಸ್ಕರ, ಅಭಿವೃದ್ಧಿಗೋಸ್ಕರ, ಕೆಲಸ ಮಾಡಬೇಕು. ನಾವು ಆಹಾರಕ್ಕೋಸ್ಕರ ಕಷ್ಟಪಡುತ್ತಿದ್ದೇವೆ. ಇದನ್ನು ಸರಿಯಾದ ರೀತಿಯಲ್ಲಿ ಶೀಘ್ರವಾಗಿ ಸರಿಪಡಿಸುವುದಕ್ಕೆ ಪ್ರಯತ್ನ ಮಾಡಬೇಕು. Conservation of soil survey 1953ರಲ್ಲಿ ಇಂಡಿಯಾ ಸರ್ಕಾರದವರು ಮಾಡಿದ್ದಾರೆ. ಅವರು ಏನು ತೀರ್ಮಾನ ಮಾಡಿದ್ದಾರೆಯೋ ಅದೇ ರೀತಿ ತಾವೂ ಜಾರಿಗೆ ತರಬೇಕೆಂದು ನಾನು ತಮ್ಮಲ್ಲಿ ಬಹಳ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ವನಮಹೋತ್ಸವವೆನ್ನುವುದು ಒಣಮಹೋತ್ಸವವಾಗಿದೆ. ವನಮಹೋತ್ಸವ ಮಾಡಲು ಕಳುಹಿಸುವ ಗಿಡಗಳಲ್ಲಿ ನೂರಕ್ಕೆ 99.9 ಸರಿಯಾಗಿ ಬೆಳೆಯುವುದಿಲ್ಲ. ಆದ್ದರಿಂದ ಒಳ್ಳೆಯ ಗಿಡಗಳನ್ನು ಕೊಡಿ, ಒಳ್ಳೆಯ ಗಿಡಗಳನ್ನು ಕೊಟ್ಟರೆ ಗಿಡಗಳು ಬೆಳೆಯುತ್ತವೆ. ಇದರಿಂದ ಅರಣ್ಯ ಸಂಪತ್ತನ್ನು ಜಾಸ್ತಿ ಮಾಡಬಹುದೇ ಹೊರತು ಕಾಡಿನಲ್ಲಿರತಕ್ಕ ಗಿಡವನ್ನು ತುಮಕೂರು ಜಿಲ್ಲೆಯ ಯಾವುದೋ ಹಳ್ಳಿಗೆ ಕಳುಹಿಸಿ, ಅಲ್ಲಿಗೆ ಮಂತ್ರಿಗಳನ್ನು ಕರೆಯಿಸಿ ಹಾರಹಾಕಿದರೆ ಗಿಡವನ್ನು ನೆಟ್ಟರೆ ಅದು ವನಮಹೋತ್ಸವವಾಗುವುದಿಲ್ಲ. ಸರಿಯಾದ ಗಿಡವನ್ನು ಕೊಡಬೇಕು. ಹೀಗೆ ಮಾಡುವುದರಿಂದ ಜನಗಳ ಮನಸ್ಸಿನಲ್ಲಿ ಪರಿಣಾಮವಾಗುತ್ತದೆ ಮತ್ತು ಫಾರೆಸ್ಟ್ ಬೆಳೆಸತಕ್ಕದ್ದು ತನ್ನ ಕೆಲಸವೆಂದು ಅವರು ಭಾವಿಸುತ್ತಾರೆ.

ಮಾನ್ಯ ಹಣಕಾಸಿನ ಮಂತ್ರಿಗಳಾದ ಮರಿಯಪ್ಪನವರಲ್ಲಿ ಒಂದು ವಿಷಯವನ್ನು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ. ಮಂಗಳಸೂತ್ರಕ್ಕೆ ವಿನಾಯಿತಿ ಕೊಡಬೇಕು ಎಂದು ನಾವು ಹಿಂದೆಯೇ ಹೇಳಿದ್ದೆವು. ಆಕಡೆಯಿಂದ ಮಹಿಳಾ ಸದಸ್ಯರು ಹೇಳಿದರು, ಹೆಣ್ಣು ಮಕ್ಕಳು ಜಡೆಗೆ ಹಾಕಿಕೊಳ್ಳತಕ್ಕ ರಿಬ್ಬನ್‌ಗಳಿಗೆ ಟ್ಯಾಕ್ಸ್ ಕಡಮೆ ಮಾಡಬೇಕು ಎಂದು. ಕಾಂಗ್ರೆಸ್ ಪಕ್ಷದವರಿಂದಲೇ ಈ ಸಲಹೆ ಬಂದಿದೆ—ಶ್ರೀಮತಿ ಸುಶೀಲಾಬಾಯಿ ಪಾರವರು ಸಹ ಬಹಳ ಕಷ್ಟ ಪಟ್ಟು ಹೇಳಿದರು.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್‌ಪಾ.—ಅದರ ಮೇಲೆ ತೆರಿಗೆಯನ್ನು ಹೆಚ್ಚು ಮಾಡಿ ಹೆಣ್ಣು ಮಕ್ಕಳ ಗೌರವವನ್ನು ಕಾಪಾಡಿ ಎಂದು ಹೇಳಿದೆ.

Sri C. J. MUCKANNAPPA.—I have failed, Sir. ಕೋಳಿಮೊಟ್ಟೆ ಮೇಲೆ ಸೇಲ್ಸ್ ಟ್ಯಾಕ್ಸ್ ಹಾಕಿದ್ದಾರೆ. ಅದು ನಾನೂ, ಶ್ರೀ ಮರಿಯಪ್ಪನವರೂ, ಮತ್ತು ಇತರರೂ ಸೇವಿಸುವ ವಸ್ತು. ನೀಲಗಿರಿ ಡೈರಿ ಫಾರಂನಿಂದ ತರಿಸಿದ್ದಕ್ಕೆ ನನ್ನ ಹತ್ತಿರ ಬಿಲ್‌ಗಳಿವೆ. ಬೇಕಾದರೆ ತೋರಿಸುತ್ತೇನೆ. ಇದರ ಮೇಲಿನ ತೆರಿಗೆಯನ್ನು ವಜಾ ಮಾಡಬೇಕು.

ಕೊನೆಯ ಗಳಿಗೆಯಲ್ಲಾದರೂ ಇಷ್ಟು ಹೊತ್ತು ಮಾತನಾಡುವುದಕ್ಕೆ ಅಪ್ಪಣೆಯನ್ನು ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸುತ್ತೇನೆ.

Sri T. MARIAPPA.—Mr. Speaker, Sir, I am indeed grateful to the Hon'ble Members for having suggested very constructive ideas regarding the Sales Tax Department and the administration of the Sales Tax law. I want to divide the criticisms and the suggestions under five heads. I will first take up the suggestions regarding the set-up of the department. Most experienced members of this House have suggested that we must have a comprehensive set-up for this department because this is going to be a most revenue yielding department of the Government of Mysore. I readily concede that point. In fact in the present Budget I have given a separate head for the sales tax collections. Therefore you will see the importance that has been attached to the revenue under "Sales Tax". I expect nearly 588 lakhs this year and provided I plug all the loopholes, it need not be a surprise to this House, even if we collect more. From that point of view I am indebted to the House for the very valuable suggestions made in regard to the set-up of the Sales Tax Department.

Sri C. K. RAJAIAH SETTY.—Have you provided funds for awarding prizes?

Sri T. MARIAPPA.—In fact I must be pardoned, if I may say so, that we have almost anticipated the suggestions made in this behalf. The recent reorganization of the department is almost on the lines suggested by the Hon'ble Members. I am indeed grateful to Sri Rajaiah Setty in this particular matter because he is an experienced merchant . . . .

Sri C. K. RAJAIAH SETTY.—Not a merchant, mine owner.

Sri T. MARIAPPA.—Yes, not a merchant but a mine owner. Perhaps he must be aware how leakage occurs and at what point it occurs. I must also be thankful to Sri Puttanna for his suggestions because he was in the department and he knows where the shoe pinches. Therefore the new set-up of

the department is almost very comprehensive. We have made provision for Inspectorate. I do not want to call them as C.I.D.s because as Sri Rajaiah Setty said people must go incognito, collect information, check it up and pass it on to the respective officers. That is what exactly we have done. I say they must be alert. I was in charge of the Home Affairs and also in charge of S. B. and CID.—on the same analogy these are very respectable people.

Sri V. SRINIVAS SHETTY.—Are not policemen respectable ?

Sri T. MARIAPPA.—I call these people as Inspectorate.

Sri J. B. MALLARADHYA.—Civil Intelligence Department.

Sri T. MARIAPPA.—These people will be detailed to railway good sheds, railway yards and they will check up railway yards, mandies, ookad etc. Another extra precaution we have taken born out of sheer experience and also on the valuable suggestions made at the time of the discussion of the Bill; we not only check up ookads, but also lorries and carts. There is another safeguard we have envisaged in the rule, namely, that any person who carries the goods must carry a duplicate of the bill, a copy of which will be with the Inspectorate Therefore a seller is under an obligation to issue three copies, one to the buyer who transports it with his goods in a regular carrier, namely, bus or a lorry or a cart and that copy will be with the Inspector who will go to the ookad or some other point where he could check up. Therefore evasion is minimised to the lowest extent possible. Therefore all these suggestions have taken a concrete shape and the department has been organised on that model. We have also men who will be posted to the Regulated Markets and also to the main mandies and shandies. Therefore wherever it is likely that these people will go and purchase or sell there they are able to collect information and check it up and even have recourse to checking carts. Sri Rajaiah Setty gave me a very correct example as to how payment of tax is evaded. A lorry owner goes from Mangalore twice and brings tiles, takes the money and goes away because there is no provision to check it, as even casual traders, or hawkers. Therefore all these points were before us when we re-organised the department. If Hon'ble Members do not think that it is too much to assume, we can say that the report of Dr. Loganathan of Madras has been anticipated. We have made every provision as far as humanly possible and we are trying to plug all loopholes and we are also making provision for—I do not want to call it as spying—checking carts, information gathering and again checking. We will call it checking and rechecking information so that on that account members may rest assured that everything humanly possible is being done to see that leakage is minimised, that evasion also is minimised and that people do not escape payment of sales tax.

The other members also have said that there is leakage and that there is omission and commission on the part of officers who levy sales tax. It is common knowledge that in a department like this where the temptation is almost constant and perennial—if I could call it—it would be very difficult. We cannot have angels, we can have only men. But I can assure you that there are men of integrity. Of course there are lapses here and there and we will take immediate steps to see that these people are corrected. If they are negligent we will send them home. Therefore we are fully aware of the leakages, we are fully aware of the omissions and commissions and therefore we have also taken precautions to see that they are minimised to the maximum extent possible. I will give one instance; in the old Mysore State, an Assistant Sales Tax Officer was completely independent of the Sales Tax Officer. Therefore particularly in marginal cases there used to be rivalry. One used to deflate and the other inflate. I have prevented that by making the Assistant Sales-tax Officers subordinate to the Sales-tax Officers. In the new set-up they are called A.C.T.O. and C. T. O.

The A.C.T.O. has got independen jurisdiction up to Rs. 40,000. I m assure the House that it is b

(SRI T. MARIAPPA)

experience we have done this. I value the criticism of Sri Mallaradhya but I must say that they should have independent taxational powers. But the A.C.T.O. must be subordinate to the C.T.O. In this manner we have taken extra precautions. There is another thing. There is the Deputy Commissioner and he has got an Inspector of a higher status. The Inspector will be checking the work done by A.C.T.O.'s and C.T.O.'s and he will be watching what has occurred.

AN HON'BLE MEMBER.—What is his grade ?

Sri T. MARIAPPA.—His grade is about Rs. 800. I do not remember now. The Inspector will be receiving information against the A.C.T.O. and the C.T.O. and he will be passing on the same to the Deputy Commissioner. There will be constant vigilance and there will be no room for either over-estimation or under-estimation. This has been safeguarded.

Now, Sir, there is another suggestion, not a suggestion, but a criticism that influential persons escape payment of sales-tax and that they take inordinately long time to pay taxes and that sometimes the arrears pertaining to influential persons are written off. Under all these three heads, I want to deal with this case.

Sri V. SRINIVAS SHETTY.—What is the grade of Inspectors ?

Sri T. MARIAPPA.—Their scale of pay is 550-850. It is sufficiently high. They are also eligible for promotion as Deputy Commissioners and they are fairly men of integrity.

Sri V. SRINIVAS SHETTY.—Are these Inspectors allotted one for each district ?

Sri T. MARIAPPA.—The Sales Tax Officers will have inspecting staff. The Deputy Commissioner also will have an Inspector. We have got four Deputy Commissioners for four divisions. The Inspectors will be under the Deputy Commissioners. I do not exactly remember the number. I want to assure the House that however influential a person may be, if he is taxable, he must abide by the laws of taxation. I have not come across any one case where we have written off unless on very strong grounds. After I took charge of this Department, there were hardly one or two cases where we have written off arrears. In the cases we have written off we have taken all precautions. We have got reports from all officers, local officers and revenue officers as distinct from sales-tax officers, to the effect that there was no chance of recovery. Only under such circumstances we have written off. Only one or two cases have come to my notice.

Sri G. N. PUTTANNA.—Petrol Tax ?

Sri T. MARIAPPA.—With regard to petrol tax so much is said. I admit that in the old State of Mysore, there were arrears. That was because unfortunately we amended the Act and took away the power of launching prosecutions. That was mostly responsible for the accumulation of arrears. Sir, after the Act was amended, the House was agreeable to invest the Government with powers. We have launched prosecutions against so many defaulters. Now we have been able to collect a good deal. Last time I gave figures with regard to collection of arrears and it bears repetition. I want to give the steps or the action we have taken for the collection of arrears. So far as the arrears are concerned, the total arrears from 1st November 1956 to 31st December 1957 from all the four divisions amounted to Rs. 97,91,355. Collections were Rs. 34,07,339, and the balance of arrears as on 31st December 1957 was Rs. 63,84,016. Kindly bear in mind that these arrears represent figures relating to all the areas, in particular of Hyderabad also. Now the current demand from 1st April 1957 to 31st December 1957 is Rs. 1,79,57,343. Sri Mallaradhya was particularly asking that the D.C.B. statements should be given. I have got the details here. The collection has been Rs. 1,43,98,469 and the balance still to be collected is Rs. 35,58,875, *i.e.*, so far as the current demand is concerned. Regarding the collections of arrears, we are a bit slack, I admit. But I want to

assure the House that even with regard to arrears we are taking all possible steps.

Sri B. RACHIAH.—Will you please give us details for each division?

Sri T. MARIAPPA.—Regarding prosecutions launched and action taken, I will give you. Prosecutions were launched to the extent of Rs. 2,37,803. I gave the details last time and I have not got the details now. Recovery certificates issued to the Revenue Department was to the extent of 47 lakhs. I am giving the figures to show that the department is not lax. On the other hand, it is very active and that it is scrutinising. To the extent of 47 lakhs we have issued certificates to the Revenue Department. Thirteen lakhs are held up under court orders. In this case we are helpless. Bills pending—Rs. 2,32,000 and odd. Departmental action is taken in regard to Rs. 38,000 and odd. We have secured convictions in 4,151 cases. Therefore the department is alert and it is trying to take all possible action. I can assure we will show better results by the time the House meets next.

Sri G. N. PUTTANNA.—What about petrol arrears?

Sri T. MARIAPPA.—I have not got the figures. Even there we are trying to recover as much as possible. There are few defaulters after 1st October 1957. I have made the law so fool proof that we need not go to the dealers now. We recover the sales-tax at the first point from the companies themselves. Therefore from 1st October 1957, we have not left a single pie to accumulate with the dealers. We are taking all possible steps. We are not worried about the dealers at all from 1st October 1957.

Sri A. BHEEMAPPA NAIK (Challakere).—What about the poor booksellers, Sir?

Sri T. MARIAPPA.—I am answering under definite heads.

I have answered with regard to leakage and commissions and omissions and I hope the House is convinced of the steps taken by the Government with regard to the influence which influential persons are bringing to bear on the Department, with regard to the arrears that have accumulated, with regard to the reduction of arrears and with regard to leakage and commissions and omissions.

Some suggestions have been made that the sales tax should be removed on certain items. Some of the Hon'ble Members have urged for the removal of sales tax on books, fruits, garlic, onions, ribbon, tapes, flowers, ready made cloth, cocoanut oil and eggs. With great respect, with regard to the requests made, I want the House to kindly bear in mind that this is the only Department which brings in some revenue. We are committed to the development plans. The Government of India have definitely stated that we must maximise our internal resources and that then only we would be eligible for the Government of India's assistance. While making available to us the assistance of Rs. 13 crores, they have laid down a condition that we must give them Rs. 10 crores of internal resources. Therefore, I will leave it to the House. If you want development plans to be put through, if you want irrigation works to be taken up, if you want bridges to be constructed and roads to be made, if you want schools to be started, then kindly do not voice any demand which will curtail our internal resources. But there are certain reasonable demands which the Government will certainly examine. Therefore, Government would like to examine each individual case on merit. Kindly give me that much of discretion. I want to examine each case and I want to know how much we are losing and whether we can afford to lose and then we will possibly tell you in what direction we can move. I am very careful in using these expressions 'In what direction we can move?' Therefore, I can assure this House that we are one with them with regard to the removal of sales tax on books, but what types of books can be exempted merits some little consideration. We attach the greatest weight to the suggestions made in this House. You are, after all, the representatives of the

(SRI T. MARIAPPA)

people and you are entitled to be heard.

Sri B. BASAVALINGAPPA (Bangalore South).—The neighbouring States have exempted them.

Sri T. MARIAPPA.—Not all the neighbouring States have exempted them. A few of them have exempted. As I said, we are one with you with regard to the removal of sales tax on books. Some of the States have levied sales tax on certain articles which we have exempted. Do you mean to say that they will remove the sales tax on those articles? Each case has to be considered on merit. So far as books are concerned, we want to remove sales tax on certain categories of books. The whole thing is under examination. I can assure the House that in the next amending Bill this will find a place.

With regard to fruits and flowers, there are two arguments advanced. Some say that they are perishable articles and therefore it is much better that sales tax on them is removed. Some say that only rich people eat fruits and use flowers and therefore there is no need to exempt them from sales tax. We will have this matter examined. Whether sales tax on books should be removed wholesale or whether single point tax should be levied or whether only one per cent single point tax should bel evied—all these factors have to be weighed. Then I will be able to tell the House next time when the amending Bill is brought before the House as to what we propose to do. In the meantime, I may assure the House that all these things will certainly be considered on their merits.

As the House is aware, 2 per cent. multi-point tax is levied on onions and jaggery. We have taken a long range view. Requests are made not only from the Bombay border areas but local requests are also made. As the House is aware, we have reduced the tax to 1 per cent multi-point because it is not possible to locate readily the source of manufacture Otherwise, we could have levied tax only at one point.

Sri B. G. KHOT (Sadalga).—What about giving exemption in the border area?

Sri T. MARIAPPA.—As the Hon'ble Member is aware, it would be very difficult to remove sales tax in a particular area. There will be protests or similar requests from other areas. Therefore, the best way is to make it less irksome. That is why instead of 2 per cent we have made it 1 per cent multi-point. Perhaps, that may not satisfy the people in Bombay Area.

Sri B. G. KHOT.—The Government is losing more income than it is getting.

Sri T. MARIAPPA.—We are not losing at all; it is the commission agents who are losing. It is said that we are losing, but that is not correct. The commission agents lose the trade. We do not want diversion of trade. We have got this matter examined. I am an old bird at it and so you may leave this matter to be dealt with properly by me.

Sri B. D. JATTI (Jamkhandi).—By increasing the sales tax from 1 per cent to 2 per cent, the trade will be diverted.

Sri T. MARIAPPA.—The Government will not be able to stop diversion in places where unfortunately political colour is given to it. In other places it is not diverted.

As regards ready-made cloth, as the House is aware, last time in the Select Committee it has been brought from multi-point to single point. At single point, the incidence works out to 3 per cent only. If it was multi-point, it would have been 4 per cent—2 per cent at one level and 2 per cent at another level. If I remember aright, some of the members of the Select Committee suggested that 3 per cent single point would be more reasonable. So, we have made it 3 per cent single point. Moreover, on account of the levy of excise duty on cloth, this ready-made cloth industry is to gain a lot because after all the excise duty on cloth is very small and it does not affect that particular trade.

With regard to ribbon and tapes, it is good that this industry has found very good champions in the persons of Sriyuths Mallaradhya, Puttanna and others. In fact, even before this the people who are engaged in this trade have taken me to their place of business and showed me how they are plying this trade. I have gone into this question already. Therefore, at the appropriate stage we will consider this case also. To what extent, in what manner and who should be benefited is a matter which we will have to consider because, supposing there is a big merchant who deals in it, he need not get this benefit while a man who plies it as a cottage industry merits some little concession. Therefore, that question will be examined at an appropriate stage.

Sri J. B. MALLARADHYA.—Our plea is entirely for cottage industries and not for big merchants.

Sri T. MARIAPPA.—The next question is levy of single-point tax on cocoanut oil. I have got this examined. I agree with the suggestion made that it merits only one-point tax because most of the cocoanut oil here is imported and the importers can be located. Therefore at the appropriate time cocoanut oil will be subjected only to single-point tax.

My friend Sri Muckannappa wanted eggs to be exempted. I was not very sure of my position because it is a long time since I read the Sales Tax Act again. I got it verified. My Department tells me that eggs are exempt from sales tax under the new Act. Therefore if anybody charges sales tax for eggs he will be prosecuted. If Sri Muckannappa will pass on that information we will take action.

Sri C. J. MUCKANNAPPA.—We will call for the bills and pass them on to you.

Sri T. MARIAPPA.—Sri Puttegowda has thrown a very good suggestion even though it does not deal with the quantum of sales tax. He said that people are entitled to great respect and courtesy and they must be given proper seats. He said that at present people are not properly treated and they are not given seats. I can assure the House that I will immediately pass on this request to the Department. Whether a person pays tax or not, he is entitled to great respect because he is a citizen of the State and more so a tax payer. We want to treat the hen that lays the golden egg with great respect. From that point of view, I can assure the member that all possible conveniences will be provided to the tax-payers. I have already told the Sales Tax Officers on the first occasion that they should not issue notices to more merchants than they could dispose of on the very day. I do not want merchants to come to the Sales Tax Office and go back without being heard. If a Sales Tax Officer can deal with only 10 cases a day he should issue notices to only 10 persons for that day. He should not make people wait unnecessarily. Whenever merchants come to the Sales Tax Office they must be provided with chairs or benches.

Sri J. VENKATAPPA (Sidlaghatta).—Can an article be charged at two points? When we buy ammunition we have to pay both the turnover tax and the percentage tax.

Sri T. MARIAPPA.—Our Sales Tax Law is new. Kindly read Schedule I. In the Schedule there is single-point as well as multi-point tax. This is doubly taxed because it is a luxury article Sri Rajaiah Shetty said: "Don' thave too many Schedules." I may say that Schedules I and II are likely to be combined when we come to the stage of amendment. The Government of India have suggested to us that there should be single-point levy so far as luxury goods are concerned at a higher level, at 7 per cent. We will place that suggestion before the House. All the other States are making that amendment. If the House is prepared to accept that amendment we shall also have it.

Sri B. R. SUNTHANKAR.—Leather goods, say chappals, are taxed and that affects the poor cobblers.

Sri T. MARIAPPA.—Chappals are not taxed. Manufactured leather goods are taxed, but cottage industries like chappals and shoes are not taxed.

With these words, I thank the Hon'ble Members for the constructive criticism and the suggestions that they have made.

(SRI T. MARIAPPA)

There is one more point. Both during the general debate and now that point was raised. On page 23 of the Budget Memorandum there is a small mistake. We have issued corrections, but it seems that has not come to the notice of Hon'ble members and so I want Hon'ble members to make that correction. On page 23 of the Budget Memorandum, change the figure "452" against sales tax for the year 1958-59 to "588.59". That will then make a total of "724.86". This was a printing mistake and it may be corrected.

Sri J. B. MALLARADHYA.—The point of Sri Rajaiah Setty was that in the pictorial representation of the budget there appears to be a double entry.

Sri T. MARIAPPA.—The correction made by me answers that point also.

*ಶ್ರೀ ಎಚ್. ಎಸ್. ರುದ್ರಪ್ಪ.—ಅಧ್ಯಕ್ಷರೇ, ಅರಣ್ಯ ಸಂಪತ್ತಿನ ವಿಷಯದಲ್ಲಿ ಮಾನ್ಯ ಸ್ನೇಹಿತರು ಅನೇಕ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತೆ ಅನೇಕ ವಿಷಯಗಳ ಬಗ್ಗೆ ಅರಣ್ಯಶಾಖೆಯಲ್ಲಿರತಕ್ಕ ಲೋಪದೋಷಗಳನ್ನು ತಿಳಿಸಿದ್ದಾರೆ. ಕೆಲವು ಮಾನ್ಯ ಸದಸ್ಯರು ಅರಣ್ಯಸಂಪತ್ತನು ಬೆಳೆಸುವ ವಿಷಯದಲ್ಲಿಯೂ, ಉತ್ಪತ್ತಿಯನ್ನು ಜಾಸ್ತಿಮಾಡುವ ವಿಷಯದಲ್ಲಿಯೂ ಅತ್ಯುತ್ತಮವಾದ ಸಲಹೆಗಳನ್ನು ಕೊಟ್ಟಿರುವುದಕ್ಕಾಗಿ ನಾನು ಅವರೆಲ್ಲರಿಗೂ ವಂದಿಸುತ್ತೇನೆ. ಅನೇಕ ಮಾನ್ಯ ಸದಸ್ಯರು ಹೇಳಿದಹಾಗೆ ಈಗ ಹೊಸ ಮೈಸೂರಿಗೆ ಬಂದಿರತಕ್ಕ ಪ್ರದೇಶಗಳಲ್ಲಿ ಅರಣ್ಯ ಸಂಪತ್ತು ಚೆನ್ನಾಗಿದೆ. ಇದೇ ರೀತಿ ಅರಣ್ಯ ಸಂಪತ್ತನ್ನುಳ್ಳ ಪ್ರದೇಶಗಳು ಇಂಡಿಯಾ ದೇಶದಲ್ಲಿ ವಿಶೇಷವಾಗಿವೆ. ಈಗ ನಮಗೆ ಬಂದಿರುವ ಅರಣ್ಯ ಸಂಪತ್ತು ಉತ್ತಮವಾಗಿದೆ. ಅದನ್ನು ಇನ್ನೂ ಅಭಿವೃದ್ಧಿಪಡಿಸುವುದಕ್ಕೆ ಹೆಚ್ಚಿನ ಅವಕಾಶವಿದೆಯೆಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ನಮಗೆ ಈಗ ಹೊಸದಾಗಿ ಬಂದಿರುವ ಪ್ರದೇಶಗಳಲ್ಲಿರುವ ಅಡವಿಗಳಲ್ಲಿ ಬಹು ಭಾಗ ಎಂದರೆ ಶೇಕಡ 50 ಕ್ಕಿಂತ ಜಾಸ್ತಿ ಆ್ಯ ಆರ್ಗನೈಜ್ಡ್ ಫಾರೆಸ್ಟ್ ಆಗಿದೆ. ಅವು ಇನ್ನೂ ಅರಣ್ಯ ಖಾತೆಯ ವಶದಲ್ಲಿಲ್ಲ. ಈಗ ನಮಗೆ ಬರುವ ಉತ್ಪತ್ತಿ ಮತ್ತು ದೇಶಕ್ಕೆ ಬರುವ ಸಂಪತ್ತು ಬಹಳ ಕಡಮೆಯಿದೆ ಆದ್ದರಿಂದ ಬಹುಶಃ ಆ್ಯ ಆರ್ಗನೈಜ್ಡ್ ಫಾರೆಸ್ಟ್ ಮತ್ತು ಆರ್ಗನೈಜ್ಡ್ ಫಾರೆಸ್ಟ್—ಇವೆರಡನ್ನೂ ಸೇರಿಸಿ ಅಡವಿಯನ್ನು ಬೆಳೆಸಿದರೆ, ಅರಣ್ಯ ಸಂಪತ್ತು ಮತ್ತಷ್ಟು ಜಾಸ್ತಿಯಾಗುತ್ತದೆ, ಸರ್ಕಾರಕ್ಕೆ ಹೆಚ್ಚಿಗೆ ಉತ್ಪತ್ತಿ ಬರುತ್ತದೆ. ಈ ವಿಷಯದಲ್ಲಿಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಈಗಾಗಲೇ ಏರ್ಪಾಡು ಮಾಡಿದ್ದೇವೆ. ನಮ್ಮ ದೇಶದಲ್ಲಿ ನನ್ನ ಕೆಲವು ಮಾನ್ಯ ಸ್ನೇಹಿತರು ಹೇಳಿದಹಾಗೆ ಬಹಳ ದಟ್ಟವಾಗಿ ಬೆಳೆದಿರುವ ವಿಶೇಷವಾದ ಕಾಡು ಇರುವ ಪ್ರದೇಶಗಳೂ ಇವೆ. ಕಾಡು ಇಲ್ಲದೆಯೇ ಇರುವ ಪ್ರದೇಶಗಳೂ ಇವೆ. ಉದಾಹರಣೆಗೆ ಹೇಳುವುದಾದರೆ ನಾರ್ತ್ ಕೆನರಾದಲ್ಲಿ ಶೇಕಡ 81 ಭಾಗ, ಮಂಡ್ಯದಲ್ಲಿ ಶೇಕಡ 2ಭಾಗ ಕಾಡುಪ್ರದೇಶವಿದೆ. ಇದರಿಂದ ಹೆಚ್ಚಿಗೆ ಕಾಡು ಇರುವ ಪ್ರದೇಶಗಳೂ ಇವೆ, ಕಡಮೆ ಕಾಡು ಇರುವ ಪ್ರದೇಶಗಳೂ ಇವೆ. ಸಾಮಾನ್ಯವಾಗಿ ಗುಲ್ಬರ್ಗದಲ್ಲಿ ಶೇಕಡ 4·4; ರಾಯಚೂರಿನಲ್ಲಿ ಶೇಕಡ 5·5; ಬಿದರೆಯಲ್ಲಿ ಶೇಕಡ 4·1; ಬಿಜಾಪುರದಲ್ಲಿ ಶೇಕಡ 5; ಧಾರವಾಡದಲ್ಲಿ ಶೇಕಡ 8·3; ಬೆಳಗಾವಿನಲ್ಲಿ ಶೇಕಡ 14; ಹಾಸನದಲ್ಲಿ ಶೇಕಡ 7½; ತುಮಕೂರಿನಲ್ಲಿ ಶೇಕಡ 8; ಮತ್ತು ಚಿತ್ರದುರ್ಗದಲ್ಲಿ ಶೇಕಡ 9; ಈ ರೀತಿಯಾಗಿ ಬಹಳ ಕಡಮೆ ಇರುವ ಅಡವಿ ಪ್ರದೇಶಗಳನ್ನು ತಮ್ಮ ಮುಂದಿಟ್ಟಿದ್ದೇನೆ. ಇದರಿಂದ ಅರಣ್ಯ ಸಂಪತ್ತನ್ನು ಈಗ ಬೆಳೆಸಬೇಕಾದುದು ಬಹಳ ಅವಶ್ಯಕವಿದೆ. ಒಂದುಕಡೆ ನಮ್ಮ ದೇಶದಲ್ಲಿ ಹೆಚ್ಚಿಗೆ ಅಡವಿ ಇದೆ. ಇನ್ನೊಂದು ಕಡೆ ಕಡಮೆ ಇದೆ. ಮತ್ತೊಂದು ಕಡೆ ಇಲ್ಲವೇ ಇಲ್ಲ. ಎಲ್ಲಿ ಹೆಚ್ಚಿನ ಅಡವಿ ಇದೆಯೋ ಅಲ್ಲಿಯೇ ಮತ್ತಷ್ಟು ಬೆಳೆಸುತ್ತಿದ್ದಾರೆ. ಅದು ಸರಿಯಲ್ಲ. ಎಲ್ಲ ಕಡಮೆ ಅರಣ್ಯವಿದೆಯೋ ಅಲ್ಲ ಅರಣ್ಯ ಸಂಪತ್ತನ್ನು ಹೆಚ್ಚಿಗೆ ಬೆಳೆಸುವುದು ನ್ಯಾಯವಾದುದು. ಈ ದೃಷ್ಟಿಯಿಂದ ಎಲ್ಲೆಲ್ಲಿ ಅಡವಿ ಕಡಿಮೆ ಇದೆಯೋ ಅಲ್ಲೆಲ್ಲಾ ಕಾಡನ್ನು ಬೆಳೆಸುವುದೇ ಕೇಂದ್ರ ಸರ್ಕಾರದವರ ಮತ್ತು ಪ್ರಾಂತ ಸರ್ಕಾರದವರ ಉದ್ದೇಶ. ಯಾವ ಯಾವ ಕಡೆಗಳಲ್ಲಿ ಅರಣ್ಯಸಂಪತ್ತು ಕಡಮೆ ಇದೆಯೋ ಅಂತಹ ಕಡೆಗಳಲ್ಲಿ ಅರಣ್ಯವನ್ನು ಅಭಿವೃದ್ಧಿ ಪಡಿಸಬೇಕೆನ್ನುವ ಉದ್ದೇಶ ಬಹಳ ಮುಖ್ಯವಾದುದು.

ಅನೇಕ ಮಾನ್ಯ ಸದಸ್ಯರು ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅರಣ್ಯವನ್ನು ಯಾವರೀತಿ ಬೆಳೆಸಬಹುದು ಎಂಬುದನ್ನು ಹೇಳಿದ್ದಾರೆ. ಅನೇಕ ಕಡೆ, ಬೆಳೆಸುವುದಕ್ಕೆ ನಮಗೆ ಸಾಕಾದಷ್ಟು ಜಮೀನು ಇಲ್ಲ, ಕೆಲವು ಕಡೆ ಗುಡ್ಡಗಾಡು ಇದೆ, ಅದನ್ನು ಉಪಯೋಗಿಸಿಕೊಳ್ಳಬೇಕು, ಕೆಲವುಕಡೆ ನಾಲಾ ಪ್ರದೇಶ ಇದೆ, ಅದನ್ನು ಸಹ ಉಪಯೋಗಿಸಿಕೊಳ್ಳಬೇಕೆಂದು ಮಾನ್ಯ ಸ್ನೇಹಿತರು ಹೇಳಿದ್ದಾರೆ. ಯಾವ ಯಾವ ಕಡೆ ಡಿಸ್ಟ್ರಿಕ್ಟ್ ಫಾರೆಸ್ಟ್ ಇದೆ, ಗೋಮಾಳ ಇದೆ ಮತ್ತು ನಾಲಾ ಪ್ರದೇಶ ಇದೆ ಅಲೆಲ್ಲಾ ಅಡವಿ ಬೆಳೆಸಬಹುದು; ಬೆಳೆಸುವುದಕ್ಕೆ ಪ್ರಯತ್ನಮಾಡುವುದು ಸೂಕ್ತವಾದದು. ಒಂದೇಕಡೆ ಬೆಳೆಸುವುದರಿಂದ ಪ್ರದೇಶಕ್ಕೆ ಅನುಕೂಲವಾಗುವುದಿಲ್ಲ ಎಂದು ಇಂಡಿಯಾ ಸರ್ಕಾರದವರಿಗೂ ತಿಳಿದಿದೆ, ರಾಜ್ಯ ಸರ್ಕಾರದವರಿಗೂ ತಿಳಿದಿದೆ. ಈ ದೃಷ್ಟಿಯಿಂದ ಅರಣ್ಯ ಸಂಪತ್ತನ್ನು ಬೆಳೆಸುವುದಕ್ಕೆ ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲೂ ಪ್ರಯತ್ನ ಮಾಡುತ್ತಾ ಇದ್ದೇವೆ. ಈಗ ನಮ್ಮ ದೇಶದಲ್ಲಿ ಬೆಳೆಸಿರತಕ್ಕ ಅರಣ್ಯಸಂಪತ್ತು 1 ಲಕ್ಷ 54 ಸಾವಿರ ಎಕರೆ ಇದೆ. ಇದು ರೆಗ್ಯುಲರ್ ಪ್ಲಾಂಟೇಷನ್. ಇದರಲ್ಲಿ ತೇಗದ ವರ 86,597 ಎಕರೆ ಇದೆ. ಬಾಕಿ ಸಾದೆ ಮತ್ತು ಇತರ ಮರಗಳು 77,140 ಎಕರೆ ಇದೆ. ಇದು ಬಹಳ ಕಡಮೆಎಂದು ಕಾಣುತ್ತದೆ. ಯಾವ ಪ್ರಮಾಣದಲ್ಲಿ ಇವತ್ತಿನ ದಿವಸ ನಾವು ಅಡವಿಯನ್ನು ತೆಗೆಯುತ್ತಾ ಇದ್ದೇವೆ ಅದೇ ಪ್ರಮಾಣದಲ್ಲಿ ಬೆಳಸುತ್ತಿಲ್ಲ ಎಂದು ಹೇಳಿದರು. ಇದು ಒಪ್ಪತಕ್ಕದ್ದೇ. ಅದಕ್ಕೆ ಈ ಬಡ್ಜೆಟ್‌ನಲ್ಲಿ ನಿಗದಿಮಾಡಿರತಕ್ಕ ಹಣವಾದರೂ ಬಹಳ ಸ್ವಲ್ಪ. ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ಹತ್ತು ಸಾವಿರ ಎಕರೆ ಮಾತ್ರ ಪ್ಲಾಂಟೇಷನ್ ಮಾಡಿದ್ದೆವು. ಇದೂ ಬಹಳ ಕಡಮೆ. 2ನೆಯ ಪಂಚವಾರ್ಷಿಕ ಯೋಜನೆಯಲ್ಲಿ 1956-57ರಲ್ಲಿ ನುಮಾರು 10 ಸಾವಿರ ಎಕರೆ ಮಾಡಿದ್ದೆವು. ಈಗ 1958-59ನೆಯ ಸಾಲಿಗೆ ಬಹುಶಃ 16 ಸಾವಿರ ಎಕರೆ ಮಾಡಬೇಕೆಂದು ಯೋಜನೆ ಹಾಕಿದೆ. ತೇಗದಮರಕ್ಕೆ ಬೇರೆದುಡ್ಡುಮುಡುಪಾಗಿದೆ. ತಮಗೆ ಗೊತ್ತಿರುವಹಾಗೆ ತೇಗದಮರ ಅಲ್ಲದೆ ಬೇರೆ

ಮರಗಳನ್ನು ಬೆಳೆಸಲು ಬಡ್ಜೆಟ್ಟಿನಲ್ಲಿ 7 ಲಕ್ಷ ರೂಪಾಯಿಗಳನ್ನು ನಾವು ತೆಗೆದಿಟ್ಟಿದ್ದೇವೆ. ಉಪಯುಕ್ತವಾದ ಮರಗಳನ್ನು ಬೆಳೆಸುತ್ತಾ ಇದ್ದೇವೆ. ಕಳೆದ ಸಾಲಿನಲ್ಲಿ ಒದಗಿಸಿದ ಹಣ ಕಡಮೆ ಇತ್ತು. ಈ ವರ್ಷ 13 ಲಕ್ಷದ 74 ಸಾವಿರ ರೂಪಾಯಿಗಳನ್ನು ಒದಗಿಸಿದ್ದೇವೆ. ಇದರಿಂದ ಅನೇಕ ರೀತಿಯ ಮರಗಳನ್ನು ಬೆಳೆಸುತ್ತಾ ಇದ್ದೇವೆ.

ಅನೇಕ ಸ್ನೇಹಿತರು ಕ್ಯಾಷ್ಯುನಟ್ ಪ್ಲಾಂಟೇಷನ್ ಬೆಳೆಸಬೇಕೆಂದು ಹೇಳಿದರು. ಅದಕ್ಕೆ ಇದರಲ್ಲಿ ಸಾಕಾದಷ್ಟು ಹಣ ಒದಗಿಸಿದ್ದೇವೆ. ಆದರೂ ಸಾಲದು ಎಂದು ಕಾಣುತ್ತದೆ. ಇದಕ್ಕೆ ಒದಗಿಸಿರತಕ್ಕ ಹಣ 36 ಸಾವಿರ ರೂಪಾಯಿಗಳು.

ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಮುಳಬಾಗಿಲು).—ಇದು ಸೌತ್ ಕೆನರಾಗೆ ಮಾತ್ರತಾನೆ?

ಶ್ರೀ ಎಚ್. ಎಸ್. ರುದ್ರಪ್ಪ.—ಸೌತ್ ಕೆನರಾ ಅಷ್ಟಕ್ಕೇ ಅಲ್ಲ. ಯಾರು ಯಾರು ಇದನ್ನು ಬೆಳೆಸುತ್ತೇವೆ ಎಂದು ಖಾಸಗೀ ಜನರು ಹೇಳುತ್ತಾರೆ ಅವರಿಗೂ ಕೊಡುತ್ತಾ ಇದ್ದೇವೆ. ಶ್ರೀಮಾನ್ ಲಿಂಗಾರೆಡ್ಡಿ ಅವರು, ಗೇರುಪೊಪ್ಪು ಪ್ಲಾಂಟೇಷನ್ ನಮ್ಮ ಕಡೆ ಬಹಳ ಚೆನ್ನಾಗಿ ಆಗುತ್ತದೆ ಇಲ್ಲೂ ಸಹ ಬೆಳೆಸಲು ಪ್ರಯತ್ನ ಮಾಡಬೇಕೆಂದು ಹೇಳಿದರು. ನಾವೂ ಸಹ ಎಲ್ಲೆಲ್ಲಿ ಅದು ಚೆನ್ನಾಗಿ ಬೆಳೆಯುತ್ತದೆ ಅಲ್ಲೆಲ್ಲಾ ಜನಗಳು ಯಾರು ಯಾರು ಮುಂದೆ ಬರುತ್ತಾರೆ. ಅವರೆಲ್ಲರಿಗೂ ಜಮೀನು ಕೊಟ್ಟು ಆರೀತಿ ಕ್ಯಾಷ್ಯುನಟ್ ಪ್ಲಾಂಟೇಷನ್ ಮುಂದುವರಿಸಬೇಕೆಂದು ಆಗಲೇ ನಲಹೆ ಕಳುಹಿಸಿದ್ದೇವೆ. ಬಹುಶಃ ಅನೇಕ ಕಡೆ ಏನಾಗಿದೆ ಎಂದರೆ ವನ ಬೆಳೆಯುತ್ತದೆ. ಆದರೆ ಬರತಕ್ಕ ಉತ್ಪನ್ನ ಬಹಳ ಕಡಮೆ. ಈ ದೃಷ್ಟಿಯಿಂದ ಅನೇಕರು ಅನೇಕಭಾಗದಲ್ಲಿ ಈ ವ್ಯವಸಾಯವನ್ನು ನಡೆಸಿ ಅಲ್ಲಿಗೇ ಕೈ ಬಿಟ್ಟಿದ್ದಾರೆ. ಆದ್ದರಿಂದ ತನಿಖೆಮಾಡಿ, ಜನಗಳು ಹಣವನ್ನು ಖರ್ಚುಮಾಡಬೇಕಾದರೆ ಉಪಯುಕ್ತವಾಗುತ್ತದೆಯೇ ಇಲ್ಲವೇ ಎಂಬುದನ್ನು ಪರಿಶೀಲನೆಮಾಡಿ ಯಾವ ಯಾವ ಸ್ಥಳದಲ್ಲಿ ಉತ್ತಮವಾಗಿ ಬೆಳೆಯುತ್ತದೆ ಅಂಥ ಕಡೆ ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದೂ ಸಹ ಒಂದು ರೀತಿಯಾದ ಅರಣ್ಯ ಸಂಪತ್ತಾಗಿದೆ. ಎಲ್ಲೇ ಸರ್ಕಾರಿ ಜಾಗ ಇದ್ದರೂ ಸಹ ಕೊಡುತ್ತೇವೆ. ಮತ್ತು ಗುಡ್ಡಗಾಡು ಜಮೀನು ಎಲ್ಲೆಲ್ಲಿ ಇದೆ ಅಲ್ಲೂ ಸಹ ಕ್ಯಾಷ್ಯುನಟ್ ಪ್ಲಾಂಟೇಷನ್ ಬೆಳೆಸುವುದಕ್ಕೆ ಏರ್ಪಾಡು ಮಾಡುತ್ತೇವೆ. ಶ್ರೀಮಾನ್ ಲಿಂಗಾರೆಡ್ಡಿಯವರು ಹೇಳಿದಂತೆ ಕೋಲಾರದಲ್ಲಿ ಬೆಳೆಯುವುದಕ್ಕೆ ಸಾಧ್ಯವೇ ಎಂಬುದನ್ನು ಪರಿಶೀಲನೆಮಾಡುತ್ತೇವೆ. ಕೆಲವುಕಡೆ ಅರ್ಜಿ ಬಂದಿದೆ. ತನಿಖೆಮಾಡಿ ಚೆನ್ನಾಗಿ ಬೆಳೆದರೆ ಕೊಡಬಹುದು. ದುಡ್ಡು ಖರ್ಚು ಮಾಡುವುದಕ್ಕೆ ಮೊದಲೇ ತನಿಖೆ ಮಾಡಿಕೊಡಿ ಎಂದು ಹೇಳಿದ್ದೇವೆ. ಸರ್ಕಾರಿ ಜಮೀನು ಇದ್ದರೆ ಲೀಸ್ ಮೇಲೆ ಇಷ್ಟು ವರ್ಷ ಎಂದು ಹೇಳಿ ಸೌತ್ ಕೆನರಾ, ನಾರ್ತ್ ಕೆನರಾದಲ್ಲಿ ಹೇಗೆ ಮಾಡಿದ್ದಾರೆ ಅದೇ ರೀತಿ ಏರ್ಪಾಡುಮಾಡಿ ಕೊಡುತ್ತೇವೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಶ್ರೀನಿವಾಸಪುರದಲ್ಲಿ ನಾವಿರಾರು ಎಕರೆ ಕ್ಯಾಷ್ಯುನಟ್ ಹಾಕುತ್ತೇವೆ. ಮಂಗಳೂರಿನಲ್ಲಿ ಹೋಗಿ ನಾನು ನೋಡಿದ್ದೇನೆ. ಶ್ರೀನಿವಾಸಪುರದಲ್ಲಿ ಎಷ್ಟು ಪ್ಲಾಂಟೇಷನ್ ತರುತ್ತಾರೋ ಅಷ್ಟೂ ಸಹ ಅಲ್ಲಿ ಬೆಳೆದಿಲ್ಲ. ಇದು ಡಾಲರ್ ಅರ್ನಿಂಗ್ ಕಮಾಡಿಟಿ, ನಾವಿರಾರು ರೂಪಾಯಿ ಸಂಪಾದನೆ ಮಾಡುತ್ತಾ ಇದ್ದಾರೆ. ನಮ್ಮ ದೇಶದಲ್ಲೂ ಸಹ ಇದನ್ನು ಬೆಳೆಸುವುದಕ್ಕೆ ಅನುಕೂಲವಿದೆ, ಅದನ್ನು ಉಪಯೋಗಿಸಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಎಸ್. ರುದ್ರಪ್ಪ.—ಸರ್ಕಾರದವರಿಂದ ಎಷ್ಟು ಸಾಧ್ಯವೋ ಅಷ್ಟನ್ನೂ ಮಾಡುತ್ತೇವೆ. ಹಣ ಸಂಪಾದನೆ ಮಾಡುವುದು ಅಲ್ಲದೆ, ಜನಗಳಿಗೆ ಏನು ಅನುಕೂಲ ಮಾಡಿಕೊಡಬೇಕೋ ಅದನ್ನು ಮಾಡಿಕೊಡಬೇಕಾದ್ದು ಸರ್ಕಾರದವರ ಮೊದಲನೆಯ ಕರ್ತವ್ಯ. ಈಗ ಸೌದೆಗೆ ಹೆಚ್ಚು ಅಭಾವ ಇದೆ, ಯಾವರೀತಿ ಜನಗಳಿಗೆ ಇರತಕ್ಕ ಸೌದೆಯ ಅಭಾವವನ್ನು ನೀಗಿಸಿ ಸೌದೆಯನ್ನೊದಗಿಸಬೇಕಂಬುದೇ ನಮಗೆ ದೊಡ್ಡ ಸಮಸ್ಯೆಯಾಗಿದೆ. ಇವತ್ತಿನ ದಿವಸ ಬೆಂಗಳೂರು, ತುಮಕೂರು, ಕೋಲಾರ ಈ ಕಡೆಯಲ್ಲೆಲ್ಲಾ ಸೌದೆಗೆ ಅಭಾವ ಬಹಳವಾಗಿದೆ. ಈಗಾಗಲೇ ತಮ್ಮ ಮುಂದೆ ಕೆಲವು ವಿಚಾರಗಳನ್ನು ಇಟ್ಟಿದ್ದೇನೆ. ಸೌದೆ ಬೆಳೆಸುವುದಕ್ಕೆ ಸಹ ಪ್ರಯತ್ನ ಮಾಡಿದ್ದೇವೆ.

ಕೆಲವು ಮಾನ್ಯಮಿತ್ರರು ನಸಿಗಳನ್ನು ಒದಗಿಸಿದರಿ, ವನಮಹೋತ್ಸವಕ್ಕೆ ಒದಗಿಸಿದ ನಸಿಗಳು ಚೆನ್ನಾಗಿಲ್ಲ ಎಂದು ಹೇಳಿದರು. ನಸಿ ಒದಗಿಸಿರುವುದು ಚೆನ್ನಾಗಿದೆ, ಆದರೆ ನಸಿ ನೆಟ್ಟಮೇಲೆ ನೋಡಿಕೊಳ್ಳದೇ, ಕಾಪಾಡದೇ ಕೆಟ್ಟುಹೋಗಿದೆಯೇ ಹೊರತು ಮತ್ತೆ ಬೇರೆ ಅಲ್ಲ. ಚೆನ್ನಾಗಿರತಕ್ಕ ನಸಿಗಳನ್ನು ಒದಗಿಸಿದ್ದೇವೆ. ಅದೇ ನಸಿಗಳನ್ನು ಸರ್ಕಾರಿ ಇಲಾಖೆಯವರೂ ಹಾಕಿದ್ದಾರೆ. ಅದು ಬಹಳ ಚೆನ್ನಾಗಿದೆ. ಇರತಕ್ಕ ಲೋಪದೋಷ ಎಂದರೆ ಸರಿಯಾಗಿ ಪೋಷಣೆ ಮಾಡದೇ ಇರುವುದೇ ಆಗಿದೆ. 15½ ಲಕ್ಷ ನಸಿಗಳನ್ನು ಒದಗಿಸಿದ್ದೇವೆ. ಕೆಲವನ್ನು ಮುಫತ್ತಾಗಿ, ಕೆಲವನ್ನು no profit no loss basis ಮೇಲೆ ಖಾಸಗೀ ಅವರಿಗೆ ಒದಗಿಸಿದ್ದೇವೆ.

ಶ್ರೀ ಜಿ. ಎಕ್. ಪುಟ್ಟಣ್ಣ.—ತಾವು ನರ್ಸರಿಯನ್ನು ಪ್ರತಿಯೊಂದು ತಾಲ್ಲೂಕು ಹೆಡ್‌ಕ್ವಾರ್ಟರುಗಳಿಗೂ ಸರಬರಾಯಿ ಮಾಡಿ.

ಶ್ರೀ ಎಚ್. ಎಸ್. ರುದ್ರಪ್ಪ.—ಈಗ ನಾವು ಪ್ರತಿಯೊಂದು ಜಿಲ್ಲಾದಲ್ಲಿಯೂ ಸರಬರಾಯಿ ಮಾಡುತ್ತಲೇ ಇದ್ದೇವೆ. ಹಾಗೆ ತಾಲ್ಲೂಕ್ ಹೆಡ್‌ಕ್ವಾರ್ಟರಿನಲ್ಲಿರತಕ್ಕ ಜನರು ತಮಗೂ ನರ್ಸರಿ ಬೇಕೆಂದು ಮುಂದೆ ಬಂದರೆ ಅಂಥವರಿಗೂ ಕೂಡ ನಾವು ಖಂಡಿತ ಸರಬರಾಯಿ ಮಾಡುತ್ತೇವೆ. ಆದರೆ ತುಮಕೂರಿನಲ್ಲಿ ಪ್ಯೂಯಲ್ ಪ್ಲಾಂಟೇಷನ್ ಕೆಲಸ ಬಹಳ ಚೆನ್ನಾಗಿ ನಡೆದಿದೆ.

ಶ್ರೀ ಜಿ. ಎಕ್. ಪುಟ್ಟಣ್ಣ.—ಶ್ರದ್ಧೆಯಿಂದ ಕೆಲಸ ಮಾಡತಕ್ಕಂಥ ಜನ ಎಲ್ಲೆಲ್ಲಿ ಯಾರು ಯಾರು ಮುಂದೆ ಬರುತ್ತಾರೋ ಅಂಥವರನ್ನು ರಿಜಿಸ್ಟರ್ ಮಾಡಿಕೊಂಡು ಅವರಿಗೆ ಸನ್ನದ್ದುಗಳನ್ನು ಕೊಡಿ, ಅದರಿಂದ ಬಹಳ ಸಹಾಯವಾಗುತ್ತದೆಂದು ಈ ಹಿಂದೆ ಕೂಡ ನಾನು ಇದೇ ಸಭೆಯಲ್ಲಿ ತಮಗೆ ತಿಳಿಸಿದ್ದೆ.

ಶ್ರೀ ಎಚ್. ಎಸ್. ರುದ್ರಪ್ಪ.—ಎಲ್ಲೆಲ್ಲಿ ನಾವು ಇಷ್ಟು ಪ್ರದೇಶದಲ್ಲಿ ಅರಣ್ಯ ಬೆಳೆಸಿಕೊಡುತ್ತೇವೆಂದು ಬರುತ್ತಾರೋ ಅಂಥ ಜನರಿಗೆ ನಾವು ಬೇಕಾದಂತೆ ಹಣ ಸಹಾಯ ಕೂಡ ಕೊಡುತ್ತೇವೆ. ಅಂಥ ಶ್ರದ್ಧೆಯಿಂದ ಕೆಲಸಮಾಡತಕ್ಕ ಜನರು ಮುಂದೆ ಬರಬೇಕು. ಆದರೆ ಅಂಥ ಜನರು ಸಿಕ್ಕದೆ ಕಳೆದ 50 ವರ್ಷಗಳಿಂದಲೂ ಈ ಅರಣ್ಯಗಳನ್ನು ಬೆಳೆಸಲು ಸಾಧ್ಯವಾಗುತ್ತಿಲ್ಲ. ಆದುದರಿಂದ ಈಗ ನಾನು ಈ ಮಾನ್ಯ ಸಭೆಯ ಸದಸ್ಯರಿಗೆ ತಿಳಿಸಬೇಕಾಗಿರುವುದೇನೆಂದರೆ ಈ ಕಾರ್ಯದಲ್ಲಿ ಖಾಸಗೀ ಜನರು ಮುಂದೆ ಬಂದರೆ ಅಂಥಾವರಿಗೆ ಎಲ್ಲ ರೀತಿಯಲ್ಲೂ ರಿಯಾಯಿತಿಗಳನ್ನು ದೊರಕಿಸಿಕೊಟ್ಟು ಅವರಿಗೆ ಅನುಕೂಲ ಮಾಡಿಕೊಡುತ್ತೇವೆ ಎನ್ನುವುದು

(ಶ್ರೀ ಎಚ್. ಎಸ್. ರುದ್ರಪ್ಪ)

ನ್ನೀಗ ನಾನು ತಿಳಿಸುತ್ತಿದ್ದೇನೆ. ಶ್ರೀ ಜಿ. ಎಸ್. ಪುಟ್ಟಣ್ಣನವರು ಜನರಿಗೆ ಸನ್ನದ್ದನ್ನು ಕೊಡಿಸಿಕೊಡ ಬೇಕೆಂದು ಹೇಳಿದ್ದಾರೆ. ಅಷ್ಟೇ ಅಲ್ಲ ನಾವು ಅವರಿಗೆ ಬೇಕಾಗಿದ್ದರೆ ಅಗ್ರಿಮೆಂಟ್‌ಕೂಡ ಮಾಡಿಕೊಡುತ್ತೇವೆ. ಅವರು ಇಂತಿಷ್ಟು ವರ್ಷದಲ್ಲಿ ಇಷ್ಟು ಕಾಡನ್ನು ಬೆಳಸಿಕೊಡುತ್ತೇವೆಂದು ಹೇಳಿದರೆ ಸರ್ಕಾರ ಅಷ್ಟು ವರ್ಷಗಳೂ ಅವರಿಗೆ ಬೇಕಾಗಿರತಕ್ಕ ಎಲ್ಲ ಅನು ಕೂಲಗಳನ್ನೂ ಒದಗಿಸಿಕೊಡುತ್ತಂಬ ಅಂಶವನ್ನು ನಾನೀಗ ತಿಳಿಸುತ್ತಿದ್ದೇನೆ. ಅಷ್ಟೇ ಅಲ್ಲದೆ ಕಣ್ಣಿನ ಗಿಡಗಳನ್ನು ಬೆಳೆಸತಕ್ಕದ್ದೂ ಕೂಡ ಒಂದು ರೀತಿಯಲ್ಲಿ ಅರಣ್ಯಸಂಪತ್ತನ್ನು ಹೆಚ್ಚಿಸಿದಂತೆಯೇ ಆಗುತ್ತದೆ. ಅಂಥಾದ್ದಕ್ಕೂಕೂಡ ಅನುಕೂಲಮಾಡಿಕೊಡುತ್ತೇವೆಂದು ಹೇಳುತ್ತೇನೆ. ಎಂದರೆ ಈ ಕೆಲಸಗಳಿಗೆಲ್ಲ ಖಾಸಗೀ ಜನರು ಮುಂದೆ ಬಂದರೆ ಮಾತ್ರ ಸಾಧ್ಯ. ಸರ್ಕಾರದವರು ಈ ಉದ್ಯೋಗಕ್ಕೆ ಆಳುಗಳನ್ನು ನೇಮಕಮಾಡಿ ಮಾಡಬೇಕೆಂದರೆ ಅದು ಖಂಡಿತ ಸಾಧ್ಯವಿಲ್ಲ. ಆ ರೀತಿ ಮಾಡುವುದಕ್ಕೂ ಆಗುವುದಿಲ್ಲ. ತಾವು ಯಾವ ಒಂದು ವೇಗದಲ್ಲಿ ಈ ಕೆಲಸ ಕಾರ್ಯಗಳನ್ನು ಸರ್ಕಾರ ಮಾಡಬೇಕೆಂದು ಹೇಳಿದರೂ ಅದು ಸಾಧ್ಯವಾಗುವುದಿಲ್ಲ. ಪಾಶ್ಚಾತ್ಯರಾಷ್ಟ್ರಗಳಲ್ಲೆಲ್ಲಾ ದೇಶದ ಭೂಮಿಯಲ್ಲಿ ಮೂರನೆಯ ಒಂದು ಪಾಲು ಭೂಮಿಯಲ್ಲಿ ಅವರು ಅರಣ್ಯವನ್ನು ಬೆಳೆಸಿರುತ್ತಾರೆ. ಈ ಸಂಬಂಧವಾದ ಅನೇಕ ಲಿಟ್ರೇಚರುಗಳನ್ನು ನಾನೂ ಓದಿದ್ದೇನೆ. ಅಲ್ಲೆಲ್ಲಾ ಈ ಉದ್ಯೋಗವನ್ನು ಹೆಚ್ಚಾಗಿ ಖಾಸಗೀ ಜನರೇ ಕೈಗೊಳ್ಳುತ್ತಿದ್ದಾರೆ. ಆದರೆ ಆಗಲೇ ಕೆಲವು ಮಾನ್ಯ ಸದಸ್ಯರು ಹೇಳಿದಹಾಗೆ ಬೀಜಗಳನ್ನು ಗುಡ್ಡದ ಮೇಲೆ ಹೋಗಿ ಚೆಲ್ಲಿದರೆ ಗಿಡಗಳು ಹುಟ್ಟಿಕೊಳ್ಳುವುದಿಲ್ಲ. ಸಸಿಹಾಕಿ ಆಳುಗಳನ್ನು ಕಾವಲಿಟ್ಟಾಗ್ಯೂ ಗಿಡಗಳು ಅಭಿವೃದ್ಧಿಯಾಗುವುದಿಲ್ಲವೆಂದು ಹೇಳುತ್ತಿರುವಾಗ ಇನ್ನು ಕಾಡಿನಲ್ಲಿ ಯಾವ ಆರೈಕೆಯೂ ಇಲ್ಲದಂತೆ ಗಿಡಗಳು ಬೆಳೆಯತಕ್ಕ ಮಾತಿನ್ನೆಲ್ಲಿ ಬಂತು! ನಮ್ಮಲ್ಲಿ ನಮಗೆ ಪ್ರೇಮವಿಲ್ಲ. ಇನ್ನು ನಮಗೆ ಕಾಡುಗಳ ಮೇಲೆ ಪ್ರೇಮ ಹೇಗೆ ಬರಬೇಕು?

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ದೊಡ್ಡ ದೊಡ್ಡ ಡ್ಯಾಂಗಳನ್ನು ಕಟ್ಟಿರತಕ್ಕ ಕಡೆ ಆ ನೀರು ನಿಲ್ಲುವ ಅಂಚಿನಲ್ಲಿ ಬೀಜಹಾಕಿದರೆ ಅದರಿಂದ ಫಲದಾಯಕವಾಗುವುದಿಲ್ಲವೇ?

ಶ್ರೀ ಎಚ್. ಎಸ್. ರುದ್ರಪ್ಪ.—ಏನೇ ಮಾಡಲಿ ಅದಕ್ಕೆ ಕಾವಲುಬೇಕು. ಕಾವಲಿಲ್ಲದೆ ಹೋದರೆ ಏನೂ ಪ್ರಯೋಜನವಿಲ್ಲ. ಅನಾದರಣೆಯಿಂದ ಮಾಡ ತಕ್ಕ ಕೆಲಸ ಅಷ್ಟು ಫಲಕಾರಿಯಾಗುವುದಿಲ್ಲ. ಗುಡ್ಡದ ಮೇಲೆ ಬೀಜ ಹಾಕಿದರೆ ಅದರಿಂದ ದುಡ್ಡು ಲುಕ್ಸಾನಾಗುತ್ತೇ ವಿನಾ ಬೇರೆ ಏನೂ ಪ್ರಯೋಜನವಿಲ್ಲ. ಇನ್ನು ಕೆಲವು ಮಾನ್ಯ ಸದಸ್ಯರು ಕೆಲವು ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತಂದಿದ್ದಾರೆ. ಆ ಬಗ್ಗೆ ಸೂಕ್ತ ಜವಾಬನ್ನು ಕೊಡಬೇಕಾದ್ದು ಸರ್ಕಾರದವರ ಕರ್ತವ್ಯ. ಶ್ರೀ ರಾಜಯ್ಯಸೆಟ್ಟರು ಶಿವಮೊಗ್ಗದಲ್ಲರುವ ಸಾ ಮಿಲ್‌ನಲ್ಲಿ ಕೆಲಸ ಸರಿಯಾಗಿ ನಡೆಯುತ್ತಿಲ್ಲ, ಆದರಿಂದ ನಮಗೆ ಲುಕ್ಸಾನಾಗುತ್ತಿದೆ, ಆ ಬಗ್ಗೆ ಮಾಡರನ್ ಸಾ ಮಿಲ್ಲನ್ನು ಅಲ್ಲಿಗೆ ಹಾಕಬೇಕಾಗಿದೆ ಎಂಬುದಾಗಿ ಹೇಳಿದ್ದಾರೆ. ಅವರು ಹೇಳಿರತಕ್ಕ ವಿಚಾರದಲ್ಲಿ ತಿರುಳಿದೆ. ಅದನ್ನು ಅಭಿವೃದ್ಧಿ ಮಾಡುವುದಕ್ಕಾಗಿ ಈಗ Integrated Wood Industries Scheme ಇತ್ಯಾದಿ ಕೆಲವು ಯೋಜನೆಗಳನ್ನು ಮಾಡಿ ಅವುಗಳನ್ನ ಅಭಿವೃದ್ಧಿಪಡಿಸಬೇಕೆಂಬ ವಿಚಾರದಲ್ಲಿ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಈ ವಿಚಾರದಲ್ಲಿ ನಾವು ಜಾಗ್ರತೆ ಪೂರೈಸುತ್ತೇವೆ.

ಆ ಮೇಲೆ ಅನೇಕ ಸಾಮಾನುಗಳನ್ನ ಸರ್ಕಾರದ ಇಲಾಖೆಯವರು, ಫಾರೆಸ್ಟ್ ಇಲಾಖೆಯವರು ಮಾಡಿದ್ದನ್ನು ಕೊಳ್ಳುತ್ತಾ ಇಲ್ಲ. ಅವು ಹಾಗೆಯೇ ಉಳಿದಿವೆ. ಆದ್ದರಿಂದ ಸರ್ಕಾರದ ಇಲಾಖೆಯವರು ಫಾರೆಸ್ಟ್ ಇಲಾಖೆಯವರು ಮಾಡಿದಂಥ ಸಾಮಾನುಗಳನ್ನು ಕೊಳ್ಳುವುದಕ್ಕೆ ಏರ್ಪಾಟು ಮಾಡಬೇಕು. ಆ ಮೂಲಕ ಹೆಚ್ಚಿಗೆ ಜನಗಳಿಗೆ ಅನುಕೂಲವಾಗುತ್ತದೆ; ಮತ್ತು ಅರಣ್ಯ ಖಾತೆಗೆ ಅನುಕೂಲವಾಗುತ್ತದೆ ಎಂದು ನಾನು ಆಗಲೇ ಅವರ ಗಮನಕ್ಕೆ ತಂದಿದ್ದೇನೆ. ಗಂಧದಮರ ಇನ್ನು ಹೆಚ್ಚಿಗೆ ಕಳ್ಳತನವಾಗುತ್ತಿದೆ ಎಂದು ಹೇಳಿದ್ದಾರೆ. ಅದು ನನಗೆ ಗೊತ್ತು. ಖುದ್ದ ಅನುಭವದ ಮೇಲೆ ಹೆಚ್ಚಿಗೆ ವಿಶೇಷ ರೀತಿಯ ಕಾನೂನು ಮಾಡಿದ್ದೇವೆ. ಆದ್ದರಿಂದ ನಿಲ್ಲಬಹುದು ಎಂದು ಆಶೆ ಇದೆ. ಈಗ ಅದು ಬಹುಮಟ್ಟಿಗೆ ಕಡಮೆಯಾಗಿದೆ ಎಂದು ವರ್ತಮಾನ ಬಂದಿದೆ. ಪ್ರತಿತಿಂಗಳೂ ನಹ ಏನೇನು ಆಗಿದೆ ಎನ್ನುವುದಕ್ಕೆ ರಿಪೋರ್ಟ್ ತರಿಸುತ್ತೇವೆ. ಹಿಂದೆ ಹೆಚ್ಚಿಗೆ ಕಳ್ಳತನದಿಂದ ಹೋಗುತ್ತಿತ್ತು ಎಂದು ಗೊತ್ತಿತ್ತು. ಈಚೆಗೆ ವಿಶೇಷ ರೀತಿಯ ಕಾನೂನನ್ನು ಮಾಡಿದ ಮೇಲೆ ಕಡಮೆಯಾಗಿದೆ ಎಂದು ಗೊತ್ತಾಗಿದೆ. ಬೊಂಬಾಯಿನಲ್ಲಿ ಕಳ್ಳತನದ ಮಾಲು ಪತ್ತೆಯಾಗಿ ರಿಪೋರ್ಟ್ ಕಳುಹಿಸುತ್ತಿದ್ದಾರೆ ಇನ್ನೂ ಕೆಲವು ಕಡೆ ಹೀಗೆ ಆಗುತ್ತಿದೆ. ಮಾನ್ಯ ಸದಸ್ಯರು ಸಹಾಯ ಮಾಡಿದರೆ, ತಮ್ಮಗಳ ಸಹಾಯದಿಂದ ಸಾಧ್ಯವಾದಮಟ್ಟಿಗೆ ಅದನ್ನು ನಿರ್ಮೂಲಮಾಡಲು ಪ್ರಯತ್ನ ಮಾಡುತ್ತೇವೆ. ಈಗ ಇರುವ ಕಾನೂನಿಗೆ ಜನರು ಭಯಪಟ್ಟಿದ್ದಾರೆ ಎಂದು ಹೇಳುತ್ತೇನೆ. ಗಂಧದಮರಕ್ಕೆ ಒಂದು ತರಹ ಸ್ಪೆಷಲ್ ಡಿಸೀಪ್ ಬಂದಿದೆ.

ಶ್ರೀ ಎ. ಮುನಿಯಪ್ಪ (ಚಿಕ್ಕಬಳ್ಳಾಪುರ).—ಕಳ್ಳತನದಲ್ಲಿ ಜನಗಳು ಸಾಗಿಸುತ್ತಾರೆ. ಆದ್ದರಿಂದ ಕಳ್ಳತನದಿಂದ ಸಾಗಿಸುವುದನ್ನು ನಿಲ್ಲಿಸುವುದಕ್ಕೆ ಏರ್ಪಾಡು ಮಾಡಿದ್ದೀರಾ?

ಶ್ರೀ ಎಚ್. ಎಸ್. ರುದ್ರಪ್ಪ.—ಅದನ್ನು ನಿಲ್ಲಿಸುವುದಕ್ಕೆ ಹೊಸ ಕಾನೂನಿನಲ್ಲಿ ಏರ್ಪಾಡು ಮಾಡಿದ್ದೇವೆ.

ಶ್ರೀ ಕೆ. ಪುಟ್ಟಸ್ವಾಮಿ.—ಮೆಂಬರುಗಳ ಸಹಾಯ ಹೇಗೆ ಕೊಡುವುದು?

ಶ್ರೀ ಎಚ್. ಎಸ್. ರುದ್ರಪ್ಪ.—ಕಳ್ಳತನ ಹಿಡಿದರೆ ಸಾಕು. ಮೈಸೂರಿನಲ್ಲಿದ್ದ ರಿಸರ್ಚ್ ಇನ್‌ಸ್ಟಿಟ್ಯೂಷನ್ ಅನ್ನು ಇಂಡಿಯಾ ಸರ್ಕಾರದವರಿಗೆ ವಹಿಸಿಕೊಟ್ಟಿದೆ. ಅವರೂ ಸಹ ಈ ವಿಷಯದಲ್ಲಿ ತನಿಖೆ ನಡೆಸುತ್ತಿದ್ದಾರೆ. ಉತ್ತಮಪಡಿಸದ ನಲಹೆ ಬಂದಿಲ್ಲ. ಈ ರೋಗವನ್ನು ತಡೆಗಟ್ಟುವ ಕೆಲಸವನ್ನು ಇಂಡಿಯಾ ಸರ್ಕಾರದವರಿಗೇ ವಹಿಸಿಕೊಟ್ಟಿದ್ದೇವೆ. ಅವರೂ ಇನ್ನೂ ತನಿಖೆ ಮಾಡುತ್ತಿದ್ದಾರೆ. ಇನ್ನೂ ಪರಿಹಾರ ದೊರೆತಿಲ್ಲ ಎಂದು ಇಷ್ಟು ಮಾತ್ರ ವಿಷಾದದಿಂದ ಹೇಳುತ್ತೇನೆ. ಶ್ರೀ ರಾಜಯ್ಯಸೆಟ್ಟರು ಹೇಳಿದರು ಸಾಫ್ಟ್‌ವುಡ್ಡನ್ನು ಕಮರ್ಷಿಯಲ್ ಯೂನಿಯನ್ನಿಗೆ ಬಹಳ ಕಡಮೆ ದರದಲ್ಲಿ ಮಾರುತ್ತಿದ್ದಾರೆಂದು ಹೇಳಿದರು. ಅದು ನಿಜ. ಒಂದು ವರ್ಷದ ಹಿಂದೆ ಕೆಲವು ಮಾಲನ್ನು ನಾಲ್ಕು ಆಣೆಗೆ ಒಂದು ಅಡಿಯಂತೆ ಮಾರುತ್ತಿದ್ದರು. ಈಚೆಗೆ ಪರಿಶೀಲನೆ ನಡೆಸಿ ಒಂದು ರೂಪಾಯಿಗೆ ಒಂದು ಅಡಿಯಂತೆ ಮಾರುವಂತೆ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಇದು ನ್ಯಾಯವಾದುದು ಎಂದು ಹೇಳಿ ಕಾಣುತ್ತದೆ. ಸರ್ಕಾರಕ್ಕೆ ಅಷ್ಟು ಲುಕ್ಸಾನು ಆಗಿಲ್ಲ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಇಂಡಸ್ಟ್ರೀನ್ ಅಭಿವೃದ್ಧಿಗೋಸ್ಕರ ಲಾಂಗ್ ಟರ್ಮ್ ಲೀಸ್ ಕೊಡಬಾರದೇ?

ಶ್ರೀ ಎಸ್. ಎಸ್. ರುದ್ರಪ್ಪ.—ಹತ್ತು ವರ್ಷದವರೆಗೆ ಕೊಟ್ಟಿದ್ದೇವೆ. ದರ ಮಾತ್ರ ಐದು ವರ್ಷಕ್ಕೆ ಒಂದು ಸಾರಿ ಬದಲಾವಣೆ ಮಾಡುತ್ತೇವೆ.

Sri J. B. MALLARADHYA.—In the interest of the development of Ply-wood Industry this must be considered. Thay have got to invest Rs. 50 lakhs. Mysore can earn a lot of money from that industry. If you restrict the contract for 5 years or 3 years and raise the rate by one rupee, you will not be encouraging the Industry.

Sri H. S. RUDRAPPA.—I do not think we have given them at a higher rate than the market rate.

Sri J. B. MALLARADHYA.—I am not bothered about the rate. I am bothered about long lease so that the industry might stabilise itself. You may charge them Rs. 1-8-0. I am not bothered about it. It is a long term policy. 'In all the western countries where this Industry is being developed they have got contracts for 15 to 20 years. I am not bothered about what rate you charge. In the interest of the industry, it must be a long lease.

ಶ್ರೀ ಎಚ್. ಎಸ್. ರುದ್ರಪ್ಪ.—ಹತ್ತು ವರ್ಷಗಳ ತನಕ ಈ ಮಾಲನ್ನು ಒದಗಿಸಬೇಕೆಂಬ ಒಂದು agreement ಆಗಿದೆ. ಅವರೂ ಕೂಡ ಆ ಒಪ್ಪಂದಕ್ಕೆ ಒಡಂಬಟ್ಟಿದ್ದಾರೆ.

ಆಮೇಲೆ ಇನ್ನೊಂದು ವಿಷಯ ಹೇಳಿದರು. ಯಾವುದೂ ಇನಾಮೂ ಇಲ್ಲ, ಮರವೂ ಇಲ್ಲ, ಅಂಥ ಕಡೆ ಲೈಸೆನ್ಸ್ ಕೊಟ್ಟಿದ್ದಾರೆ ಎಂದು ಹೇಳಿದರು. ಮರವೇ ಇಲ್ಲದೆ ಲೈಸೆನ್ಸ್ ಕೊಡುವುದುಂಟೇ? ಖಾಸಗಿಯವರು ತಮ್ಮಲ್ಲಿ ಸ್ವಲ್ಪ ಇದ್ದರೂ ಹೆಚ್ಚಿಗೆ ಇದೆಯೆಂದು ಹೇಳಿ, ಹೆಚ್ಚಿಗೆ ಬೇಕಾದ್ದನ್ನು ಮಗ್ಗುಲ ಅರಣ್ಯದಿಂದ ತಂದು ತುಂಬಿಕೊಳ್ಳುವುದು ಒಂದು ಪದ್ಧತಿಯಾಗಿದೆಯೆಂದು ಹೇಳಬಯಸುತ್ತೇನೆ.

ಒಬ್ಬ ಸದಸ್ಯರು.—ಒಂದು ಸಾವಿರ ಮೂಟೆ ಕಳವಿನಲ್ಲಿ ಹೋಗುತ್ತಿದ್ದುದನ್ನು ಹಿಡಿದುಕೊಟ್ಟರು. ತಾವೇನು ಮಾಡಿದಿರಿ?

ಶ್ರೀ ಎಚ್. ಎಸ್. ರುದ್ರಪ್ಪ.—ರೆವಿನ್ಯೂ ಇಲಾಖೆಯವರು ಕಾರ್ಯಕ್ರಮ ನಡೆಸುತ್ತಿದ್ದಾರೆ.

ಶ್ರೀ ದೇಶಾಯಿಯವರು ಕೆಲವು ವಿಷಯಗಳನ್ನು ಹೇಳಿದ್ದಾರೆ. ಕಲ್ಲನ್ನು ಸಾಗಿಸುವುದಕ್ಕೆ ಎಂಟು ಆಣೆಯಂತೆ ವಸೂಲು ಮಾಡುತ್ತಿದ್ದಾರೆಂದು ಹೇಳಿದರು. ನಾನು ಸಂಬಂಧಪಟ್ಟವರನ್ನು ವಿಚಾರಿಸಿ ತಿಳಿದಿದ್ದರಲ್ಲಿ ಅದನ್ನು ಕಡಮೆ ಮಾಡಲಾಗಿದೆಯೆಂದು ಹೇಳಿದ್ದಾರೆ. ಬಿಜಾಪುರದಲ್ಲಿ ಕಾಡುಗಳು ಬಹಳ ಕಡಮೆಯೆಂದು ಹೇಳಿದ್ದಾರೆ. ಅದನ್ನು ಈಗಾಗಲೇ ಮನಗಂಡು ಅದನ್ನು ಹೆಚ್ಚಿಗೆ ಮಾಡುವುದಕ್ಕೆ ಏನೇನು ಕಾರ್ಯಕ್ರಮ ಬೇಕೋ ಅದನ್ನು ಮಾಡಿದ್ದಾರೆಂದು ಹೇಳಬಯಸುತ್ತೇನೆ. ಬೆಳಗಾಂ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ತಲೆಹೊರೆ ಕಟ್ಟಿಗೆ ತರುವವರಿಗೆ ತೊಂದರೆ ಮಾಡುತ್ತಿದ್ದಾರೆಂದು ಹೇಳಿದರು. ನನಗೆ ತಿಳಿದ ಮಟ್ಟಿಗೆ ಹಿಂದೆ ಏನೇನು ರಿಯಾಯಿತಿಯಿತ್ತೋ ಅದನ್ನು ಯಾವುದನ್ನೂ ಬದಲಾವಣೆ ಮಾಡಿಲ್ಲ. ಈಗಲೂ ತೊಂದರೆಯಿದ್ದರೆ ಕಾನೂನಿನಲ್ಲಿ ಏನಿದೆಯೋ ನೋಡಿ ಅದರಂತೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀಮಾನ್ ಮಹದೇವಪ್ಪನವರು ನಂಜನಗೂಡಿನ ಕಾಡಿನಲ್ಲಿ ಗಂಧದ ಮರವನ್ನು ಕಡಿತಲೆ ಮಾಡುತ್ತಾರೆಂದು ಹೇಳಿದ್ದಾರೆ. ಅದು private forest ಆಗಿದೆ. ಅವರಿಗೆ ಗಂಧವನ್ನು ತೆಗೆಯುವುದಕ್ಕೆ ಸ್ವಂತ ಹಕ್ಕಿದೆಯೆಂದು ಗೊತ್ತಾಗಿದೆ. ಅದರಮೇಲೆ ಅದು ತಪ್ಪೆಂದು ಹೇಳಿ ಅರ್ಜಿ ಬಂದುದರಮೇಲೆ ತನಿಖೆ ನಡೆಯುತ್ತಿದೆ. ಅಂತೂ controvertial ವಿಷಯವಾಗಿದೆ. ಇಂಡಿಯಾ ಸರ್ಕಾರದವರು ಕೊಟ್ಟಿದ್ದಾರೆಂದು ಅವರು ಹೇಳುತ್ತಿದ್ದಾರೆ. ಕೆಲವರು ಅದು ತಪ್ಪೆಂದು ವಾದ ಮಾಡಿದ್ದರಮೇಲೆ ಪುನಃ ಪರಿಶೀಲನೆ ನಡೆಯಿತು. ಆಖೈರಿನಲ್ಲಿ ಅವರಿಗೆ ಹಕ್ಕಿದೆಯೆಂದು ಗೊತ್ತಾಗಿದೆ.

ಒಬ್ಬ ಸದಸ್ಯರು.—ಹೊನಕೋಟೆ ತಾಲ್ಲೂಕಿನಲ್ಲಿ ಹಿಡಿದುಕೊಟ್ಟ ಕೇಸು ಏನಾಯಿತು?

ಶ್ರೀ ಎಚ್. ಎಸ್. ರುದ್ರಪ್ಪ.—ತನಿಖೆ ನಡೆಯುತ್ತಿದೆ.

ಶ್ರೀಮಾನ್ ಬದರೀ ನಾರಾಯಣರವರು ಮಲೆನಾಡಿನಲ್ಲಿ ಕೂಡ ಈಚೆಗೆ ಕಾಡು ಕಡಮೆಯಾಗಿದೆ, ಅಂಥ ದರಲ್ಲಿ ಅಲ್ಲಿಗೆ ಕಡಮೆ ಹಣ ಒದಗಿಸಿದ್ದೀರೆಂದು ಹೇಳಿದರು. ಮಲೆನಾಡಿನಲ್ಲಿ ತೇಗದ ಮರವನ್ನು ಹೆಚ್ಚಿಗೆ ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಯೇ ಹೊರತು ಬಾಕಿ ಮರಗಳನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಿಲ್ಲ. ಈಚೆಗೆ ಬಾಕಿ ಮರಗಳನ್ನು ಕೂಡ ಬೆಳೆಯಿಸುವ ಅವಶ್ಯಕತೆ ಕಂಡುಬಂದಿರುವುದರಿಂದ ಅಲ್ಲಿಗೂ ಹೆಚ್ಚಿಗೆ ಹಣ ಒದಗಿಸಲು ಪ್ರಯತ್ನ ಮಾಡುತ್ತಿದ್ದೇವೆ.

ಶರಾವತಿ ಮುಳುಗಡೆ ಪ್ರದೇಶದಲ್ಲಿ ಕಡಿತಲೆ ಮಾಡುತ್ತಿದ್ದಾರೆಂದು ಹೇಳಿದರು. ಅದನ್ನು ಕಾನೂನು ಪ್ರಕಾರ ಮಾಡುತ್ತಿದ್ದೇವೆ. 1956-57 ನೆಯ ಸಾಲಿನಲ್ಲಿ ಅರಣ್ಯ ಶಾಖೆಯವರು ಅದನ್ನು ಟೆಂಡರು ಕರೆದು ಹರಾಜು ಮಾಡಿದ್ದಾರೆ. ಹೆಚ್ಚಿಗೆ ಯಾರು ಕೊಟ್ಟಿದ್ದರೋ ಅವರಿಗೇ ಕೊಟ್ಟಿದ್ದಾರೆ. ಈಹೊತ್ತು ಅದೇನೋ ಕಡಮೆಯೆಂದು ಕಾಣಬಹುದು. ಆದರೆ ಅವೊತ್ತಿನ ದರದಲ್ಲಿ ನಮಗೆ ಬಂದ ಬೆಲೆ ನರಿಯಾಗಿಯೇ ಇದೆಯೆಂದು ಹೇಳಬಯಸುತ್ತೇನೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—24 ಸಾವಿರ ಎಕರೆ ಒಬ್ಬರಿಗೇ ಕೊಟ್ಟಿದ್ದಾರೆ. ಇದರಲ್ಲಿ ಸರ್ಕಾರದವರು ಒಂದು ವಿಷಯವನ್ನು ಯೋಚನೆ ಮಾಡಬೇಕು. ಒಬ್ಬ ಮನುಷ್ಯ ಯಾವಾಗಲಾದರೂ ಆಗಲಿ ಇತರರಿಗಿಂತ ನಾಲ್ಕಾಣೆ ಕಡಮೆಗೆ ಕೆಲಸ ಮಾಡಬೇಕಾದರೆ ಅದರೊಳಗೆ ಏನೋ ಇದೆ ಎಂದು ಯೋಚನೆ ಮಾಡಬೇಕು.

ಶ್ರೀ ಎಚ್. ಎಸ್. ರುದ್ರಪ್ಪ.—Open tender call for ಮಾಡಿ ಅದರ ಪ್ರಕಾರ ಕೊಟ್ಟಿದೆ. ಹೀಗೆ ಇರುವುದರಿಂದ ಮೋಸವಿದೆ ಎಂದು ಹೇಗೆ ಹೇಳುವುದಕ್ಕೆ ಆಗುತ್ತದೆ?

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಟೆಂಡರ್‌ನಲ್ಲಿ ಮೋಸವಿಲ್ಲ. ಆದರೆ ಕಾಡು ಕಡಿಯುವುದರಲ್ಲಿ ಮಾತ್ರ ಇಲಾಖೆಗೆ ಅನ್ಯಾಯವಾಗುತ್ತಿದೆ.

ಶ್ರೀ ಎಚ್. ಎಸ್. ರುದ್ರಪ್ಪ.—ಮುಳುಗಡೆಯಾಗುವ ಪ್ರದೇಶದಲ್ಲಿನ ಕಾಡನ್ನು ಕಡಿಯಲು ಕೊಟ್ಟಿದೆ. ಅದು ಇನ್ನೂ ಅಳತೆಯಾಗಿಲ್ಲ. ವಿವಾದಾಸ್ಪದವಾಗಿದೆ. ಕಡಿದಿರುವ ಕಾಡು ಸ್ಟೇಟ್ ಫಾರೆಸ್ಟಿಗೆ ಸೇರಬೇಕೋ ಅಥವ ಅವರಿಗೆ ಕೊಟ್ಟಿರುವ ಜಾಗದಲ್ಲಿ ಸೇರುವುದೋ ಎಂಬುದು ವಿವಾದಾಸ್ಪದವಾಗಿರುವುದರಿಂದ ಅಳತೆ ಮಾಡುವುದಕ್ಕೆ ಕಳುಹಿಸಿದ್ದೇವೆ. First plan ಪ್ರಕಾರ ಎಷ್ಟು ಮುಳುಗಡೆಯಾಗುತ್ತದೆ, ಎಷ್ಟು ಕೊಟ್ಟಿದ್ದೀರಿ ಎಂದು ಕೇಳಿದ್ದೇವೆ.

ಶ್ರೀಮಾನ್ ಪುಟ್ಟೇಗೌಡರು ಹೇಳಿದರು ಅಳಲೇಕಾಯಿಯಂಥ ಸಣ್ಣ ಬಾಟಿನಲ್ಲಿ ಜನಗಳೇನಾದರೂ ತಮಗೆ ಸೇರಿದ ಮರಗಳಲ್ಲಿ ಕಾಯನ್ನು ಉದುರಿಸಲು ಲೈಸೆನ್ಸ್ ತೆಗೆದುಕೊಳ್ಳುವುದಕ್ಕೆ ಹೋದರೆ ಬಹಳ ತೊಂದರೆಯಾಗುತ್ತಿದೆ ಎಂದು. ನಾನು ಅದನ್ನು ತನಿಖೆಮಾಡಿ ನೋಡುತ್ತೇನೆ. ಅನೇಕ ಸದಸ್ಯರು ಹೇಳಿದ ಹಾಗೆ ಅವರ ಮರಗಳಲ್ಲಿರುವ ಕಾಯಿಗಳನ್ನು ಉದುರಿಸಿಕೊಂಡರೆ ನಮಗೆ ನಷ್ಟವಿಲ್ಲ. ಆದರೆ ಅವರ ಮರಗಳಿಗೆ ಲೈಸೆನ್ಸ್ ತೆಗೆದುಕೊಂಡು, ಸರ್ಕಾರಕ್ಕೆ ಸೇರಿದ ಮರಗಳಲ್ಲಿ ಉದುರಿಸಬಹುದೆಂಬ ಭಯವಿದೆ. ಒಂದು ಕಡೆ ನಮಗೆ ಭಯವಿದ್ದರೆ ಇನ್ನೊಂದು ಕಡೆ ಅವರಿಗೆ ಅನ್ಯಾಯವಾಗಬಹುದು.

ಶ್ರೀ ಪುಟ್ಟೇಗೌಡ.—ಅರಣ್ಯ ಇಲಾಖೆಯವರು ಉದುರಿಸಿಕೊಂಡಮೇಲೆ ಜನರಿಗೆ ಪರ್ಮಿಷ್ ಕೊಡಬಹುದು ಸ್ವಾಮಿ.

ಶ್ರೀ ಎಚ್. ಎಸ್. ರುದ್ರಪ್ಪ.—ಮಾನ್ಯ ಸದಸ್ಯರು ಹೇಳಿದುದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀಮಾನ್ ಪುಟ್ಟೇಗೌಡರು ಅರಕಲಗೂಡಿನಲ್ಲಿ ಕಡಮೆ ಹರಾಜು ಮಾಡಿದ್ದಾರೆಂದು ಹೇಳಿದರು. ಅವರು ನನಗೆ ಒಂದು ಕಾಗದವನ್ನು ಸಹ ಬರೆದಿದ್ದಾರೆ. ಅದನ್ನು ತನಿಖೆ ಮಾಡಿದ್ದರ ನೆನಪು ನನಗಿದೆ. ಒಂದು ವೇಳೆ ಹರಾಜು ಖಾಯಂ ಆಗಿದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ. ಅದೇ ರೀತಿಯಾಗಿದೆ ಎಂದು ಕಾಣುತ್ತದೆ. ಪುನಃ ರಿಕಾರ್ಡ್ ತರಿಸಿ ನೋಡುತ್ತೇನೆ.

ಶ್ರೀಮಾನ್ ವೀರಪ್ಪನವರು Soil Survey Scheme ನಲ್ಲಿ ತರಬೇತು ಹೊಂದುವವರು ಏನು ಮಾಡುತ್ತಿದ್ದಾರೆ ಎಂದು ಕೇಳಿದ್ದಾರೆ. Soil conservation scheme ನಲ್ಲಿ ಅರಣ್ಯ ಇಲಾಖೆಯವರಿಗೆ ತರಬೇತು ಕೊಡುತ್ತಿದ್ದೇವೆ. ಎಲ್ಲಿ steep slopes ಇರುತ್ತದೆ, ಎಲ್ಲಿ ಝರಿ ಇರುತ್ತದೆ, ಎಲ್ಲೆಲ್ಲಿ ಯಾವ ರೀತಿಯ ಅಡವಿಯನ್ನು ಬೆಳೆಸಿದರೆ ಉತ್ತಮ ಎಂಬ ವಿಷಯದಲ್ಲಿ ತರಬೇತು ಕೊಡುತ್ತೇವೆ. ಅರಣ್ಯ ಇಲಾಖೆಯಲ್ಲಿರುವವರು ಈ ವಿಷಯದಲ್ಲಿ ಯಾರು ತರಬೇತು ತೆಗೆದುಕೊಂಡು ಬಂದಿದ್ದಾರೆ, ಅವರನ್ನು ಈ ಕೆಲಸಕ್ಕೆ ನೇಮಕ ಮಾಡಿದ್ದೇವೆ.

ಶ್ರೀ ವೈ. ವೀರಪ್ಪ.—ಸರ್ವೇಸಾಮಾನ್ಯವಾಗಿ ನೋಡಬೇಕು. ಪರದೇಶಗಳಿಗೆ ಜನರನ್ನು ಕಳುಹಿಸಿ, ಬೇಕಾದಷ್ಟು ದುಡ್ಡು ಖರ್ಚುಮಾಡಿ ತರಬೇತು ಮಾಡುವುದು ಅನಾವಶ್ಯಕವೆಂದು ಹೇಳುತ್ತಿದ್ದೇನೆ.

ಶ್ರೀ ಎಚ್. ಎಸ್. ರುದ್ರಪ್ಪ.—ಪರದೇಶಗಳಿಗೆ ಯಾರೂ ಹೋಗುತ್ತಿಲ್ಲ. ನಮ್ಮಲ್ಲಿಯೇ ಟ್ರೈನಿಂಗ್ ಕೊಡುತ್ತಿದ್ದೇವೆ.

ಗುಡ್ಡಗಾಡುಗಳಲ್ಲಿ, ಬಂಡೆಗಳ ಮೇಲೆ ಎಲ್ಲೂ ಮಣ್ಣು ಇದೆ ಅಲ್ಲಿ ಕಾಡನ್ನು ಬೆಳೆಸುವ ವಿಚಾರದಲ್ಲಿ ಟ್ರೈನಿಂಗ್ ತೆಗೆದುಕೊಂಡು ಬಂದರೆ ಉತ್ತಮವೆಂದು ಕಳುಹಿಸಿದ್ದೇವೆ. ಅದರಿಂದ ಹೆಚ್ಚು ನಷ್ಟವಾಗುವುದಿಲ್ಲ. ಉತ್ತಮವಾದ ತರಬೇತು ಸಿಕ್ಕುತ್ತದೆ. ಹೀಗೆ ಇಂಡಿಯಾ ದೇಶದಲ್ಲೆಲ್ಲ ಮಾಡುತ್ತಿದ್ದಾರೆ. ಒಳ್ಳೆಯ ಜಮೀನಿನಲ್ಲಿ ಅಡವಿಯನ್ನು ಬೆಳೆಸುವುದು ಬುದ್ಧಿವಂತಿಕೆಯಲ್ಲ; ಸಾಧಾರಣ ಜಮೀನಿನಲ್ಲಿ, ಗುಡ್ಡಗಾಡಿನಲ್ಲಿ ಬೆಳೆಸತಕ್ಕದ್ದು ಉತ್ತಮವಾದುದು. ಆದುದರಿಂದ ಗುಡ್ಡಗಾಡುಗಳಲ್ಲಿ ಗಿಡಗಳನ್ನು ಬೆಳೆಸುವ ವಿಚಾರದಲ್ಲಿ ತರಬೇತು ಕೊಡುವುದು ಉತ್ತಮವಾದುದೆಂದು ಕಾಣುತ್ತದೆ.

ಶ್ರೀಮಾನ್ ವೆಂಕಟೇಗೌಡರು ಮತ್ತು ಶ್ರೀಮತಿ ಕೆಂಪಮ್ಮನವರು, ಕೊಳ್ಳೆಗಾಲದಲ್ಲಿ ಅಡವಿ ಜಾಸ್ತಿ ಇದ್ದರೂ, ಸೌದೆ ಅಭಾವವಿದೆ ಎಂದು ಹೇಳಿದರು. ಬಹುಶಃ ಇದು ಕಾರಣಾಂತರದಿಂದ ಆಗಿದೆ. ಅಲ್ಲಿ ಹರಾಜು ಆಗಿ, ಕನ್‌ಫ್‌ಮರ್ಡ್ ಆಗುವುದರಲ್ಲಿ ಸ್ವಲ್ಪ ತಡವಾಗಿರಬಹುದು. ಆದ್ದರಿಂದ ಸೌದೆ ಅಭಾವ ತೋರಿದೆ ಎಂದು ತಿಳಿದು ಬಂದಿದೆ. ಅದನ್ನು ಸರಿಮಾಡಿದ್ದೇವೆ.

ಶ್ರೀ ಲಿಂಗೇಗೌಡರು ಕನಕಪುರ ತಾಲ್ಲೂಕಿನಲ್ಲಿ ಅರಣ್ಯಸಂಪತ್ತನ್ನು ದುರುಪಯೋಗಮಾಡುತ್ತಾ ಇದ್ದಾರೆ ಎಂದು ಹೇಳಿದರು. ನನ್ನ ವಿಚಾರವನ್ನೂ ಸ್ವಲ್ಪ ಹೇಳಿರುವುದರಿಂದ, ನನಗೆ ಅಲ್ಲಿಯ ವಿಷಯ ಸ್ವಲ್ಪ ಗೊತ್ತು. ದುರುಪಯೋಗವಾಗುತ್ತಿದುದನ್ನು ಸರಿಪಡಿಸುವುದಕ್ಕೆ ಪ್ರಯತ್ನಪಟ್ಟಿದೆ. ಇದರಿಂದ ಅನೇಕರಿಗೆ ತೊಂದರೆಯಾಗಿದೆ. ಇದರಲ್ಲಿ ಸ್ವಲ್ಪ ಗ್ರೂಪ್‌ಗಳೂ ಇವೆ. ಆದರೆ ದುರುಪಯೋಗಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಬಂದೋಬಸ್ತು ಮಾಡಿಸುತ್ತೇವೆ. ಫಾರೆಸ್ಟ್ ವೆಲ್ತ್ ಲೂಟ್ ಆಗುತ್ತಿದುದನ್ನು ತಪಬಂದಿಗೆ ತಂದಿದ್ದೇವೆ. ಇದನ್ನು ತಪಬಂದಿಗೆ ತರುವುದಕ್ಕೆ ಸರ್ಕಾರದವರು ಕೆಲವು ಜನರನ್ನು ಉಪಯೋಗಿಸಿಕೊಂಡಿದ್ದಾರೆ. ಹಾಗೆ ಸರ್ಕಾರದವರು ಯಾರು ಯಾರನ್ನು ಉಪಯೋಗಿಸಿಕೊಂಡಿದ್ದಾರೋ, ಅವರು ಜೀವದ ಮೇಲೆ ಹಂಗುತೊರೆದು ಸರ್ಕಾರಕ್ಕೆ ಸಹಾಯ ಮಾಡಿದ್ದಾರೆ. ಪಾರ್ಟಿಯಿಂದಲೇ ಆಗಲಿ, ಎಲ್ಲಿಂದಲೇ ಆಗಲಿ, ಯಾರು ಅರಣ್ಯಸಂಪತ್ತನ್ನು ಉಳಿಸುವುದಕ್ಕೆ ಬರುತ್ತಾರೋ, ಅವರಿಗೆ ಬೆಂಬಲ ಕೊಡುತ್ತೇವೆ. ನಾವು ಬೆಂಬಲಕೊಡದಿದ್ದರೆ, ಅವರು ಹೇಗೆ ಸತ್ಯಾಂಶವನ್ನು ಹೊರಗೆಡಹಿ ಸಹಾಯಮಾಡುತ್ತಾರೆ.

ಶ್ರೀ ಲಿಂಗೇಗೌಡರು ಒಂದು ಮಾತು ಹೇಳಿದರು: ಒಂದುಗಾಡಿ ಸೌದೆಗೂ ಕಾಂಪೌಂಡ್‌ಮಾಡಿಕೊಳ್ಳುವುದಕ್ಕೆ 25 ರೂಪಾಯಿ ಹಾಕಿದ್ದಾರೆ; ಒಂದು ಲಾರಿ ಸೌದೆಗೂ 25ರೂಪಾಯಿ ಹಾಕಿದ್ದಾರೆ ಎಂದು. ಇದನ್ನು ಕೂಡಲೆ ವಿಚಾರಮಾಡುತ್ತೇವೆ. ಇಂತಹ ಡಿಸ್ಕ್ರಿಮಿನೇಷ್ಟ್ ಆಗಬಾರದು. ಇದನ್ನು ತನಿಖೆಮಾಡಿ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಸೌತ್ ಕೆನರಾದಲ್ಲಿ ಅಡವಿ ಬಹಳವಿದ್ದರೂ, ಇಂಡಸ್ಟ್ರೀಸ್ (ಕಾರ್ಖಾನೆಗಳು) ಇಲ್ಲ, ಯಾವುವನ್ನಾದರೂ ಪ್ರಾರಂಭಮಾಡಬೇಕೆಂದು ಶ್ರೀ ಶ್ರೀನಿವಾಸಶೆಟ್ಟರು ಹೇಳಿದರು. ಲುಕ್ಸಾನುಮಾಡಿಕೊಂಡು ಯಾವ ಕಾರ್ಖಾನೆಯನ್ನೂ ನಡೆಸುವುದಕ್ಕಾಗುವುದಿಲ್ಲ. ಸರ್ಕಾರದ ಮತ್ತು ಸಾರ್ವಜನಿಕರ ದೃಷ್ಟಿಯಿಂದ ಒಳ್ಳೆಯದು ಎಂದು ಕಂಡರೆ ಪ್ರಾರಂಭಮಾಡುತ್ತೇವೆ.

ಫಾರೆಸ್ಟ್ ಇಲಾಖೆಯಿಂದ ಸಸಿಗಳನ್ನು ದುಬಾರಿ ಖರೀದಿಗೆ ಕೊಡುತ್ತಿದ್ದಾರೆಂದು ಶ್ರೀ ಲಿಂಗಾರೆಡ್ಡಿಯವರು ಹೇಳಿದರು. ಹತ್ತುರೂಪಾಯಿಗೆ ಒಂದು ಸಾವಿರ ಸಸಿಗಳನ್ನು ಕೊಡುತ್ತಿದ್ದಾರೆ, ಎಂದರೆ ಒಂದು ರೂಪಾಯಿಗೆ ಒಂದು ನೂರು ಸಸಿಯಾಯಿತು. ಇದರಿಂದ ಇಲಾಖೆಗೆ ಲಾಭಬರುತ್ತಿಲ್ಲ. ಬಹುಶಃ ಇದನ್ನು ಅಷ್ಟು ದುಬಾರಿ ಎಂದು ಪರಿಗಣಿಸುವುದಕ್ಕಾಗುವುದಿಲ್ಲ. ಫ್ಯೂಯಲ್ ಪ್ಲಾಂಟೇಷ್ಟ್ ಮಾಡುವವರು ಸಸಿಗ

ಳನ್ನು ತೆಗೆದುಕೊಂಡುಹೋಗುತ್ತಾರೆ. ಬಾಕಿಯವರಿಗೆ ಮುಫತ್ತು ಕೊಡುತ್ತಾ ಇದ್ದೇವೆ. ಜನಬೇಕಾದಷ್ಟು ತೆಗೆದುಕೊಂಡುಹೋಗುತ್ತಾ ಇದ್ದಾರೆ. ಅವರು ಜಾಸ್ತಿ ಖರೀದಿ ಎಂದು ಕಂಪ್ಲೇನ್ ಮಾಡಿಲ್ಲ. ಅದಲ್ಲದೆ ನಮಗೆ ನಂಬಳ, ಕಾವಲು ಇತ್ಯಾದಿಗಳಿಗೆ ಖರ್ಚಿರುವುದರಿಂದ, ಲಾಭ ಬರುವುದಿಲ್ಲ. ನೀವು ಇನ್ನೂ ಕಡಮೆ ಮಾಡಬೇಕೆಂದರೆ, ಮಾಡುವುದಕ್ಕೆ ತಯಾರಿದ್ದೇವೆ.

ಫಾರೆಸ್ಟ್ ಕಾಲೇಜ್‌ಮಾಡಿ ಎಂದು ಸಲಹೆ ಬಂದಿದೆ. ಅದು ಅನಾವಶ್ಯಕ. ಅದಕ್ಕೆ ಬಹಳ ಖರ್ಚು ಬೀಳುತ್ತದೆ. ನಮಗೆ ಬೇಕಾದಂಥ ಜನ ಬಹಳ ಕಡಮೆ. ಬಹುಶಃ ನಾವು ನಾಲ್ಕು-ಐದು ಜನರನ್ನು ತರಬೇತುಮಾಡಬೇಕಾಗಬಹುದು. ಕೊಯಮತ್ತೂರು ಫಾರೆಸ್ಟ್ ಟ್ರೇನಿಂಗ್ ಕಾಲೇಜಿನಲ್ಲಿ ನಮ್ಮವರಿಗೂ ಟ್ರೇನಿಂಗ್ ಆಗುತ್ತಾ ಇದೆ. ಈಗ ನಾವು ಒಂದು ಕಾಲೇಜನ್ನು ತೆರೆದರೆ . . .

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಈಗಿರುವ ಕಾಲೇಜಿನಲ್ಲೇ ಈ ನಂಬಂಧವಾದ ಒಂದು ಸೆಕ್ಷನ್ ತೆರೆಯುವುದಕ್ಕಾಗುವುದಿಲ್ಲವೇ?

ಶ್ರೀ ಎಚ್. ಎಸ್. ರುದ್ರಪ್ಪ.—ಅದಾಗುವುದಿಲ್ಲ. ಯಾವುದೇ ಕಾಲೇಜಿನಲ್ಲಿ ಈ ಸೆಕ್ಷನ್ ತೆರೆಯುವುದಕ್ಕಾಗುವುದಿಲ್ಲ. ಉತ್ತಮವಾದ ಶಿಕ್ಷಣ ದೊರೆಯಬೇಕಾದದ್ದು ಆವಶ್ಯಕ. ಆದ್ದರಿಂದ ಇದನ್ನೆಲ್ಲಾ ಯೋಚನೆ ಮಾಡಿ ಕೊಯಮತ್ತೂರು ಕಾಲೇಜಿನಲ್ಲಿ ಉತ್ತಮವಾದ ತರಬೇತು ದೊರೆಯುತ್ತದೆ, ಅಲ್ಲಿಗೇ ಕಳುಹಿಸುವುದು ಸೂಕ್ತ ಎಂದು ನಿರ್ಧಾರಕ್ಕೆ ಬಂದಿದ್ದೇವೆ. ನಾವು ಇಲ್ಲಿ ಕಾಲೇಜನ್ನು ಸ್ಥಾಪನೆಮಾಡಿದರೆ ಈಗೇನು ನಮಗೆ ಖರ್ಚಾಗುತ್ತಿದೆಯೋ ಅದಕ್ಕೆ ಐದರಷ್ಟು ಖರ್ಚಾಗುತ್ತದೆ. ಆದ್ದರಿಂದ ಈಗ ಹೊಸದಾಗಿ ಕಾಲೇಜನ್ನು ಪ್ರಾರಂಭಿಸುವುದು ಸೂಕ್ತವಲ್ಲವೆಂದು ಕಾಣುತ್ತದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಎಸ್ಟಿಮೇಟ್ ಎಷ್ಟಾಗುತ್ತದೆ?

ಶ್ರೀ ಎಚ್. ಎಸ್. ರುದ್ರಪ್ಪ.—ನನಗೆ ತಿಳಿದಹಾಗೆ ವರ್ಷ ಒಂದಕ್ಕೆ ಸುಮಾರು ಎರಡುಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ಈಗ ತರಬೇತು ಮಾಡುವುದಕ್ಕೆ ವರ್ಷಕ್ಕೆ 20ಸಾವಿರ ರೂಪಾಯಿಗಳಿಗಿಂತ ಹೆಚ್ಚಾಗಿ ನಮಗೆ ಖರ್ಚಾಗುವುದಿಲ್ಲ.

ಆಮೇಲೆ ಕೆಡ್ಡಾ ಆಪರೇಷನ್ ನಡೆಸಬೇಕೆಂದು ಶ್ರೀಮಾನ್ ಲಿಂಗಾರೆಡ್ಡಿಯವರು ಹೇಳಿದರು. ಬಹುಶಃ ಕೆಡ್ಡಾ ಆಪರೇಷನ್‌ನಿಂದ ಲಾಭ ಬರುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಈ ದಿವಸ ಕೆಡ್ಡಾ ಆಪರೇಷನ್ ಮಾಡುವುದಕ್ಕೆ ಆನೆಗಳು ಹೆಚ್ಚಾಗಿಂಬೇಕು, ಜನರು ತಮಗೆ ಅದರಿಂದ ವಿಪರೀತ ನಷ್ಟವಾಗುತ್ತದೆ, ತೊಂದರೆಯಾಗುತ್ತದೆ ಎಂದು ಹೇಳುತ್ತಿರಬೇಕು. ಆ ತರಹ ಸೂಚನೆಯೇನೂ ಇಲ್ಲ. ಈಗಿರತಕ್ಕ ವಿಧಾನದಿಂದಲೇ ಪ್ರತಿವರ್ಷ 10-15 ಆನೆಗಳನ್ನು ಹಿಡಿಯುತ್ತಿದ್ದಾರೆ. ಆನೆಗಳಿಂದ ಈ ದಿವಸ ನಮಗೆ ತೊಂದರೆಯಾಗಿಲ್ಲದಿರುವಾಗ ಏಕೆ ಹೆಚ್ಚಾಗಿ ಹಿಡಿಯಬೇಕು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಓಟ್ಟಿನಲ್ಲಿ ಬೇಕಾದವರು ಬಂದಾಗ ಮಾತ್ರ ಕೆಡ್ಡಾ ಆಪರೇಷನ್ ಆಗುತ್ತದೆ.

ಶ್ರೀ ಎಚ್. ಎಸ್. ರುದ್ರಪ್ಪ.—ಅದಕ್ಕೆ ಸುಮಾರು ಎರಡುಲಕ್ಷ ರೂಪಾಯಿಗಳವರೆಗೆ ಖರ್ಚುಮಾಡಬೇಕು. ಆಮೇಲೆ ಆ ರೀತಿ ಖರ್ಚುಮಾಡುವುದು ಸರಿಯಲ್ಲ ಎಂದು ಈ ಸಭೆಯ ಟೀಕೆಗೆ ಒಳಗಾಗಬಾರದು ಎಂದು ಸುಮ್ಮನಿದ್ದೇವೆ.

ಶ್ರೀಮಾನ್ ವೆಂಕಟೇಗೌಡರು ಕೆಳದರ್ಜೆ ನೌಕರರಿಗೆ ಬಹಳ ಕಡಮೆ ನಂಬಳ ಕೊಡಲಾಗುತ್ತಿದೆಯೆಂದು ಹೇಳಿದರು. ಮೊನ್ನೆತಾನೆ ಜಾಸ್ತಿಮಾಡಿದ್ದೇವೆ. ಜಾಸ್ತಿ ಮಾಡಬೇಕೆಂಬುದೇ ನಮ್ಮ ಉದ್ದೇಶ, ಸಾಧ್ಯವಾದಾಗ ಮಾಡುತ್ತೇವೆ ಎಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ.

ಆಮೇಲೆ ಕಾಡು ಬಹಳವಾಗಿ ಹಾಳಾಗುತ್ತಿದೆ, ಸೌದೆಗೆ ಅಭಾವವಿದೆ ಎಂದು ಶ್ರೀ ವೆಂಕಟೇಗೌಡರು ಹೇಳಿದರು. ಈಗ ಬಹುಶಃ ಸೊಪ್ಪೆಟಿಗಳಿರುವ ಕಡೆ ತೊಂದರೆ ನಿವಾರಣೆಯಾಗಿರಬಹುದು. ಖಾಸಗಿಯವರು ಕೆಲವರು ಸೌದೆಯನ್ನು ದುಬಾರಿ ಧರದಲ್ಲಿ ಮಾರಿ ಲಾಭ ಮಾಡಿಕೊಳ್ಳುತ್ತಿದ್ದಾರೆ. ಆದರಿಂದ ಸೊಪ್ಪೆಟಿ ಸ್ಥಾಪಿಸಿ ರಿಯಾಯಿತಿ ದರದಲ್ಲಿ ಸೌದೆ ಒದಗಿಸಬಹುದು ಅದೇ ರೀತಿ ಈ ದಿವಸ ಮೈಸೂರಿನಲ್ಲಿ ಮಾಡುತ್ತಿದ್ದಾರೆ. ಅಲ್ಲಿ ಕಡಮೆದರದಲ್ಲಿ ಮಾರುತ್ತಿದ್ದಾರೆ. ಆ ರೀತಿ ಇತರ ಕಡೆಗಳಲ್ಲೂ ಮಾಡಬೇಕು.

ಆ ಮೇರೆ ಬಳಿಗಿರಿರಂಗನ ಬೆಟ್ಟದಲ್ಲಿ ರಾತ್ರಿವೇಳೆಯಲ್ಲಿ ಮಾಲು ಸಾಗುತ್ತಿದೆ, ತಡೆಗಟ್ಟಬೇಕು ಎಂದು ಸಲಹೆಮಾಡಿದ್ದಾರೆ, ಬಹಳ ಸಂತೋಷ. ಆ ಸಲಹೆಯನ್ನು ಪರಿಶೀಲಿಸಿ ತಕ್ಕ ಕ್ರಮಕೈಕೊಳ್ಳುತ್ತೇವೆ.

ಇನ್ನೂ ಅನೇಕ ವಿಷಯಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಬಹಳ ಅನುವಾದದಿಂದ ಕೆಲವು ಸಲಹೆಗಳು ಬಂದಿವೆ. ಅವನ್ನೆಲ್ಲಾ ಪರಿಶೀಲನೆಮಾಡಿ ಸೂಕ್ತವಾದ ವ್ಯವಸ್ಥೆಮಾಡಲು ಪ್ರಯತ್ನಿಸುತ್ತೇವೆಂದು ಅರಿಕೆ ಮಾಡುತ್ತೇನೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ಈಗ ಅರಣ್ಯಖಾತೆಯ ಚೀಫ್ ಕನ್ಸರ್ವೇಟರಿದ್ದಾರೆ, ತಾವು ಇದ್ದೀರಿ. ಗಂಧದ ಮರ ಖಾಸಗಿ ಜಮೀನುಗಳಲ್ಲಿದ್ದರೆ ಬೋನಸ್ ಕೊಡುತ್ತೀರಿ. ಅರಣ್ಯದಿಂದ ಅನೇಕವಾಗಿ ಗಂಧದಮರ ನಷ್ಟಗಳು ಆಗುತ್ತಿದೆ. ಪಹಣಿಲೆಕ್ಕದಲ್ಲಿ ನೋಡಿದರೆ ಖಾಸಗಿ ಜಮೀನುಗಳಲ್ಲಿ ಕೆಲವು ಕಡೆ ಗಂಧದಮರವಿಲ್ಲದಿದ್ದರೂ ಆ ಜಮೀನಿನಲ್ಲಿ ಗಂಧದಮರವಿತ್ತೆಂದು ಅರಣ್ಯದಿಂದ ತಂದು ತೋರಿಸಿ ಬೋನಸ್ ಕೆಲವರು ಪಡೆಯುತ್ತಿದ್ದಾರೆ. ಬೇಕಾದರೆ ಹಿಡಿದುಕೊಡುತ್ತೇನೆ. ಈ ವಿಚಾರದಲ್ಲಿ ಸೂಕ್ತಕ್ರಮ ಕೈಕೊಳ್ಳಬೇಕು.

Mr. SPEAKER.—The question is:

"That a sum not exceeding Rs. 1,83,97,000 be granted to the Government to defray the charges which will come in course of payment during the year ending 31st day of March 1959, in respect of 'Forest'."

The motion was adopted.

Mr. SPEAKER.—The question is:

"That a sum not exceeding Rs. 6,00,000 be granted to the Government to defray the charges which will come in course of payment during the year ending 31st day of March 1959, in respect of 'X. Forest—c. (1) Wood

(MR. SPEAKER)

Preservation Plant—Working Expenses and Seigniorage."

The motion was adopted.

Mr. SPEAKER.—The question is:

"That a sum not exceeding Rs. 29,35,000 be granted to the Government to defray the charges which will come in course of payment during the year ending 31st day of March 1959, in respect of 'Sales-Tax'."

The motion was adopted.

Mr. SPEAKER.—The House now adjourns and meets tomorrow at 1 P.M.

The House adjourned at Six Minutes past Seven of the Clock to meet again at One of the Clock on Tuesday, the 15th April 1958.

Karnataka State Archives,
(Departmental Library)
ಬೆಂ. ಮಟ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರತಿಯ ಕ್ರಮಾಂಕ Accession No. (B) 4764
ದಿನಾಂಕ Date.....

WD 995—GPB—900—27-9-58